ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಪುನರಾಯ್ಕೆ ಇಲ್ಲದ ಪ್ರವೃತ್ತಿಗಿಲ್ಲ ಕೊನೆ
ಬ್ರಹ್ಮೋಸ್ ಕ್ಷಿಪಣಿ ಪರೀಕ್ಷಾರ್ಥ ಉಡಾವಣೆ ಯಶಸ್ವಿ 9
‘ಪಾಕ್ ಸೇನೆಯದ್ದು ಲಜ್ಜೆಗೇಡಿತನ’ 8
ಡಿಕೆಶಿಗೆ ಒಕ್ಕಲಿಗ ಸ್ವಾಮೀಜಿಗಳ ಬೆಂಬಲ 4
‘ಪಕ್ಷದ ಸೋಲು ಮೋದಿ ಸೋಲಲ್ಲ’ 4

ಪಟ್ಟಕ್ಕೆ ಪಟ್ಟು: ಆಯ್ಕೆ ಕಗ್ಗಂಟು

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಾಧ್ಯವಾಗದ ಒಮ್ಮತ: ಸಿ.ಎಂ ಆಯ್ಕೆ ಹೊಣೆ ಖರ್ಗೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಪಟ್ಟಕ್ಕೆ ಪಟ್ಟು ಹಿಡಿದ ಕಾರಣ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕನ ಆಯ್ಕೆಗಾಗಿ ಭಾನುವಾರ ನಡೆದ ಸಭೆಯಲ್ಲಿ ಒಮ್ಮತದ ತೀರ್ಮಾನ ಸಾಧ್ಯವಾಗಿಲ್ಲ. ಹೀಗಾಗಿ, ಆಯ್ಕೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಿಡಲು ನಿರ್ಧರಿಸಲಾಗಿದೆ.

ವಸಂತ ನಗರದಲ್ಲಿರುವ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ಸಭೆ ನಡೆಯಿತು. ಖರ್ಗೆ ಅವರ ನಿರ್ದೇಶನದಂತೆ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶೀಲ್‌ಕುಮಾರ್ ಶಿಂದೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಸಿಂಗ್ ಮತ್ತು ಮಾಜಿ ಪ್ರಧಾನ ಕಾರ್ಯದರ್ಶಿ ದೀಪಕ್ ಬಾಬರಿಯಾ ವೀಕ್ಷಕರಾಗಿ ಬಂದಿದ್ದರು.

ಸಭೆಯ ಬಳಿಕ ಮಾತನಾಡಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ‘ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯನ್ನು ಎಐಸಿಸಿ ಅಧ್ಯಕ್ಷರಿಗೆ ಬಿಡುವ ಒಂದು ಸಾಲಿನ ನಿರ್ಣಯವನ್ನು ಸಿದ್ದರಾಮಯ್ಯ ಮಂಡಿಸಿದರು. ಆ ನಿರ್ಣಯವನ್ನು ಶಿವಕುಮಾರ್ ಸೇರಿ ಎಲ್ಲರೂ ಅನುಮೋದಿಸಿದರು’ ಎಂದರು.

‘ಎಐಸಿಸಿ ವೀಕ್ಷಕರು ಎಲ್ಲ ಶಾಸಕರಿಂದ ವೈಯಕ್ತಿಕವಾಗಿ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಆ ವರದಿಯನ್ನು ಮಲ್ಲಿಕಾರ್ಜುನ ಖರ್ಗೆ ಅವರಿಗೆ ವೀಕ್ಷಕರು ಸೋಮವಾರ ಸಲ್ಲಿಸಲಿದ್ದಾರೆ’ ಎಂದೂ ಅವರು ಹೇಳಿದರು. ಸಿಎಲ್‌ಪಿ ನಾಯಕ ಹುದ್ದೆಗೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರ ಪರವೂ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಸುಗಮ ಆಡಳಿತಕ್ಕೆ ಆಂತರಿಕವಾಗಿ ಸಿದ್ಧಪಡಿಸಿಕೊಂಡ ‘ಸೂತ್ರ’ದಂತೆ ಶಾಸಕಾಂಗ ಪಕ್ಷದ ನಾಯಕನಾಗಿ ಸಿದ್ದರಾಮಯ್ಯ ಅವರನ್ನು ವರಿಷ್ಠರು ಆಯ್ಕೆ ಮಾಡುವ ಸಾಧ್ಯತೆ ಹೆಚ್ಚಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ. ವಿಧಾನಸಭೆ ಚುನಾವಣೆಯಲ್ಲಿ 135 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿದೆ. ಅಲ್ಲದೆ, ಕಾಂಗ್ರೆಸ್ ಬೆಂಬಲಿತ ಕರ್ನಾಟಕ ಸರ್ವೋದಯ ಪಕ್ಷದಿಂದ ಮೇಲುಕೋಟೆ ಕ್ಷೇತ್ರದಿಂದ ಆಯ್ಕೆಯಾದ ದರ್ಶನ್ ಪುಟ್ಟಣ್ಣಯ್ಯ, ಪಕ್ಷೇತರ ಅಭ್ಯರ್ಥಿಯಾಗಿ ಹರಪನಹಳ್ಳಿಯಿಂದ ಗೆದ್ದಿರುವ ಲತಾ ಮಲ್ಲಿಕಾರ್ಜುನ ಮತ್ತು ಗೌರಿಬಿದನೂರು ಕ್ಷೇತ್ರದಿಂದ ಚುನಾಯಿತರಾಗಿರುವ ಪುಟ್ಟಸ್ವಾಮಿಗೌಡ ಅವರು ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದಾರೆ.

9ನೇ ಪುಟ ನೋಡಿ

ಬೆಂಗಳೂರಿನ ಶಾಂಗ್ರಿಲಾ ಹೋಟೆಲ್‌ನ ಮುಂಭಾಗದಲ್ಲಿ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬೆಂಬಲಿಗರು ತಮ್ಮ ನಾಯಕರ ಪರ ಭಾನುವಾರ ಘೋಷಣೆ ಕೂಗಿದರು –ಪ್ರಜಾವಾಣಿ ಚಿತ್ರ

ಸಿಎಲ್‌ಪಿ ಸಭೆಗೂ ಮೊದಲೇ ತೀರ್ಮಾನ?

ಸಿಎಲ್‌ಪಿ ಸಭೆ ಆರಂಭಕ್ಕೂ ಮೊದಲು ವೀಕ್ಷಕರ ಜೊತೆ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಮಾತುಕತೆ ನಡೆಸಿದರು. ಈ ವೇಳೆ ಮುಖ್ಯಮಂತ್ರಿ ಆಯ್ಕೆ ಬಿಕ್ಕಟ್ಟಿನ ಕುರಿತು ನಾಯಕರು ಚರ್ಚೆ ನಡೆಸಿದ್ದು, ಈ ವಿಷಯವನ್ನು ಹೈಕಮಾಂಡ್‌ಗೆ ಬಿಡಲು ನಿರ್ಧರಿಸಿದರು ಎಂದೂ ಮೂಲಗಳು ತಿಳಿಸಿವೆ. ಒಂದು ತಾಸಿನೊಳಗೆ ಸಿಎಲ್‌ಪಿ ಸಭೆ ಅಂತ್ಯವಾಯಿತು.

‘ಸಿದ್ದರಾಮಯ್ಯಗೆ ಮತ್ತೆ ಅವಕಾಶ ನೀಡಿ’

‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಹೈಕಮಾಂಡ್ ಮತ್ತೊಂದು ಅವಕಾಶ ಕಲ್ಪಿಸಬೇಕು’ ಎಂದು ನಗರದ ಕುರುಬರ ಸಂಘದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಕುರುಬ ಸಮಾಜದ ಮುಖಂಡರು ಒಕ್ಕೊರಲಿನಿಂದ ಆಗ್ರಹಿಸಿದರು.

ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಮಾತನಾಡಿ, ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಗದ್ದುಗೆಗೇರಲು ಕಾಂಗ್ರೆಸ್ ಹೈಕಮಾಂಡ್ ಅವಕಾಶ ನೀಡದಿದ್ದರೆ ಸಮಾಜವು ಮುಂದಿನ ನಿರ್ಧಾರ ಕೈಗೊಳ್ಳಲಿದೆ’ ಎಂದು ಎಚ್ಚರಿಸಿದರು.

ಒಕ್ಕಲಿಗ ಮಠಾಧೀಶರ ಒತ್ತಡ

ಡಿ.ಕೆ.ಶಿವಕುಮಾರ್ ಅವರನ್ನೇ ಮುಖ್ಯಮಂತ್ರಿ ಮಾಡಬೇಕು ಎಂದು ಒಕ್ಕಲಿಗ ಮಠಾಧೀಶರು ಮತ್ತು ಒಕ್ಕಲಿಗರ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ. ಭಾನುವಾರ ಆದಿಚುಂಚನಗಿರಿ ಮಠದ ಸಭಾಂಗಣದಲ್ಲಿ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಆಯೋಜಿಸಿದ್ದ ಸಭೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಅವರು, ‘ಪಕ್ಷವನ್ನು ಅಧಿಕಾರಕ್ಕೆ ತರಲು ಹಗಲಿರುಳು ಶ್ರಮಿಸಿರುವ ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು’ ಎಂದು ಒತ್ತಾಯಿಸಿದರು.

ಆಲೋಕ್ ಮೋಹನ್ ಹೊಸ ಡಿಜಿ–ಐಜಿಪಿ?

ಪ್ರವೀಣ್ ಸೂದ್ ಸಿಬಿಐ ನಿರ್ದೇಶಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಪ್ರವೀಣ್ ಸೂದ್ ಅವರು ಕೇಂದ್ರೀಯ ತನಿಖಾ ದಳದ (ಸಿಬಿಐ) ನೂತನ ನಿರ್ದೇಶಕರಾಗಿ ನೇಮಕಗೊಂಡಿದ್ದು, ಮೇ ಕೊನೆಯ ವಾರದಲ್ಲಿ ಅಧಿಕಾರ ಸ್ವೀಕರಿಸುವ ಸಾಧ್ಯತೆ ಇದೆ.

ಅವರ ನಿರ್ಗಮನದಿಂದ ತೆರವಾಗಲಿರುವ ಡಿಜಿ-ಐಜಿಪಿ ಹುದ್ದೆಗೆ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಮೋಹನ್ ನೇಮಕಗೊಳ್ಳುವ ಸಾಧ್ಯತೆ ಹೆಚ್ಚಿದೆ. 2020ರ ಜ. 31ರಂದು 41ನೇ ಡಿಜಿ-ಐಜಿಪಿ ಆಗಿ ಪ್ರವೀಣ್ ಸೂದ್ ಅಧಿಕಾರ ಸ್ವೀಕರಿಸಿದ್ದರು.



ಪ್ರವೀಣ್ ಸೂದ್

ಆಲೋಕ್ ಮೋಹನ್

9ನೇ ಪುಟ ನೋಡಿ

ರಂಗಾಯಣಕ್ಕೆ ಅಡ್ಡಂಡ ಕಾರ್ಯಪ್ಪ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ರಂಗಾಯಣದ ನಿರ್ದೇಶಕ ಸ್ಥಾನಕ್ಕೆ ಅಡ್ಡಂಡ ಕಾರ್ಯಪ್ಪ ಭಾನುವಾರ ರಾಜೀನಾಮೆ ಸಲ್ಲಿಸಿದ್ದಾರೆ.

‘ನನ್ನನ್ನು ನಿರ್ದೇಶಕನನ್ನಾಗಿ ನೇಮಿಸಿದ್ದ ಬಿಜೆಪಿ ನೇತೃತ್ವದ ಸರ್ಕಾರ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡಿದೆ. ಇದು ಜನಾದೇಶ, ಇದನ್ನು ಗೌರವಿಸುತ್ತೇನೆ. ಈ ಕಾರಣದಿಂದ ನೈತಿಕ ಜವಾಬ್ದಾರಿಯಿಂದ ರಾಜೀನಾಮೆ ನೀಡುತ್ತಿದ್ದೇನೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗೆ ಕಳುಹಿಸಿದ ಪತ್ರದಲ್ಲಿ ಹೇಳಿದ್ದಾರೆ. ‘ನಾನು 2019ರ ಡಿ.31ರಂದು ಅಧಿಕಾರ ವಹಿಸಿಕೊಂಡಾಗ ರಂಗಾಯಣದ ಆರ್ಥಿಕ ಸ್ಥಿತಿ ಅಷ್ಟೇನೂ ಚೆನ್ನಾಗಿರಲಿಲ್ಲ. ಈಗ ₹4.16 ಕೋಟಿ ರಂಗಾಯಣದ ಖಾತೆಯಲ್ಲಿದೆ. 3 ವರ್ಷ 4 ತಿಂಗಳು ದುಡಿದು, ಆರ್ಥಿಕ ಸ್ಥಿತಿ ಸುಭದ್ರಗೊಳಿಸಿದ್ದೇನೆ. ಬೇರೆ ರಂಗಾಯಣಗಳ ಖಾತೆಗಳಲ್ಲಿ ₹15 ಲಕ್ಷ ಕೂಡ ಇಲ್ಲ’ ಎಂದಿದ್ದಾರೆ.

9ನೇ ಪುಟ ನೋಡಿ

ಹಲವು ವಿವಾದ

- ‘ರಾಜ್ಯ ಸರ್ಕಾರದ ನಾಟಕ ಶಾಲೆಗಳ ಆಡಳಿತ ಮಂಡಳಿಯಾದ ರಂಗಸಮಾಜ ಶಿಫಾರಸು ಮಾಡಿದ ಮೂರು ಹೆಸರುಗಳಲ್ಲಿ ಕಾರ್ಯಪ್ಪ ಹೆಸರಿರಲಿಲ್ಲ. ಅವರು ನೇಮಕವಾಗಿದ್ದು ರಾಜಕಾರಣಿಗಳ ಮೂಲಕ’ ಎಂದು ರಂಗಕರ್ಮಿಗಳು ಆರೋಪಿಸಿದ್ದರು.
- ರಂಗಾಯಣದಿಂದ ಆಯೋಜಿಸುವ ‘ಬಹುರೂಪಿ’ ನಾಟಕೋತ್ಸವಕ್ಕೆ ಚಕ್ರವರ್ತಿ ಸೂಲಿಬೆಲೆ ಅವರನ್ನು 2021ರ ಡಿಸೆಂಬರ್‌ನಲ್ಲಿ ಆಹ್ವಾನಿಸಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು. ‘ಸೂಲಿಬೆಲೆ ಅವರನ್ನು ರಂಗಭೂಮಿ ಕಾರ್ಯಕ್ರಮಕ್ಕೆ ಆಹ್ವಾನಿಸುವುದು ಎಷ್ಟು ಪ್ರಸ್ತುತ’ ಎಂದು ರಂಗಾಯಣದ ಹಿಂದಿನ ಕಲಾವಿದರು, ನಿರ್ದೇಶಕರು ಪ್ರಶ್ನಿಸಿ, ರಂಗಾಯಣದ ಆವರಣದಲ್ಲಿ ಪ್ರತಿಭಟಿಸಿದ್ದರು.
- ಅವರ ರಚನೆಯ ‘ಟಿಪ್ಪು ನಿಜಕನಸುಗಳು’ ನಾಟಕಕ್ಕೆ ವಿರೋಧ ವ್ಯಕ್ತವಾಗಿತ್ತು. ‘ಇದರಲ್ಲಿ ಟಿಪ್ಪು ಸುಲ್ತಾನ್‌ನನ್ನು ಕೆಟ್ಟದಾಗಿ ಬಿಂಬಿಸಲಾಗಿದೆ, ಉರಿಗೌಡ ಹಾಗೂ ನಂಜೇಗೌಡ ಎಂಬ ಕಾಲ್ಪನಿಕ ಪಾತ್ರ ಸೃಷ್ಟಿಸಿ ಗೊಂದಲ ಉಂಟು ಮಾಡಲಾಗಿದೆ’ ಎಂಬ ಆರೋಪಗಳು ಕೇಳಿಬಂದಿದ್ದವು.

ಐಸಿಎಸ್‌ಇ: 10ನೇ ತರಗತಿಯಲ್ಲಿ 9 ಮಂದಿಗೆ ಮೊದಲ ಸ್ಥಾನ

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್‌ನ (ಸಿಐಎಸ್‌ಸಿಇ) ಫಲಿತಾಂಶ ಭಾನುವಾರ ಪ್ರಕಟವಾಗಿದೆ. ಈ ಬಾರಿ ಐಸಿಎಸ್‌ಇ 10ನೇ ತರಗತಿಯಲ್ಲಿ ಶೇ 98.94 ಮಂದಿ ಹಾಗೂ ಐಎಸ್‌ಸಿ 12ನೇ ತರಗತಿಯಲ್ಲಿ ಶೇ 96.93 ಮಂದಿ ತೇರ್ಗಡೆ ಹೊಂದಿದ್ದಾರೆ.

10ನೇ ತರಗತಿಯಲ್ಲಿ ರುಶಿಲ್ ಕುಮಾರ್, ಅನನ್ಯ ಕಾರ್ತಿಕ್, ಶ್ರೇಯಾ ಉಪಾಧ್ಯಾಯ, ಅದ್ವಯ್ ಸರ್ದೇಸಾಯಿ, ಯಶ್ ಮನೀಷ್ ಭಾಸಿನ್, ತನಯ್ ಸುಶೀಲ್ ಶಾ, ಹಿಯಾ ಸಂಘವಿ, ಅವಿಶಿ ಸಿಂಗ್, ಸಂಬಿತ್ ಮುಖ್ಯೋಪಾಧ್ಯಾಯ ಅವರು ಜಂಟಿಯಾಗಿ ಮೊದಲ ಸ್ಥಾನ ಗಳಿಸಿದ್ದಾರೆ. ಇವರೆಲ್ಲರೂ ಶೇ 99.80 ಅಂಕ ಗಳಿಸಿದ್ದಾರೆ.

12ನೇ ತರಗತಿಯಲ್ಲಿ ರಿಯಾ ಅಗರವಾಲ್, ಇಪ್ಸಿತಾ ಭಟ್ಟಾಚಾರ್ಯ, ಮೊಹಮ್ಮದ್ ಆರ್ಯನ್ ತಾರೀಖ್, ಶುಭಂ ಕುಮಾರ್ ಅಗರವಾಲ್ ಮತ್ತು ಮಾನ್ಯ ಗುಪ್ತಾ ಅವರು ಅಗ್ರ ಸ್ಥಾನ ಗಳಿಸಿದ್ದಾರೆ. ಇವರು ಶೇ 99.75 ಅಂಕ ಪಡೆದಿದ್ದಾರೆ.

‘ಒಟ್ಟು 63 ವಿಷಯಗಳಲ್ಲಿ 10ನೇ ತರಗತಿ ಪರೀಕ್ಷೆ ನಡೆಸಲಾಗಿತ್ತು. ಒಟ್ಟು 47 ವಿಷಯಗಳಲ್ಲಿ 12ನೇ ತರಗತಿ ಪರೀಕ್ಷೆ ನಡೆಸಲಾಗಿತ್ತು. ಈ ಬಾರಿ ಬಾಲಕಿಯರು ಮೇಲುಗೈ ಸಾಧಿಸಿದ್ದಾರೆ’ ಎಂದು ಸಿಐಎಸ್‌ಸಿಇ ಕಾರ್ಯದರ್ಶಿ ಗೆರ್ರಿ ಅರಥೂನ್ ಹೇಳಿದ್ದಾರೆ.

ಬೆಂಗಳೂರಿನ ಅನನ್ಯಗೆ ಅಗ್ರ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಸಿಎಸ್‌ಇಯ 10ನೇ ತರಗತಿಯಲ್ಲಿ ನಗರದ ಹೆಬ್ಬಾಳದ ವಿದ್ಯಾನಿಕೇತನ ಶಾಲೆಯ ಅನನ್ಯ ಕಾರ್ತಿಕ್ ಶೇ 99.80 ಅಂಕ ಪಡೆದು ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ್ದಾಳೆ. ರಾಷ್ಟ್ರ ಮಟ್ಟದಲ್ಲಿ ಇತರೆ ವಿದ್ಯಾರ್ಥಿಗಳೊಂದಿಗೆ ಅನನ್ಯ ಮೊದಲ ಸ್ಥಾನ ಹಂಚಿಕೊಂಡಿದ್ದಾಳೆ.

ವಿವರ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಪೈಲಟ್ ಪಾದಯಾತ್ರೆಗೆ ಭಾರಿ ಜನ ಬೆಂಬಲ 9
ಮೊಬೈಲ್ ಪತ್ತೆಗೆ ಸಿಇಐಆರ್: 17ರಿಂದ ದೇಶವ್ಯಾಪಿ ಬಳಕೆಗೆ? 8
ಸಿ.ಟಿ.ರವಿ ಸೋಲು; ಜೆಡಿಎಸ್‌ನ ಭೋಜೇಗೌಡರ ಮೇಲೆ ಹಾಲು ಸುರಿದು ಸಂಭ್ರಮ 4
ಪಾರ್ನೆಲ್ ದಾಳಿ: ಆರ್‌ಸಿಬಿಗೆ ಜಯ 10

RAMAIAH UNIVERSITY OF APPLIED SCIENCES
UGC U/S 2(F) OF UGC ACT 1956
Applied Brilliance Makes all the Difference
62 YEARS — PROVIDING QUALITY EDUCATION — EXCELLENCE IN — RAMAIAH GROUP OF INSTITUTIONS

ADMISSIONS OPEN 2023-24

Faculty of Engineering & Technology
B.Tech. | M.Tech.

Faculty of Art & Design
B.Des. • Product Design • Fashion Design • Interaction Design
M.Des. • Product Design • Fashion Design

Faculty of Mathematical & Physical Sciences
B.Sc. (Hons.) • Physics, Chemistry, Mathematics
M.Sc. • Physics • Mathematics • Analytical Chemistry • Organic Chemistry • Industrial Chemistry

Faculty of Hospitality Management and Catering Technology
BHM Bachelor of Hotel Management

Faculty of Pharmacy
B.Pharm. Bachelor of Pharmacy
Pharm.D Doctor of Pharmacy
M.Pharm. • Pharmacognosy • Pharmacy Practice • Pharmaceutics • Pharmacology • Pharmaceutical Chemistry

Faculty of Dental Sciences
BDS Bachelor of Dental Surgery
MDS Master of Dental Surgery

Ramaiah Medical College
MBBS | MD/MS | DM/M.Ch

Ramaiah College of Physiotherapy
BPT | MPT

PG Diploma in Facility Management

Ph.D. Programs

Faculty of Life & Allied Health Sciences
B.Sc. (Hons.) • Biotechnology • Food Processing and Technology
B.Sc. (Hons.) • Cardiac Care Technology • Optometry • Dialysis Therapy Technology • Medical Radiology and Imaging Technology • Anesthesia and Operation Theatre Technology
M.Sc. • Biotechnology • Molecular & Cellular Biology • Food Science & Technology • Food Nutrition and Dietetics
MHA Masters in Hospital Administration
MPH Master of Public Health

School of Social Sciences
BA / B.Sc. (Hons.) in Economics
B.Sc. (Hons.) • Data Sciences & Analytics • Psychology
M.A. in Public Policy

Faculty of Management and Commerce
B.Com. (Hons.) • Accounting & Finance
BBA
MBA • Marketing Management • Human Resource Management • Operations Management • Financial Management • Small Business & Entrepreneurship • Business Analytics • Banking & Financial Services • Hospitality Management • Pharma Business Management

School of Law
B.Sc. LL.B. (Hons.) | B.A. LL.B. (Hons.)

Ramaiah Institute of Nursing Education & Research
B.Sc. Nursing | M.Sc. Nursing
Post Basic B.Sc. Nursing

Other Programs B.Voc. in • Product Design & Modelling • Culinary Operation • Mechatronics • Retail Management

All UG,PG and Ph.D. Programs are approved by Statutory Bodies

Ranked As... ACCREDITED A+ Ramaiah Medical College | nirf ALL INDIA RANKING 2022: 38th Ramaiah Medical College, 14th Faculty of Dental Sciences, 62nd Faculty of Pharmacy | ARIIA ATAL RANKING OF INSTITUTIONS ON INNOVATION ACHIEVEMENTS

APPLY NOW RUAS AT ADMISSIONS TEST
UG & PG Programmes
For details and registration scan this QR Code (OR) visit website: https://admissions.msruas.ac.in/

Gnanagangothri Campus (GGC): University House, New BEL Road, MSR Nagar, Bengaluru - 560 054.
Ramaiah Technology Campus (RTC), Peenya : #470-P, Peenya Industrial Area, Peenya 4th Phase, Bengaluru - 560 058.
801 000 4444
admissions23@msruas.ac.in
www.msruas.ac.in

ಕಾಂಗ್ರೆಸ್ ಗೆಲ್ಲಲು ಮೂರು ವಿಷಯಗಳೇ ಕಾರಣ: ಕಿರಣ್ ಮಜುಂದಾರ್ ಷಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ 135 ಕ್ಷೇತ್ರಗಳಲ್ಲಿ ಗೆದ್ದು ಕಾಂಗ್ರೆಸ್ ದಾಖಲೆ ಬರೆದಿದೆ. ಈ ಗೆಲುವಿಗೆ ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ ಅವರು ಮೂರು ಕಾರಣಗಳನ್ನು ನೀಡಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಕರ್ನಾಟಕದ ಜನತೆಯಿಂದ ಕಾಂಗ್ರೆಸ್‌ಗೆ ಭರ್ಜರಿ ತೀರ್ಪು ಸಿಕ್ಕಿದ್ದು ನನ್ನ ಗಮನಕ್ಕೆ ಬಂತು. ಮೂಲಸೌಕರ್ಯ ಅಭಿವೃದ್ಧಿ, ಆರ್ಥಿಕ ಸಮೃದ್ಧಿ ಮತ್ತು ಸಾಮಾಜಿಕ ಸಾಮರಸ್ಯ ಮುಂತಾದವು ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಜನರು ಅಳೆಯುವ ಮಾನದಂಡಗಳಾಗಿವೆ' ಎಂದು ಬರೆದುಕೊಂಡಿದ್ದಾರೆ.

ಹಿಂದೆ ಮಳೆಯಿಂದಾಗಿ ನಗರದಲ್ಲಿ ಅಧ್ವಾನ ಉಂಟಾದಾಗ ಕಿರಣ್, ಕಠಿಣ ಮಾತುಗಳಿಂದ ಸರ್ಕಾರವನ್ನು ಟೀಕೆ ಮಾಡಿದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ವಾಲಿದ ವಿದ್ಯುತ್ ಕಂಬ'

ಕೃಷ್ಣರಾಜಪುರ ಕ್ಷೇತ್ರ ವ್ಯಾಪ್ತಿಯ ಭಟ್ಟರಹಳ್ಳಿ ಬಸ್ ನಿಲ್ದಾಣ ಬಳಿ, ರಾಷ್ಟ್ರೀಯ ಹೆದ್ದಾರಿ–75ರಲ್ಲಿ ವಿದ್ಯುತ್ ಕಂಬ ವಾಲಿದೆ. ಈ ಹೆದ್ದಾರಿಯಲ್ಲಿ ಅಸಂಖ್ಯ ವಾಹನಗಳು ಸಂಚರಿಸುತ್ತವೆ. ಸವಾರರು ನಿತ್ಯ ಜೀವ ಕೈಯಲ್ಲಿದು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಾಲಿದ ವಿದ್ಯುತ್ ಕಂಬವನ್ನು ತೆಗೆದು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ಕಿರಣ್ ಕುಮಾರ್. ಜೆ., ಮೇಡಹಳ್ಳಿ (ಕೃಷ್ಣರಾಜಪುರ)

ಕೃಷ್ಣರಾಜಪುರ ಕ್ಷೇತ್ರದ ಭಟ್ಟರಹಳ್ಳಿ ಬಸ್ ನಿಲ್ದಾಣ ಬಳಿ ವಿದ್ಯುತ್ ಕಂಬ ವಾಲಿರುವುದು

'ಪಾದಚಾರಿ ಮಾರ್ಗದಲ್ಲಿ ಕಸ'

ನಾಗಪ್ಪ ಸ್ಟೇಟ್ ಶೇಷಾದ್ರಿಪುರ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯ ಸೇರಿದಂತೆ ರಾಶಿಗಟ್ಟಲೇ ಕಸ ಸುರಿಯಲಾಗಿದೆ. ಹಾಕಲಾಗಿದೆ. ಇದರಿಂದ ಪಾದಚಾರಿಗಳಿಗೆ ಸಮಸ್ಯೆಯಾಗಿದೆ. ಸದ್ಯ, ಪಾದಚಾರಿಗಳು ಆತಂಕದಿಂದ ಮುಖ್ಯರಸ್ತೆಯಲ್ಲಿಯೇ ಸಾಗುವ ಸ್ಥಿತಿ ಎದುರಾಗಿದೆ. ಕಸ ತೆರವುಗೊಳಿಸುವಂತೆ ಹಲವಾರು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಶಶಿಧರ್, ಸ್ಥಳೀಯ ನಿವಾಸಿ

ನಗರದ ನಾಗಪ್ಪ ಸ್ಟೇಟ್ ಶೇಷಾದ್ರಿಪುರಂ ಪಾದಾಚಾರಿ ಮಾರ್ಗದಲ್ಲಿ ಜನರು ಓಡಾಡಲು ಕಷ್ಟ ಪಡುತ್ತಿರುವ ದೃಶ್ಯ ಕಂಡು ಬಂತು –ಪ್ರಜಾವಾಣಿ ಚಿತ್ರ

'ಬಿದ್ದಿರುವ ಮರ ತೆರವುಗೊಳಿಸಿ'

ಚಾಮರಾಜಪೇಟೆಯ ಟಿಪ್ಪು ಸುಲ್ತಾನ್ ರಸ್ತೆಯಲ್ಲಿ ನಾಲ್ಕೈದು ದಿನಗಳ ಹಿಂದೆ ಗಾಳಿ ಮಳೆಗೆ ಬೃಹತ್ ಮರವೊಂದು ಬಿದ್ದಿದ್ದು, ಸಂಚಾರಕ್ಕೆ ಅನನುಕೂಲವಾಗಿದೆ. ಈ ಮುಖ್ಯರಸ್ತೆಯಲ್ಲಿ ವಾಹನಗಳು ಅತಿ ವೇಗವಾಗಿ ಚಲಿಸುತ್ತವೆ. ಅನಾಹುತಗಳು ಸಂಭವಿಸುವ ಮುನ್ನ ಈ ಮರವನ್ನು ತೆರವುಗೊಳಿಸಬೇಕು. ಬಿಬಿಎಂಪಿಯ ಅರಣ್ಯ ವಿಭಾಗಕ್ಕೆ ದೂರೂ ನೀಡಿದ್ದರೂ ಪ್ರಯೋಜನವಾಗಿಲ್ಲ.

ಕೃಷ್ಣ, ಸ್ಥಳೀಯ ನಿವಾಸಿ

ಚಾಮರಾಜಪೇಟೆಯ ಟಿಪ್ಪು ಸುಲ್ತಾನ್ ಅರಮನೆ ರಸ್ತೆಯಲ್ಲಿ ಮರ ಬಿದ್ದಿರುವುದು

'ರಸ್ತೆ ಸರಿಪಡಿಸಿ'

ಹೆಗ್ಗನಹಳ್ಳಿಯ ಕ್ರಾಸ್‌ನ ಸಂಜೀವಿನಿನಗರದ ಓಂ ಶಕ್ತಿ ದೇವಸ್ಥಾನದ ರಸ್ತೆಯ ದುಸ್ಥಿತಿ.

ಹೆಗ್ಗನಹಳ್ಳಿಯ ಸಂಜೀವನಗರದ ಹತ್ತಿರ ಓಂ ಶಕ್ತಿ ದೇವಸ್ಥಾನದ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಬೇಸಿಗೆಯಲ್ಲಿ ವಾಹನಗಳ ಸಂಚಾರದಿಂದ ದೂಳು ಆವರಿಸಲಿದೆ. ದ್ವಿಚಕ್ರ ವಾಹನ ಸವಾರರಿಗೆ ಕಿರಿಕಿರಿಯಾಗುತ್ತಿದೆ. ಮಳೆ ಬಂದಾಗ ರಸ್ತೆ ಯಾವುದು, ಗುಂಡಿ ಯಾವುದು ಎಂದು ಗೊತ್ತಾಗುವುದಿಲ್ಲ. ಹಲವರು ಬಿದ್ದು ಗಾಯಗೊಂಡಿದ್ದಾರೆ. ಇನ್ನಾದರೂ ಅಧಿಕಾರಿಗಳು ದುರಸ್ತಿಗೆ ಕ್ರಮವಹಿಸಲಿ.

ವೀರಭದ್ರ, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗ ಸರಿಪಡಿಸಿ'

ಸೀಗೇಹಳ್ಳಿ ಕೆರೆಯ ಉದ್ಯಾನಕ್ಕೆ ಸಂಪರ್ಕಿಸುವ ಪಾದಚಾರಿ ಮಾರ್ಗದ ದುಸ್ಥಿತಿ

ಕೃಷ್ಣರಾಜಪುರ ಕ್ಷೇತ್ರದ ಬಸವನಪುರ ವಾರ್ಡ್‌ನ ಸೀಗೇಹಳ್ಳಿ ಕೆರೆ ಮತ್ತು ಉದ್ಯಾನಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗ ಹಾಳಾಗಿದೆ. ವಾಯುವಿಹಾರಕ್ಕೆ ಬರುವ ನಡಿಗೆದಾರರಿಗೆ ಕಷ್ಟವಾಗಿದೆ. ಹಲವು ವೃದ್ಧರು ಬಿದ್ದು ಗಾಯಗೊಂಡಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಈ ಕೂಡಲೇ ದುರಸ್ತಿಗೆ ಕ್ರಮವಹಿಸಿ ಹಿರಿಯ ನಾಗರಿಕರಿಗೆ ಆಗುತ್ತಿರುವ ಸಮಸ್ಯೆಯನ್ನು ಪರಿಹರಿಸಬೇಕು.

ಕಿರಣ್ ಕುಮಾರ್ ಸ್ಥಳೀಯ ನಿವಾಸಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is for the information of the general public that my clients Venkatrao Y Ghorpade S/o H.H Late Shri. Yeshwantrao Ghorpade and Gayatri Ghorpade D/o Venkatrao Y Ghorpade have filed a suit in O.S. No. 25958/2017 which is pending on the file of the City Civil Judge, Bangalore claiming partition and separate possession of various properties and other reliefs and particularly **No.20, palace road, Bangalore- 560052, previously known as Sandur House, presently Shangri La Hotel.**

The above suit is pending adjudication between all the heirs of H.H Late Shri. Yeshwantrao Ghorpade and Adarsh developers. It has come to the notice of my clients that hasty attempts are being made to alienate or otherwise encumber the property without reference to my clients. Wherefore, the general public are hereby cautioned not to enter into any agreement/ transactions respecting **No.20, palace road, Bangalore-560052, previously known as Sandur House, presently Shangri La Hotel.** Any such transactions entered into will be at their own risk and costs. It is needless to state that such transactions will be subject to lis pendens.

Ajay Govindraj, Advocate,
No.101, Ramanashree Chambers,
Lady Curzon Road,
Bangalore- 560001.
Ph: 41483633/ 41600331

REAL ESTATE SELLING

Farm House/ Land/ Resorts

Multiple Locations

NANDI HILLS rd ready2occupy 1/2 acre 20k builtup furnished 15 AC rooms resto cafe 9Cr Ph 7019346409

JOB OPPORTUNITIES

Teachers/ Professors

St. Joseph's Institution
Jnana Jyothi, Attibele Road,
Near Civil Court,
Anekal Town - 562106

TEACHERS WANTED

1. **St. Joseph's School-** LKG, UKG, Class I, Class II (Qualification - NTT and D.Ed)
2. **St. Josephs PU College- Lecturer in Commerce** (M.Com, B.Ed)

Apply to e-mail Id: **sjpucjjanekal@gmail.com**
Contact: **9739939510 / 9980338771**
Apply before- 20/05/2023

WANTED P.E Teachers & Kannada, Hindi teacher (Primary Section), Yeshwanthpur, Bangalore. Contact No. 9379191544

PERSONAL

Change of Name

CHANGE OF NAME
I, **MOLLY K.J** aged about 53 Years W/o Shaju Jose, Residing at No. 91, Maria Villa, 2nd Main, 3rd Cross, near Tin Factory, Udayanagar, Bangalore 560016, have changed my name to **MOLI K.J** vide affidavit dated 18.04.2023 before notary A.Idinabba, Bangalore. Henceforth I shall be called as **MOLI K.J** only, for all purpose.

CHANGE OF NAME
I, **SHABNUM TAJ,** R/@. No. #18, F Cross, Bismillah Nagar, Bengaluru South, Bengaluru - 560 041, have changed my name to **SAFIYA FIRDOSE** vide affidavit dated 09.05.2023 before Notary L. Gopalakrishna, Bengaluru. Henceforth I shall be called **SAFIYA FIRDOSE** only

MISS GITA, Wife/o, JC681781N, SUB/ASH, TAPAN KUMAR MITRA, Vill- Khapai Danga, Cooch Behar, West Bengal changed name MISS GITA to GITA MITRA, 12/05/2023, Notary K.V.Mani, Bangalore

6395292A, NK, ARVIND KUMAR, Vill- Ledupur, Ashapur, Shivpur, Varanasi, Uttar Pradesh, changed name JYOTHI PRAJAPATHI to JYOTI PRAJAPATI, 12/05/2023 Notary K.V. Mani Bangalore

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats, Converted& Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

EDUCATION CORNER

CADD Nest®
Nation | Energetic | Success | Technology
Job Oriented Software Training for
- Full Stack Developer
- C, C++, Java / Python / Data Science / AI / ML
- Data Analytics
- Tally Prime / Advanced Excel
- SAP FICO / MM / SD / Civil / Architectural CADD
- Mechanical CADD / Interior Design
- Digital Marketing
- Spoken English
- Hardware & Networking
- Animation / Graphic / Web Designing
- Handwriting / Calligraphy

Contact: 9740444363 / 9740442121 / 080-41608308
www.caddnest.org

ಹೃತ್ಪೂರ್ವಕ ಅಭಿನಂದನೆಗಳು
Scored 93% in SSLC EXAM-2023

ಶ್ರಾವ್ಯ ಆರ್.

ವಾಸವಿ ವಿದ್ಯಾನಿಕೇತನ್ ಟ್ರಸ್ಟ್, ಬಸವನಗುಡಿ, ಬೆಂಗಳೂರು–560004

ಶುಭ ಕೋರುವವರು :
ಶ್ರೀಮತಿ/ ಶ್ರೀ : ಗೌರಾಂಬಿಕ ಬಸವರಾಜು ಹೆಡಕನಹಳ್ಳಿ
ಶ್ರೀಮತಿ/ ಶ್ರೀ : ತನುಜ ರವೀಂದ್ರ ಸಂಗಮೇಶ
ಶ್ರೀಮತಿ/ ಶ್ರೀ : ರಾಣಿ ಗಂಗಾಧರ್
ಶ್ರೀಮತಿ/ ಶ್ರೀ : ರಮ್ಯ ಬಸಂತ್ ಕುಮಾರ್
ಶ್ರೀಮತಿ/ ಶ್ರೀ : ಕವಿತಾ ಶಿವಕುಮಾರ್

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Mallathahally, Nagarabhavi, Bengaluru-560056
Phone: 23213282

ADMISSION OPEN - COURSES OFFERED
- Computer Science & Engg
- Electronics & Commn Engg
- Mechanical Engineering
- Electrical & Electronics Engg
- Civil Engineering
- Apparel Design & Fashion Technology

RGMP-23401

For details contact Mobile: 8553344666, 9448865597

ASTRO YATRA

ಓಂ ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ಪಂಡಿತ್ **ಶ್ರೀ ರಾಮ್ ಭಟ್**

ವಿದ್ಯೆ-ಉದ್ಯೋಗ,ಪ್ರೀತಿ-ಪ್ರೇಮ, ವ್ಯಾಪಾರ ಲಾಭ-ನಷ್ಟ, ಶತ್ರುಕಾಟ, ರಾಜಕೀಯ, ಆರೋಗ್ಯ, ಶಿಕ್ಷಣ, ವಿಚ್ಛೇದನ, ವಿದೇಶ ಪ್ರಯಾಣ, ಹಣಕಾಸು, ಮಕ್ಕಳ ಸಮಸ್ಯೆ, ಕೋರ್ಟ್ ಕೇಸ್, ಪ್ರಾಪರ್ಟಿ, ಮನೆಫ್ಯಾಕ್ಟರಿಗೆ ವಾಸ್ತು ದೋಷ, ಮಾನಸಿಕ ಸಮಸ್ಯೆ, ಮದುವೆ, ಸಂತಾನದಲ್ಲಿ ವಿಳಂಬ, ಸ್ತ್ರೀಪ್ರೇಮ, ಸ್ತ್ರೀ-ಪುರುಷ ವಶೀಕರಣ, ಸ್ತ್ರೀ-ಪುರುಷ ಗುಪ್ತ ಸಮಸ್ಯೆ, ಶತ್ರುಕಾಟ, ಮಾಟ-ಮಂತ್ರ, ವಶೀಕರಣ, ದುಷ್ಟಶಕ್ತಿ, ಭೂತಚೇಷ್ಟೆ ನಿವಾರಣೆ ಹಾಗು ನಿಮ್ಮ ಯಾವುದೇ ಸಮಸ್ಯೆ ಇದ್ದರೂ ಯಂತ್ರ-ಮಂತ್ರ ಹಾಗೂ ಕೇರಳದ ಗುಪ್ತ ವಿದ್ಯೆಯಿಂದ 11 ದಿನದಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ. ಫೋನಿನ ಮೂಲಕ ಉತ್ತಮ ಸಲಹೆ ಶಾಶ್ವತ ಪರಿಹಾರ.

ವಿಳಾಸ: ನಂ.747, ಚಿನ್ಮಯ್ ಆಸ್ಪತ್ರೆ ಹತ್ತಿರ, ಕೃಷ್ಣ ದೇವಸ್ಥಾನದ ಹಿಂಭಾಗ ಇಂದಿರಾನಗರ, ಬೆಂಗಳೂರು-560038 ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ
ಸಮಯ: ಬೆಳಿಗ್ಗೆ 9 ರಿಂದ ರಾತ್ರಿ 8 ರವರೆಗೆ ಸಂಪರ್ಕಿಸಿ: 9880403406

ತಯಾರಿಕಾ ಕಂಪನಿಗಳಿಂದ ಕೋವಿಡ್ ಲಸಿಕೆ ಪೂರೈಕೆ ಸ್ಥಗಿತ

ಖಾಸಗಿಯಲ್ಲೂ ಲಸಿಕೆ ದಾಸ್ತಾನು ಖಾಲಿ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಲಸಿಕೆಯ ತಯಾರಿಕೆ ಕಂಪನಿಗಳು ಪೂರೈಕೆಯನ್ನು ಸ್ಥಗಿತಗೊಳಿಸಿವೆ. ಇದರಿಂದಾಗಿ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿಯೂ ಲಸಿಕೆಯ ದಾಸ್ತಾನು ಖಾಲಿಯಾಗಿದೆ.

ಕೇಂದ್ರ ಸರ್ಕಾರ ಕೆಲ ದಿನಗಳ ಹಿಂದೆ ರಾಜ್ಯಗಳಿಗೆ ಲಸಿಕೆಯ ಪೂರೈಕೆ ಸ್ಥಗಿತಗೊಳಿಸಿತ್ತು. ಇದರಿಂದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಣೆಯನ್ನು ಸ್ಥಗಿತ ಮಾಡಲಾಗಿದೆ. ವಿದೇಶಕ್ಕೆ ತೆರಳುವವರು, ಮುನ್ನೆಚ್ಚರಿಕೆ ಡೋಸ್ ಅಗತ್ಯವಿರುವವರು ಸೇರಿ ಲಸಿಕೆ ಬೇಕಿರುವವರು ಖಾಸಗಿ ಕೇಂದ್ರಗಳಲ್ಲಿ ಲಸಿಕೆ ಪಡೆಯುತ್ತಿದ್ದರು. ಈಗ ಪೂರೈಕೆ ಸ್ಥಗಿತವಾಗಿದ್ದು, ಲಸಿಕೆ ಪಡೆಯುವುದು ಸಮಸ್ಯೆಯಾಗಿದೆ.

ಕೋವಿಡ್ ಸಂಬಂಧ ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ ಕೊನೆಗೊಂಡಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿದೆ. ಲಸಿಕೆಗೆ ಬೇಡಿಕೆ ಇರದಿದ್ದರಿಂದ ಕೆಲ ಆಸ್ಪತ್ರೆಗಳು ದಾಸ್ತಾನು ಖಾಲಿಯಾದ ಬಳಿಕ ಖರೀದಿ ಮಾಡಿರಲಿಲ್ಲ. ಕೆಲ ಆಸ್ಪತ್ರೆಗಳು ತಯಾರಿಕೆ ಕಂಪನಿಗಳಿಗೆ ಬೇಡಿಕೆ ಸಲ್ಲಿಸಿದರೂ ಪೂರೈಕೆಯಾಗಿಲ್ಲ. ಕೋವಿನ್ ಪೋರ್ಟಲ್ ಮಾಹಿತಿ ಪ್ರಕಾರ ರಾಜ್ಯದಲ್ಲಿ ಒಂದು ಖಾಸಗಿ ಕೇಂದ್ರದಲ್ಲಿ ಮಾತ್ರ ಲಸಿಕೆ ಒದಗಿಸಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಹಂತ ಹಂತವಾಗಿ ಸ್ಥಗಿತ: ಕೋವಿಡ್ ಮೊದಲೆರಡು ಅಲೆಯಲ್ಲಿ ಬೆಂಗಳೂರಿನಲ್ಲೇ 200ಕ್ಕೂ ಅಧಿಕ ಖಾಸಗಿ ಕೇಂದ್ರಗಳಲ್ಲಿ ಲಸಿಕೆ ವಿತರಿಸಲಾಗಿತ್ತು. ಬಳಿಕ ಲಸಿಕೆ ವಿತರಣಾ ಕೇಂದ್ರಗಳ ಸಂಖ್ಯೆ ಇಳಿಕೆ ಕಂಡಿತ್ತು. ಕಳೆದ ವರ್ಷಾಂತ್ಯಕ್ಕೆ ಚೀನಾ ಸೇರಿ ಕೆಲವೆಡೆ ಕೋವಿಡ್ ಪ್ರಕರಣಗಳು ಹೆಚ್ಚಳವಾದ್ದರಿಂದ ಇಲ್ಲಿಯೂ ರೂಪಾಂತರಿ ವೈರಾಣು ಕಾಣಿಸಿಕೊಳ್ಳುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ಮುನ್ನೆಚ್ಚರಿಕೆ ಡೋಸ್‌ಗೆ ಶಿಫಾರಸು ಮಾಡಿತ್ತು. ಇದರಿಂದಾಗಿ ಕಳೆದ ಜನವರಿ ತಿಂಗಳಲ್ಲಿ ಲಸಿಕೆಗೆ ಬೇಡಿಕೆ ಹೆಚ್ಚಳವಾಗಿತ್ತು.

ಲಸಿಕೆಗೆ ಬೇಡಿಕೆ ತಗ್ಗಿದ ಬಳಿಕ ಖರೀದಿ ಮಾಡುವುದನ್ನು ನಿಲ್ಲಿಸಿದೆವು. ದಾಸ್ತಾನು ಇದ್ದ ಕೆಲ ಡೋಸ್‌ಗಳೂ ಅವಧಿ ಮೀರಿ ವ್ಯರ್ಥ ಆದವು

ಡಾ.ಆರ್. ರವೀಂದ್ರ
ಸುಗುಣಾ ಆಸ್ಪತ್ರೆ ಮುಖ್ಯಸ್ಥ

ಲಸಿಕೆ ತಯಾರಿಕಾ ಕಂಪನಿಗಳು ಪೂರೈಕೆ ಮಾಡುತ್ತಿಲ್ಲ. ಇದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ದಾಸ್ತಾನು ಖಾಲಿಯಾಗಿದೆ

ಡಾ. ಗೋವಿಂದಯ್ಯ ಯತೀಶ್
ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ ಅಧ್ಯಕ್ಷ

ಅಂಕಿ ಅಂಶ

12.21 ಕೋಟಿ
ರಾಜ್ಯದಲ್ಲಿ ಈವರೆಗೆ ವಿತರಿಸಿದ ಲಸಿಕೆಯ ಡೋಸ್‌ಗಳು

5.53 ಕೋಟಿ
ಎರಡು ಡೋಸ್ ಲಸಿಕೆ ಪಡೆದವರು

1.15 ಕೋಟಿ
ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದವರು

ನಾಲ್ಕು ಲಸಿಕೆ ಅಲಭ್ಯ

ರಾಜ್ಯದಲ್ಲಿ 2022ರ ಜ.10ರಿಂದ ಮೂರನೇ ಡೋಸ್ ಲಸಿಕೆ ವಿತರಿಸಲಾಗುತ್ತಿದೆ. ಎರಡು ಡೋಸ್ ಲಸಿಕೆ ಪಡೆದು ಆರು ತಿಂಗಳಾದವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತದೆ. 'ಕೋವಿಶೀಲ್ಡ್' ಹಾಗೂ 'ಕೋವ್ಯಾಕ್ಸಿನ್' ಲಸಿಕೆ ಮುನ್ನೆಚ್ಚರಿಕೆ ಡೋಸ್‌ಗೆ ಖಾಸಗಿ ಆಸ್ಪತ್ರೆಗಳು ₹386 ಪಡೆಯುತ್ತಿದ್ದವು. ಲಸಿಕೆ ಪೂರೈಕೆ ಸ್ಥಗಿತವಾದ ಬಳಿಕ 'ಕೊವೊವ್ಯಾಕ್ಸ್', ಮೂಗಿನ ಮೂಲಕ ಹಾಕುವ 'ಇನ್‌ಕೋವ್ಯಾಕ್' ಹಾಗೂ ಕೋರ್ಬಿವ್ಯಾಕ್ಸ್ ಲಸಿಕೆ ಒದಗಿಸಲಾಗುತ್ತಿತ್ತು. ಇವುಗಳಿಗೆ ಕ್ರಮವಾಗಿ ₹386, ₹990 ಹಾಗೂ ₹400 ನಿಗದಿಪಡಿಸಿವೆ. ಸದ್ಯ ಕೋರ್ಬಿವ್ಯಾಕ್ಸ್ ಒಂದು ಆಸ್ಪತ್ರೆಯಲ್ಲಿ ಲಭ್ಯವಿದೆ.

ಕೋವಿನ್ ಪೋರ್ಟಲ್ ಮಾಹಿತಿ ಪ್ರಕಾರ ಕಳೆದ ತಿಂಗಳು ಶ್ರೀಸಾಯಿ, ಮೆಡಿಹೋಪ್, ಪರಿಮಳಾ ಸೇರಿ ರಾಜ್ಯದಲ್ಲಿ 8 ಖಾಸಗಿ ವೈದ್ಯಕೀಯ ಕೇಂದ್ರಗಳಲ್ಲಿ ಲಸಿಕೆ ಒದಗಿಸಲಾಗುತ್ತಿತ್ತು. ಈಗ ಸಕ್ರಾ ವರ್ಲ್ಡ್ ಆಸ್ಪತ್ರೆಯಲ್ಲಿ ಮಾತ್ರ ವಿತರಿಸಲಾಗುತ್ತಿದೆ. ವಿವಿಧ ಪ್ರಮುಖ ಆಸ್ಪತ್ರೆಗಳಲ್ಲಿ ದಾಸ್ತಾನು ಖಾಲಿಯಾಗಿದೆ.

ತಾಯಂದಿರ ದಿನ

ಅಂತರರಾಷ್ಟ್ರೀಯ ತಾಯಂದಿರ ದಿನವಾದ ಭಾನುವಾರ ವಿಧಾನಸೌಧದ ಮುಂಭಾಗದಲ್ಲಿ ತಾಯಿಯೊಬ್ಬರು ಮಕ್ಕಳೊಂದಿಗೆ ಸಂಭ್ರಮಿಸಿದರು..... ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

'ಮಕ್ಕಳಿಗಾಗಿ ತಾಯಂದಿರ ತ್ಯಾಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಯೋಗಕ್ಷೇಮಕ್ಕಾಗಿ ತಾಯಂದಿರು ಜೀವನದಲ್ಲಿ ಹಲವಾರು ಹೊಣೆಗಾರಿಕೆ ಮಾಡಿಕೊಳ್ಳುತ್ತಾರೆ. ಅವರ ಆರೋಗ್ಯದ ಬಗ್ಗೆಯೂ ಮಕ್ಕಳು ಕಾಳಜಿ ವಹಿಸಬೇಕು' ಎಂದು ಚಲನಚಿತ್ರ ನಟ ಅಮೃತಾ ಅಯ್ಯಂಗಾರ್ ಹೇಳಿದರು.

ಮಣಿಪಾಲ್ ಆಸ್ಪತ್ರೆ ನಗರದಲ್ಲಿ ಹಮ್ಮಿಕೊಂಡ ಅಂತರರಾಷ್ಟ್ರೀಯ ತಾಯಂದಿರ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಜಗತ್ತಿನಲ್ಲಿ ತನಗಾಗಿ ಏನೂ ಬಯಸದ ನಿಸ್ವಾರ್ಥ ಮತ್ತು ಕರುಣಾಮಯಿ ಜೀವ ತಾಯಿ. ಮಕ್ಕಳ ಬಗ್ಗೆ ಅವಳಿಗೆ ಇರುವ ಪ್ರೀತಿ, ವಾತ್ಸಲ್ಯ, ಮಮಕಾರಕ್ಕೆ ಬೆಲೆ ಕಟ್ಟಲಾಗದು. ತಾಯಂದಿರು ನಿಸ್ವಾರ್ಥ ಸ್ವಭಾವಕ್ಕೆ ಹೆಸರಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುತ್ತಪ್ಪಿಂಡ ಮತ್ತು ಯಕೃತ್ತು ಕಸಿಗೆ ಒಳಗಾದ ತಾಯಂದಿರು ಅಂಗಾಂಗ ದಾನ ಮಾಡಿದ ಮಕ್ಕಳಿಗೆ ಕೃತಜ್ಞತೆ ಸಲ್ಲಿಸಿದರು.

ಅಂಗಾಂಗ ಕಸಿಗೆ ಒಳಗಾದ ಸುಶೀಲಾ ಜವಂತ್, ವಿಜಯಲಕ್ಷ್ಮಿ, ಕಾಕೋಲಿ ಬಿಸ್ವಾಸ್, ನುಸ್ರತ್, ದಾನಲಕ್ಷ್ಮಿ ತಮ್ಮ ಅನುಭವ ಹಂಚಿಕೊಂಡರು. ಅಂಗಾಂಗ ದಾನಿಗಳಾದ ರವಿಕುಮಾರ್, ರಾಯ ಬಿಸ್ವಾಸ್, ಅಯಾನ್ ಕಲೀಮ್, ತರುಣ್ ಕುಮಾರ್ ಅವರು ಇದ್ದರು.

'ಕಚ್ಚಾ ಎಣ್ಣೆ': ₹30 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಔಷಧಿ ತಯಾರಿಕೆಗೆ ಬಳಸುವ ಕಚ್ಚಾ ಎಣ್ಣೆ ಮಾರಾಟ ಮಾಡುವುದಾಗಿ ಹೇಳಿ ನಗರದ ವ್ಯಾಪಾರಿ ಯೊಬ್ಬರಿಂದ ₹ 30 ಲಕ್ಷ ಪಡೆದು ವಂಚಿಸಲಾಗಿದೆ.

'ಇ–ಮೇಲ್ ಮೂಲಕ ಪರಿಚಯವಾಗಿ ವಂಚಿಸಿರುವ ಆರೋಪಿಗಳ ವಿರುದ್ಧ ಬನ್ನೇರುಘಟ್ಟ ರಸ್ತೆ ನಿವಾಸಿಯೊಬ್ಬರು ದೂರು ನೀಡಿದ್ದಾರೆ. 'ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಇ–ಮೇಲ್ ಕಳುಹಿಸಿದ್ದ ಆರೋಪಿಗಳು, ಔಷಧಿಗೆ ಬಳಸುವ ಕಚ್ಚಾ ಎಣ್ಣೆಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತೇವೆ' ಎಂದಿದ್ದರು. ದೂರುದಾರ, 1 ಲೀಟರ್ ಎಣ್ಣೆ ಖರೀದಿಸಲು ₹ 2 ಲಕ್ಷ ಪಾವತಿಸಿದ್ದರು. ನಿಗದಿ ದಿನದಂದು ದೂರುದಾರರಿಗೆ ಎಣ್ಣೆ ಸಿಕ್ಕಿತ್ತು' ಎಂದು ತಿಳಿಸಿವೆ. 'ದೂರುದಾರ ಪುನಃ 16 ಲೀಟರ್ ಎಣ್ಣೆ ಖರೀದಿಸಲು ಆನ್‌ಲೈನ್ ಮೂಲಕ ಹಂತ ಹಂತವಾಗಿ ₹ 30 ಲಕ್ಷ ವರ್ಗಾಯಿಸಿದ್ದರು. ಹಣ ಪಡೆದ ಆರೋಪಿಗಳು, ಎಣ್ಣೆ ಕಳುಹಿಸಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕ್ರಿಪ್ಟೊ ಕರೆನ್ಸಿ: ಲಾಭದ ಆಮಿಷ, ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಬೇಡಿಕೆ ಇರುವ ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡುವುದಾಗಿ ಹೇಳಿ ನಗರದ ಮೂವರು ನಿವಾಸಿಗಳಿಂದ ₹ 6.26 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೋರಮಂಗಲದ 22 ವರ್ಷದ ಯುವಕ, ಎಲೆಕ್ಟ್ರಾನಿಕ್ ಸಿಟಿಯ 26 ವರ್ಷದ ಯುವತಿ ಹಾಗೂ ಜಯನಗರದ 40 ವರ್ಷದ ನಿವಾಸಿ ಪ್ರತ್ಯೇಕ ದೂರು ನೀಡಿದ್ದಾರೆ. ಮೂರು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೋರಮಂಗಲದ ಯುವಕನ ಮೊಬೈಲ್ ಫೋನ್‌ಗೆ ಕರೆ ಮಾಡಿದ್ದ ಆರೋಪಿಗಳು, 'ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡುತ್ತೇವೆ' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 2.43 ಲಕ್ಷ ನೀಡಿದ್ದ. ಇದಾದ ನಂತರ ಆರೋಪಿಗಳು ನಾಪತ್ತೆಯಾಗಿದ್ದಾರೆ'. ಇದೇ ರೀತಿ ಇನ್ನಿಬ್ಬರನ್ನು ವಂಚಿಸಿದ್ದಾರೆ ಎಂದರು.

ಉಡುಗೊರೆ ಆಸೆಗೆ ₹9 ಲಕ್ಷ ಕಳೆದುಕೊಂಡ

ಬೆಂಗಳೂರು: ಆನ್‌ಲೈನ್ ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯವಾಗಿದ್ದ ಯುವತಿಯೊಬ್ಬರು ಅಮೆರಿಕದಿಂದ ಚಿನ್ನ ಉಡುಗೊರೆ ಕಳುಹಿಸುವುದಾಗಿ ಹೇಳಿ ನಗರದ ನಿವಾಸಿಯೊಬ್ಬರಿಂದ ₹ 9 ಲಕ್ಷ ಪಡೆದು ವಂಚಿಸಿದ್ದಾರೆ.

'ವಂಚನೆ ಕೃತ್ಯದ ಸಂಬಂಧ ಕೋರಮಂಗಲದ ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಯುವತಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಸೈಬರ್ ಕ್ರೈಂ ಠಾಣೆ ಪೊಲೀಸರು ಮಾಹಿತಿ ನೀಡಿದ್ದರು.

'ಡೇಟಿಂಗ್ ಆ್ಯಪ್‌ನಲ್ಲಿ ಮರಿಯಾ ಎಂಬುವವರು ದೂರುದಾರರ ಜೊತೆ ಚಾಟಿಂಗ್ ಆರಂಭಿಸಿದ್ದರು. ಅಮೆರಿಕದಲ್ಲಿರುವುದಾಗಿ ಹೇಳಿದ್ದ ಮರಿಯಾ, ಸದ್ಯದಲ್ಲೇ ಚಿನ್ನವನ್ನು ಉಡುಗೊರೆಯಾಗಿ ನೀಡುವುದಾಗಿ ತಿಳಿಸಿದ್ದರು. ದೂರುದಾರ, ಹಂತ ಹಂತವಾಗಿ ₹ 9 ಲಕ್ಷ ಪಾವತಿಸಿದ್ದರು. ಹಣ ಪಡೆದ ನಂತರ ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದು ತಿಳಿಸಿದ್ದಾರೆ.

ಕೆಲಸ ಆಮಿಷ: ₹ 7.92 ಲಕ್ಷ ಮೋಸ

ಬೆಂಗಳೂರು: ಅರೆಕಾಲಿಕ ಕೆಲಸದ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 7.92 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ.

'ಬಿಟಿಎಂ 1ನೇ ಹಂತದ ನಿವಾಸಿಯಾಗಿರುವ 34 ವರ್ಷದ ವ್ಯಕ್ತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ಆರೋಪಿಗಳು, 'ಅರೆಕಾಲಿಕ ಕೆಲಸ ಖಾಲಿ ಇದೆ. ಮನೆಯಿಂದಲೇ ಕೆಲಸ ಮಾಡಬಹುದು' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಸಂದೇಶಕ್ಕೆ ಪ್ರತಿಕ್ರಿಯಿಸಿದ್ದರು'.

'ಆರೋಪಿಗಳು ಕೆಲ ಕೆಲಸ ನೀಡಿದ್ದರು. ದೂರುದಾರರು ಅದನ್ನು ಮಾಡಿ ಮುಗಿಸಿದ್ದರು. ಅದಕ್ಕಾಗಿ ಆರೋಪಿಗಳು, ₹ 800 ನೀಡಿದ್ದರು. ಮತ್ತಷ್ಟು ಕೆಲಸ ನೀಡಿ ಮುಗಿಸಲು ಹೇಳಿದ್ದರು. ಹಣ ವರ್ಗಾವಣೆಗೆ ಕೆಲ ಶುಲ್ಕ ಪಾವತಿಸುವಂತೆ ತಿಳಿಸಿದ್ದರು. ದೂರುದಾರ, ಹಂತ ಹಂತವಾಗಿ ₹ 7.92 ಲಕ್ಷ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸರಣಿ ಅಪಘಾತ: 2 ಕಾರು, ಆಟೊಗೆ ಬಸ್ ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಾರ್ಪೊರೇಷನ್ ವೃತ್ತದಲ್ಲಿ ಭಾನುವಾರ ಸರಣಿ ಅಪಘಾತ ಸಂಭವಿಸಿದೆ. ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ಎರಡು ಕಾರು ಹಾಗೂ ಆಟೊ ಜಖಂಗೊಂಡಿವೆ.

'ಶಿವಾಜಿನಗರ ಬಸ್ ನಿಲ್ದಾಣದಿಂದ ಕಾರ್ಪೊರೇಷನ್ ವೃತ್ತದ ಮಾರ್ಗವಾಗಿ ಬಿಎಂಟಿಸಿ ಬಸ್ ಮೈಸೂರು ರಸ್ತೆಯತ್ತ ಹೊರಟಿತ್ತು. ಮಾರ್ಗಮಧ್ಯೆ ಬ್ರೇಕ್ ವಿಫಲವಾಗಿತ್ತು. ಚಾಲಕ, ಅಡ್ಡಾದಿಡ್ಡಿಯಾಗಿ ಬಸ್ ಚಲಾಯಿಸಿದ್ದ. ಎದುರಿಗೆ ಹೊರಟಿದ್ದ ಎರಡು ಕಾರು ಹಾಗೂ ಆಟೊಗೆ ಬಸ್ ಗುದ್ದಿತ್ತು. ನಂತರವೇ ಬಸ್ ನಿಂತುಕೊಂಡಿತ್ತು' ಎಂದು ಹಲಸೂರು ಗೇಟ್ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಅಪಘಾತ ಸ್ಥಳದಲ್ಲಿ ವಾಹನ ದಟ್ಟಣೆಯಿಂದಾಗಿ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ತೆರವು ಮಾಡಿದ ಮೇಲೆಯೇ ದಟ್ಟಣೆ ಕಡಿಮೆಯಾಯಿತು' ಎಂದರು. 'ಅಪಘಾತದಲ್ಲಿ ಯಾರಿಗೂ ಪೆಟ್ಟಾಗಿಲ್ಲ. ಬಸ್ ಚಾಲಕ ಹಾಗೂ ಇತರರಿಂದ ಹೇಳಿಕೆ ಪಡೆಯಲಾಗಿದೆ. ತನಿಖೆ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

ಡೇಟಿಂಗ್ ಆ್ಯಪ್ ಸ್ನೇಹ ₹ 15.37 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯವಾದ ಯುವತಿ ಹಾಗೂ ಇತರರು ಉಡುಗೊರೆ ನೆಪದಲ್ಲಿ ₹15.37 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೊಮ್ಮನಹಳ್ಳಿ ನಿವಾಸಿಯಾಗಿರುವ 30 ವರ್ಷದ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರು ದೂರು ನೀಡಿದ್ದಾರೆ. ಯುವತಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಡೇಟಿಂಗ್ ಆ್ಯಪ್‌ವೊಂದರಲ್ಲಿ ದೂರುದಾರ ಖಾತೆ ಹೊಂದಿದ್ದರು. ಅಲ್ಲಿಯೇ ಯುವತಿ ಪರಿಚಯವಾಗಿತ್ತು. ನಂತರ, ಚಾಟಿಂಗ್ ಮಾಡಲಾರಂಭಿಸಿದ್ದರು. ವಿದೇಶದಲ್ಲಿರುವುದಾಗಿ ಹೇಳಿದ್ದ ಯುವತಿ, ಶೀಘ್ರ ಭಾರತಕ್ಕೆ ಬಂದು ಉಡುಗೊರೆ ನೀಡುವುದಾಗಿ ಹೇಳಿದ್ದರು'.

'ಇದೇ ಜನವರಿ 20ರಂದು ದೂರುದಾರರಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ, 'ನಿಮ್ಮ ಗೆಳತಿ ಉಡುಗೊರೆ ಕಳುಹಿಸಿದ್ದಾರೆ. ಅದು ಸದ್ಯ ದೆಹಲಿ ವಿಮಾನ ನಿಲ್ದಾಣದಲ್ಲಿದೆ. ಅದನ್ನು ಬಿಡಿಸಿಕೊಳ್ಳಲು ಶುಲ್ಕ ಪಾವತಿಸಬೇಕು' ಎಂದಿದ್ದ. ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 15.37 ಲಕ್ಷ ನೀಡಿದ್ದ. ಇದಾದ ನಂತರ, ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದು ತಿಳಿಸಿವೆ.

'ಯುವತಿಯ ಹೆಸರಿನಲ್ಲಿ ನಕಲಿ ಖಾತೆ ತೆರೆದು ಆರೋಪಿಗಳು ವಂಚನೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಮೊಬೈಲ್ ಸಂಖ್ಯೆ ಹಾಗೂ ಇತರೆ ತಾಂತ್ರಿಕ ಪುರಾವೆಗಳನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಪ್ರದರ್ಶನ–2023: ಅತಿಥಿಗಳು: ನಾಗಮಹಮ್ಮಯ್ಯ, ಎಂ.ಆರ್. ಜಯರಾಮ್, ಎಂ.ಆರ್.ಸೀತಾರಾಮ್, ಎಂ.ಆರ್.ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಜಿ. ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮತ್ತಿಕೆರೆ, ಬೆಳಿಗ್ಗೆ 11

ಬಣ್ಣದ ಬೇಸಿಗೆ 'ಮಕ್ಕಳ ರಂಗ ಶಿಬಿರ–2023' ಸಮಾರೋಪ: 'ಅವಗಂಗ ರಂಗಪ್ರಶಸ್ತಿ ಪುರಸ್ಕಾರ' ಪುರಸ್ಕೃತರು: ಜಯಲಕ್ಷ್ಮಿ ಪಾಟೀಲ್, ಅತಿಥಿಗಳು: ಬೈರಮಂಗಲ ರಾಮೇಗೌಡ, ಫಾಲನೇತ್ರ, ದಿನೇಶ್ ಹೆಗಡೆ, ರಾಮಕೃಷ್ಣಯ್ಯ ಎ.ವಿ., ಕೆ.ಶಿರಾಣಕುಮಾರ, ಬೇಲೂರು ರಘುನಂದನ್, ಅನಿಲ್ ಸಿದ್ಧು, ಪ್ರಶಾಂತ ಸಿದ್ಧಿ, ರಮೇಶ್ ಎನ್., ಶ್ರೀಕಂಠಮೂರ್ತಿ ಕೆ.ಆರ್., ಕಥಂಡಲ ಲಕ್ಷ್ಮಣ, 'ಅಲದ ಮರ ಮತ್ತು ಕಂಭೂತ' ನಾಟಕ ಪ್ರದರ್ಶನ: ನಿರ್ದೇಶನ: ನಿಮ್ಮೂರ ನಾಣ್, ಬೆಳಕು: ವಿಶ್ವನಾಥ ಮಂಡಿ, ಸಂಗೀತ: ಪ್ರಶಾಂತ ಸಿದ್ಧಿ, ಪ್ರಸಾಧನ: ಮೋಹನ್, ಆಯೋಜನೆ: ರಂಗಮಂಡಲ ಅವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಸರ್.ಎಂ.ವಿ. ಬಡಾವಣೆ, ಕೆಂಗೇರಿ ಉಪನಗರ, ಸಂಜೆ 4.30

AICTE ಅನುಮೋದಿತ ಅತ್ಯುನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆ GTTC

GTTCಯಲ್ಲಿ Industrial Automation, Robotics, 3D Printing ನಂತಹ ಅತ್ಯಾಧುನಿಕ ಸೌಲಭ್ಯಗಳು ಲಭ್ಯ

GTTC ಡಿಪ್ಲೋಮಾ ವೈಶಿಷ್ಟ್ಯಗಳು...

- ಪ್ರಾಯೋಗಿಕ, ರಚನಾತ್ಮಕ ಕಲಿಕೆಗೆ ಒತ್ತು
- GTTC ವಿದ್ಯಾರ್ಥಿಗಳಿಗೆ ಕೈಗಾರಿಕೆಗಳಲ್ಲಿ ಹೇರಳ ಉದ್ಯೋಗಾವಕಾಶ
- ದೇಶ, ವಿದೇಶಗಳಲ್ಲಿ ರಾಜ್ಯದ GTTC ವಿದ್ಯಾರ್ಥಿಗಳಿಗೆ ಭಾರಿ ಬೇಡಿಕೆ
- GTTC ಡಿಪ್ಲೋಮಾ ಹೊಂದಿದವರಿಗೆ ಎಂಜಿನಿಯರಿಂಗ್ ಕೋರ್ಸ್‌ನ ದ್ವಿತೀಯ ವರ್ಷಕ್ಕೆ Lateral Entry
- ವಿದ್ಯಾರ್ಥಿವೇತನ ಸೌಲಭ್ಯ
- ಸೀಮಿತ ಸಂಖ್ಯೆಯ ಸೀಟುಗಳು/ ಬೇಗ ಪಡೆದವರಿಗೊಬ್ಬೇ ಅವಕಾಶ
- ITI ಹೊಂದಿದವರಿಗೆ ಡಿಪ್ಲೋಮಾ ಕೋರ್ಸ್‌ನ ದ್ವಿತೀಯ ವರ್ಷಕ್ಕೆ Lateral Entry

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC)

Govt. Tool Room & Training Centre

ಉಜ್ವಲ ಭವಿಷ್ಯಕ್ಕೆ GTTC ಡಿಪ್ಲೋಮಾ

2023–24ನೇ ಸಾಲಿನ ಪ್ರವೇಶ ಪ್ರಾರಂಭ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ವು 1972ರಲ್ಲಿ ಸ್ಥಾಪನೆಗೊಂಡು, ರಾಜ್ಯಾದ್ಯಂತ 30 ಡಿಪ್ಲೋಮಾ ಕಾಲೇಜುಗಳನ್ನು ಹೊಂದಿದ್ದು, ಡಿಪ್ಲೋಮಾ, ಪೋಸ್ಟ್ ಡಿಪ್ಲೋಮಾ ಹಾಗೂ ಎಮ್.ಟೆಕ್ ಕೋರ್ಸುಗಳನ್ನು ನಡೆಸುವ "AICTE" ಯಿಂದ ಅನುಮೋದನೆಗೊಂಡ ಅತ್ಯುನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಆಶ್ರಯದಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಡಿಪ್ಲೋಮಾ ಕೋರ್ಸುಗಳು

ಕೋರ್ಸ್	ವಿದ್ಯಾರ್ಹತೆ	ಅವಧಿ (ವರ್ಷಗಳಲ್ಲಿ)	ಕೇಂದ್ರಗಳು
ಡಿಪ್ಲೋಮಾ ಇನ್ ಟೂಲ್ & ಡೈ ಮೇಕಿಂಗ್ (DTDM)	10ನೇ ತರಗತಿ	3+1*	ಜಿಟಿಟಿಸಿಯ ಎಲ್ಲಾ ಡಿಪ್ಲೋಮಾ ಕೇಂದ್ರಗಳು
ಡಿಪ್ಲೋಮಾ ಇನ್ ಪ್ರಿಶಿಷನ್ ಮ್ಯಾನುಫ್ಯಾಕ್ಚರಿಂಗ್ (DPM)	10ನೇ ತರಗತಿ	3+1*	ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ, ಧಾರವಾಡ, ಮಂಗಳೂರು
ಡಿಪ್ಲೋಮಾ ಇನ್ ಮೆಕ್ಯಾಟ್ರಾನಿಕ್ಸ್ (DMCH)	10ನೇ ತರಗತಿ	3+1*	ಬೆಂಗಳೂರು, ಗೌರಿಬಿದನೂರು, ಚಿಕ್ಕೋಡಿ, ಗೋಕಾಕ, ಉಡುಪಿ, ಚಿತ್ರದುರ್ಗ, ಚಳ್ಳಕೆರೆ, ಕೊಪ್ಪಳ, ಯಾದಗಿರಿ, ಮಾಗಡಿ, ದೇವನಹಳ್ಳಿ
ಡಿಪ್ಲೋಮಾ ಇನ್ ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ (DEE)	10ನೇ ತರಗತಿ	3+1*	ಮಾಗಡಿ ಮತ್ತು ದೇವನಹಳ್ಳಿ
ಡಿಪ್ಲೋಮಾ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ & ಮೆಷಿನ್ ಲರ್ನಿಂಗ್ (DAI&ML)	10ನೇ ತರಗತಿ	3+1*	ಮಾಗಡಿ ಮತ್ತು ದೇವನಹಳ್ಳಿ
ಡಿಪ್ಲೋಮಾ ಇನ್ ಆಟೋಮೇಶನ್ & ರೋಬೋಟಿಕ್ಸ್ (DAR) #	10ನೇ ತರಗತಿ	3+1*	ಬೆಳಗಾವಿ ಮತ್ತು ಹರಿಹರ
ಡಿಪ್ಲೋಮಾ ಇನ್ ಇಲೆಕ್ಟ್ರಾನಿಕ್ಸ್ & ಕಮ್ಯೂನಿಕೇಶನ್ ಇಂಜಿನೀಯರಿಂಗ್ (DEC)	10ನೇ ತರಗತಿ	3 ವರ್ಷ	ಬೆಂಗಳೂರು

*ಕಡ್ಡಾಯ ಒಂದು ವರ್ಷದ ಇಂಟರ್ನ್‌ಶಿಪ್ ತರಬೇತಿಯಿಂದಾಗಿ ವಿದ್ಯಾರ್ಥಿಗಳು ಕೈಗಾರಿಕಾ ವಾತಾವರಣಕ್ಕೆ ಹೊಂದಿಕೊಳ್ಳಲು ಸುಲಭವಾಗುತ್ತದೆ. ಈ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸಹ ನೀಡಲಾಗುತ್ತದೆ.

ಪ್ರವೇಶಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಹಾಯವಾಣಿ 155267

ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್ ಸಂಪರ್ಕಿಸಿ https://gttc.karnataka.gov.in

ಡಾ|| ಎಸ್. ಸೆಲ್ವಕುಮಾರ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.

ಜಿಟಿಟಿಸಿಯ 30 ಡಿಪ್ಲೋಮಾ ಕಾಲೇಜುಗಳು

ಕೇಂದ್ರ (ಸ್ಥಾಪನೆ)	ವಿಳಾಸ ಮತ್ತು ಸಂಪರ್ಕ ವಿವರಗಳು
1.ಬೆಂಗಳೂರು (1972)	ರಾಜಾಜಿನಗರ ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು – 560 010 | ಪ್ರಾಂಶುಪಾಲರು: DTDM /DPM: gttctrgbangalore@gmail.com, 9141629575, 080- 29779585 ಪ್ರಾಂಶುಪಾಲರು: ETC / DMCH: principaletcmtc@gmail.com, 9141629580, 080 - 29551134 .
2.ಮೈಸೂರು (1994)	ಪ್ಲಾಟ್ ನಂ: 93&94, ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ, ಕೆಆರ್‌ಎಸ್ ರಸ್ತೆ ಮುಂಭಾಗ, ಮೈಸೂರು - 570 016 | principalstu3@gmail.com | 9141630315, 0821-2582464
3.ಹಾಸನ (1994)	ಪ್ಲಾಟ್ ನಂ.8, KIADB ಇಂಡಸ್ಟ್ರಿಯಲ್ ಏರಿಯಾ, ಡೈರಿ ಸರ್ಕಲ್ ಹತ್ತಿರ, ಹಾಸನ – 573 201 | principalhassan@gmail.com | 08172-240502, 9611674143
4.ಕಲಬುರಗಿ (1994)	ಎಂ. ಜಿ. ರಸ್ತೆ, ದರ್ಶನಪುರ ಲೇಔಟ್, ಸಂತ್ರಾಸವಾಡಿ, ಕಲಬುರಗಿ – 585 101 | gttcglb@gmail.com | 08472-295163, 8722822497, 9113658659
5.ಮಂಗಳೂರು (1994)	ನಂ. 7 KIADB ಇಂಡಸ್ಟ್ರಿಯಲ್ ಏರಿಯಾ, ಬೈಕಂಪಾಡಿ ಮಂಗಳೂರು – 575 011 | gttcmng@gmail.com | 0824-2408003, 9481265587 / 7975621917
6.ದಾಂಡೇಲಿ (1995)	ಪ್ಲಾಟ್ ನಂ.1, KSSIDC ಇಂಡಸ್ಟ್ರಿಯಲ್ ಎಸ್ಟೇಟ್, ಅಂಬೆವಾಡಿ, ದಾಂಡೇಲಿ- 581 325 | gttcdandeli@gmail.com | 08284-230437, 9449356647, 9429530914
7.ಹೊಸಪೇಟೆ (1995)	ಹರಿಹರ ರಸ್ತೆ, ಮರಿಯಮ್ಮನಹಳ್ಳಿ, ಹೊಸಪೇಟೆ – 583201 | gttcmmhalli@gmail.com | 9379853899
8.ಬೆಳಗಾವಿ (1998)	ಉದ್ಯಮ್ ಬಾಗ್, ಬೆಳಗಾವಿ- 590 008 | gttc_bgm@yahoo.com | 9141630309, 9886496741, 0831-2950611
9.ಧಾರವಾಡ (1998)	ಪ್ಲಾಟ್ ನಂ. 38 ರಿಂದ 45, ರಾಯಾಪುರ KIADB ಇಂಡಸ್ಟ್ರಿಯಲ್ ಏರಿಯಾ, ಧಾರವಾಡ - 580 009 | gttchubli@gmail.com | 9035630312/ 9448236279 / 0836- 2970211
ಹುಬ್ಬಳ್ಳಿ (ಕೌಶಲ್ಯ ಅಭಿವೃದ್ಧಿ ಕೇಂದ್ರ)	ಶೆಡ್ ನಂ. ಬಿ–467, ಬಿ–474, ಗೋಕುಲ ರಸ್ತೆ, ಹುಬ್ಬಳ್ಳಿ – 580 030 | gttchubli.sdc@gmail.com | 0836-2333159, 9902101010
10.ಹರಿಹರ (1998)	ಪ್ಲಾಟ್ ನಂ. 22 ಸಿ&ಡಿ KIADB ಇಂಡಸ್ಟ್ರಿಯಲ್ ಏರಿಯಾ, ಹರಿಹರ – 577 602 | gttcharihar@gmail.com | 08192-243937, 8711913947
11.ಕೂಡಲಸಂಗಮ (2000)	ಕೂಡಲಸಂಗಮ – 587 115 ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | gttc.kudalasangama@gmail.com | 08351-268048, 9902556110 / 7411811916
12. ಮದ್ದೂರು (2000)	ಸೋಮನಹಳ್ಳಿ, ಬಿಎಮ್ ರಸ್ತೆ, ಮದ್ದೂರು – 571 429 | gttcmaddur@gmail.com | 08232-298188, 9141629597
13.ಕನಕಪುರ (2005)	ಸಂಗಮ ರಸ್ತೆ, ಕನಕಪುರ - 562 117 | gttckanakapura@gmail.com | 080-29561075, 6361122792
14.ಲಿಂಗಸುಗೂರು (2005)	ಸರ್ಕಾರಿ ತೋಟ, ಕರಡಕಲ್ ರಸ್ತೆ, ಲಿಂಗಸುಗೂರು- 584 122 | gttc.lingasugur@gmail.com | 9916231899, 8762564872
15.ಗುಂಡ್ಲುಪೇಟೆ (2007)	ದುಂದಾಸನಪುರ, ಹೊಸೂರು ರಸ್ತೆ, ಗುಂಡ್ಲುಪೇಟೆ – 571 111 | gttc.gundlupet@gmail.com | 08229-297344, 8147384716
16.ಹುಮ್ನಾಬಾದ್ 2007)	ಪ್ಲಾಟ್ ನಂ. 127 ಬಿಬಿ, KIADB ಇಂಡಸ್ಟ್ರಿಯಲ್ ಏರಿಯಾ, ಆರ್‌ಟಿಓ ಚೆಕ್‌ಪೋಸ್ಟ್, ಹುಮ್ನಾಬಾದ್ – 585 330 | gttchbd@gmail.com | 8867441317 / 7353667070
17.ಕಡೂರು (2007)	NH-206, ವೇದ ಪಂಪ್ ಹೌಸ್ ಹತ್ತಿರ, ಬಿಹೆಚ್ ರಸ್ತೆ, ಕಡೂರು – 577 548 | gttckadur@gmail.com | 9980344441
18.ತುಮಕೂರು (2009)	ಹಿರೇಹಳ್ಳಿ ಇಂಡಸ್ಟ್ರಿಯಲ್ ಏರಿಯಾ, ತುಮಕೂರು – 572168 | tumkurgttc@gmail.com | 9916769649
19.ಕೋಲಾರ (2010)	ಹಳೆ ಡಿಐಸಿ ಬಿಲ್ಡಿಂಗ್ ಆವರಣ, ಕ್ಲಾಕ್ ಟವರ್ ಹತ್ತಿರ, ಕೋಲಾರ – 563 101 | gttckolar@gmail.com | 08152-295317 / 9886839574
20.ಶಿವಮೊಗ್ಗ (2010)	ಸಿ–38, ನಿದಿಗೆ ಕೈಗಾರಿಕಾ ಪ್ರದೇಶ, ಮಾಚೇನಹಳ್ಳಿ, ಶಿವಮೊಗ್ಗ – 577 222 | gttcshivamogga@gmail.com | 9448307027 / 9902232839
21.ಗೌರಿಬಿದನೂರು (2016)	#1ಪಿ/1ಎ, 1ನೇ ಹಂತ, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಕುಡುಮಲಕುಂಟೆ, ಹಿಂದೂಪುರ ರಸ್ತೆ, ಗೌರಿಬಿದನೂರು – 561208 | gttcgowribidanuru@gmail.com | 8884585436
22.ಚಿಕ್ಕೋಡಿ (2017)	Sy. No.326/A, ಸರ್ಕಾರಿ ಪದವಿ ಕಾಲೇಜ್, ನಿಪ್ಪಾಣಿ ರಸ್ತೆ, ಚಿಕ್ಕೋಡಿ- 591 201 | gttcchikodi@gmail.com | 9535758457
23.ಗೋಕಾಕ್ (2020)	ನಾಡ ಕಛೇರಿ ಹತ್ತಿರ, ಅರಭಾವಿ – 591 306, ಗೋಕಾಕ್ ತಾಲ್ಲೂಕ್, ಬೆಳಗಾವಿ ಜಿಲ್ಲೆ | gttcarabhavi2020@gmail.com | 9538570950
24.ಉಡುಪಿ (2020)	ಸರ್ಕಾರಿ ಪ್ರೌಢಶಾಲೆ ಹತ್ತಿರ, ಕೂಳಲಗಿರಿ, ಉಪ್ಪೂರು, ಉಡುಪಿ – 576 105 | gttcudupi@gmail.com | 0820-2950101, 9880510585
25.ಚಿತ್ರದುರ್ಗ (2021)	ನಂ. 44, ಹಳೇ ಬೆಂಗಳೂರು ರಸ್ತೆ, ಕುಂಚಿಗನಾಳ, ಚಿತ್ರದುರ್ಗ - 577 524 | gttchitradurga@gmail.com | 8073493120
26.ಚಳ್ಳಕೆರೆ (2021)	ನಂ. 117, ಬಳ್ಳಾರಿ ರಸ್ತೆ, ಚಳ್ಳಕೆರೆ - 577 522 | gttcchallakere@gmail.com | 7019066755 / 7625008644
27.ಯಾದಗಿರಿ (2021)	ಪ್ಲಾಟ್ ನಂ.486, ಕಡೇಚುರು ಬಡಿಯಾಲ್ ಇಂಡಸ್ಟ್ರಿಯಲ್ ಏರಿಯಾ, ರಾಯಚೂರು ಮೈನ್‌ರೋಡ್, ಯಾದಗಿರಿ–585221. gttcyadgir01@gmail.com | 9738255123 / 8087764454
28.ಕೊಪ್ಪಳ (2021)	ಗದಗ ದಡೇಗಲ್ ರಸ್ತೆ, ಕೊಪ್ಪಳ – 583231. | gttckoppal@gmail.com | 9986088894 / 7507094445
# ನೂತನ ಜಿಟಿಟಿಸಿ ಕೇಂದ್ರಗಳು:	
29.ಮಾಗಡಿ# (2023)	ಸರ್ವೆ ನಂ 21, ಚಿಕ್ಕಕಲ್ಯಾ ಗ್ರಾಮ, ತಿಪ್ಪಸಂದ್ರ ಹೋಬಳಿ, ಮಾಗಡಿ, ರಾಮನಗರ–562131 | gttcmagadi@gmail.com 9845416198/8970234857
30.ದೇವನಹಳ್ಳಿ# (2023)	ಸರ್ವೆ ನಂ 183, ಚನ್ನರಾಯಪಟ್ಟಣ, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ–562135 | gttcdevanahalli@gmail.com | 9036144417/9964730789

ವಿ.ಸೂ: AICTE ಅನುಮೋದನೆ ನಿರೀಕ್ಷೆಯಲ್ಲಿದೆ.

ಜಯನಗರ ಕ್ಷೇತ್ರ: ಬಿಜೆಪಿಗೆ ನೆರವಾದ ಅಂಚೆ ಮತ್ತು ಮನೆಯಿಂದಲೇ ಚಲಾವಣೆಯಾಗಿದ್ದ ಮತಗಳು

ಕಡಿಮೆ ಅಂತರದ ದಾಖಲೆ ವಿಜಯ

ಪ್ರಜಾವಾಣಿ ವಾರ್ತೆ

ಸಿ.ಕೆ. ರಾಮಮೂರ್ತಿ

ಸೌಮ್ಯ ರೆಡ್ಡಿ

ಬೆಂಗಳೂರು: ಪ್ರತಿಷ್ಠಿತ ಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ 16 ಮತಗಳ ಅಂತರದಿಂದ ವಿಜಯ ಸಾಧಿಸಿದೆ. ಕ್ಷೇತ್ರ ಪುನರ್‌ವಿಂಗಡಣೆ ನಂತರ ಬೆಂಗಳೂರು ನಗರ ಜಿಲ್ಲೆಯಲ್ಲಿ ಈವರೆಗಿನ ಅತಿ ಕಡಿಮೆ ಅಂತರದ ಗೆಲುವು ಇದಾಗಿದ್ದು, ದಾಖಲೆ ನಿರ್ಮಿಸಿದೆ.

ಗಾಂಧಿನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ದಿನೇಶ್ ಗುಂಡೂರಾವ್ 105 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದೇ ಅತಿ ಕಡಿಮೆ ಅಂತರ ಎಂದು ದಾಖಲಾಗಿತ್ತು. ಆದರೆ ಬುಧವಾರ ಮಧ್ಯರಾತ್ರಿ ವೇಳೆಗೆ ಆ ದಾಖಲೆ ಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ ಪಾಲಾಯಿತು.

ಜಯನಗರದ ಎಸ್‌ಎಸ್‌ಎಂಆರ್‌ವಿ ಪಿಯು ಕಾಲೇಜಿನಲ್ಲಿ ಕ್ಷೇತ್ರದ ಮತ ಎಣಿಕೆ ನಡೆದಿತ್ತು. ಮತಯಂತ್ರಗಳ ಎಣಿಕೆ ಮುಗಿದಾಗ, ಕಾಂಗ್ರೆಸ್‌ನ ಸೌಮ್ಯ ರೆಡ್ಡಿ ಅವರಿಗೆ 57,591 ಮತಗಳು ಬಂದಿದ್ದವು. ಬಿಜೆಪಿಯ ಸಿ.ಕೆ. ರಾಮಮೂರ್ತಿ 57,297 ಮತಗಳನ್ನು ಗಳಿಸಿದ್ದರು. 294 ಮತಗಳಿಂದ ಕಾಂಗ್ರೆಸ್ ಮುನ್ನಡೆ ಸಾಧಿಸಿದ್ದಾಗ ಬಿಜೆಪಿ ಅಂಚೆ ಮತಗಳ ಮರು ಎಣಿಕೆಗೆ ಪಟ್ಟು ಹಿಡಿಯಿತು.

ಅಂಚೆ ಮತಗಳ ಎಣಿಕೆ ಮೊದಲೇ ಮುಗಿದಿತ್ತು. ಅವುಗಳಲ್ಲಿ ಸುಮಾರು 30 ಮತ ತಿರಸ್ಕರಿಸಲಾಗಿತ್ತು. ಈ ಬಗ್ಗೆ ಪರಿಶೀಲಿಸಬೇಕು ಎಂದು ಚುನಾವಣಾ ವೀಕ್ಷಕರಿಗೆ ಬಿಜೆಪಿಯ ಏಜೆಂಟರು ಕೋರಿದರು. ಸಂಸದ ತೇಜಸ್ವಿ ಸೂರ್ಯ ಸ್ಥಳಕ್ಕೆ ಬಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ರಾಮಲಿಂಗಾರೆಡ್ಡಿ ಕೂಡ ಅಲ್ಲಿದ್ದು, ತಿರಸ್ಕರಿಸಿರುವ ಮತಗಳನ್ನು ಮತ್ತೆ ಪರಿಗಣಿಸುವುದು ಅಥವಾ ಮರು ಎಣಿಕೆ ಬೇಡ ಎಂದು ಪಟ್ಟುಹಿಡಿದರು.

'ಒಟ್ಟು 750 ಅಂಚೆ ಮತಗಳಿದ್ದವು. ಮನೆಯಿಂದ ಮತದಾನ ಮಾಡಿದ್ದ ಮತಗಳು ಇದ್ದವು. 30 ಮತಪತ್ರಗಳನ್ನು ಅಧಿಕಾರಿ ಸೀಲ್ ಹಾಕಿಲ್ಲ ಎಂಬ ಕಾರಣಕ್ಕಾಗಿ ಎಣಿಕೆ ವೇಳೆ ತಿರಸ್ಕರಿಸಲಾಗಿತ್ತು. ಇದು ಅಧಿಕಾರಿಗಳ ತಪ್ಪು, ಮತದಾರರದ್ದು ಅಲ್ಲ. ನಿಯಮದಂತೆ ಇವುಗಳನ್ನು ಪರಿಗಣಿಸಬೇಕು ಎಂದು ಆಗ್ರಹ ಪಡಿಸಲಾಯಿತು. ಅದರಂತೆ ಕ್ರಮ ಕೈಗೊಂಡರು' ಎಂದು ಬಿಜೆಪಿ ಬೂತ್ ಏಜೆಂಟ್ ಸೋಮಶೇಖರ್ ಹೇಳಿದರು.

ತಿರಸ್ಕರಿಸಿದ್ದ ಮತಗಳನ್ನು ನಿಯಮದಂತೆ ಪರಿಗಣಿಸಿದಾಗ, ಬಿಜೆಪಿಗೆ 17 ಮತಗಳ ಮುನ್ನಡೆ ದೊರೆಯಿತು. ಆ ಮತಗಳಲ್ಲಿ ಒಂದು ತೀರಾ ಗೋಜಲಾಗಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಸೌಮ್ಯ ರೆಡ್ಡಿ ಆರೋಪಿಸಿದರು. ಅದನ್ನು ಕೈಬಿಡಲಾಯಿತು. ಕೊನೆಗೆ 16 ಮತಗಳ ಮುನ್ನಡೆ ಬಿಜೆಪಿ ಅಭ್ಯರ್ಥಿ ಸಿ.ಕೆ.ರಾಮಮೂರ್ತಿ ಅವರಿಗೆ ಲಭಿಸಿತು. ಈ ಹಿಂದೆ ಫಲಿತಾಂಶ ಪ್ರಕಟಿಸಿದಂತೆ, ಹಳೆಯ 160 ಮತಗಳಿಂದ ಮುಂದಿದ್ದ ಕಾಂಗ್ರೆಸ್ ಅಭ್ಯರ್ಥಿಗೆ ಗೆಲುವು ಘೋಷಿಸಬೇಕೆಂದು ರಾಮಲಿಂಗಾರೆಡ್ಡಿ ಒತ್ತಾಯಿಸಿದರು. ಡಿ.ಕೆ. ಶಿವಕುಮಾರ್, ಸಂಸದ ಡಿ.ಕೆ.ಸುರೇಶ್, ಬಿಜೆಪಿಯ ಆರ್. ಅಶೋಕ ಅವರು ಸ್ಥಳಕ್ಕೆ ಬಂದಿದ್ದರಿಂದ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು.

ಶನಿವಾರ ಮಧ್ಯಾಹ್ನ 3.30ರಿಂದ ಈ ಪ್ರಹಸನ ಆರಂಭಗೊಂಡು ಮಧ್ಯರಾತ್ರಿವರೆಗೂ ನಡೆಯಿತು. ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸ್ಥಳಕ್ಕೆ ಬಂದು ಮೂರು ಬಾರಿ ನಡೆದ ಮತಗಳ ಮರು ಎಣಿಕೆ, ಪರಿಗಣಿಸಿದ ಪ್ರಕ್ರಿಯೆಯನ್ನು ಪರಿಶೀಲಿಸಿದರು. ಎಲ್ಲವೂ ನಿಯಮದಂತೇ ಇದೆ ಎಂದು ಸಾಬೀತುಪಡಿಸಿದ ಮೇಲೆ ಬಿಜೆಪಿ ಅಭ್ಯರ್ಥಿ 16 ಮತಗಳಿಂದ ಜಯಗಳಿಸಿದ್ದಾರೆ ಎಂದು ಘೋಷಿಸಿ, ಪ್ರಮಾಣಪತ್ರ ವಿತರಿಸಿದರು.

ಅಂತಿಮವಾಗಿ, 750 ಮತಗಳಲ್ಲಿ 500 ಮತಗಳು ಬಿಜೆಪಿಗೆ ಹಾಗೂ 190 ಮತಗಳು ಕಾಂಗ್ರೆಸ್‌ಗೆ ಲಭಿಸಿದ್ದವು. ಉಳಿದವು ಇತರೆ ಪಕ್ಷಗಳಲ್ಲಿ ಹಂಚಿಹೋಗಿದ್ದವು. ಹೀಗಾಗಿ, ಕೊನೆಗೆ ಇವಿಎಂ ಮತಗಳು ಸೇರಿದಂತೆ 57,797 ಮತಗಳನ್ನು ರಾಮಮೂರ್ತಿ ಪಡೆದರೆ, ಸೌಮ್ಯ ರೆಡ್ಡಿ 57,781 ಮತಗಳಿಸಿದರು. ಬಿಜೆಪಿ ಅತ್ಯಂತ ಕಡಿಮೆ ಅಂತರದ ಗೆಲುವು ದಾಖಲಿಸಿತು.

ಜಿದ್ದಾಜಿದ್ದಿ ಸ್ಪರ್ಧೆ

ಜಯನಗರ ಕ್ಷೇತ್ರದಲ್ಲಿ ಎರಡು ಬಾರಿ ರಾಮಲಿಂಗಾರೆಡ್ಡಿ ವಿರುದ್ಧ ಸೋಲುಂಡಿದ್ದ ಬಿಜೆಪಿಯ ವಿಜಯಕುಮಾರ್, ಕ್ಷೇತ್ರ ಮರುವಿಂಗಡಣೆಯಾದ ನಂತರದ 2008ರಿಂದ ಜಯನಗರದಲ್ಲಿ ಎರಡು ಬಾರಿ ಗೆಲುವು ಸಾಧಿಸಿದ್ದರು. 2018ರಲ್ಲಿ ಅವರ ನಿಧನಾನಂತರ ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯ ರೆಡ್ಡಿ ಅವರು ಜೆಡಿಎಸ್ ಜೊತೆ ಹೊಂದಾಣಿಕೆಯೊಂದಿಗೆ ಗೆದ್ದಿದ್ದರು. ಈ ಕ್ಷೇತ್ರವನ್ನು ಮರುಪಡೆಯಬೇಕೆಂದು ಬಿಜೆಪಿ ಈ ಬಾರಿ ಶತಾಯಗತಾಯ ಪ್ರಯತ್ನಿಸಿತ್ತು. ತೀವ್ರ ಜಿದ್ದಾಜಿದ್ದಿಯಿಂದ ಕೂಡಿದ್ದ ಕ್ಷೇತ್ರದಲ್ಲಿ ಅತಿ ಕಡಿಮೆ ಅಂತರದ ಜಯ ದಾಖಲಾಗಿದೆ. ಇದರೊಂದಿಗೆ ಬಿಬಿಎಂಪಿಯ ಮಾಜಿ ಕಾರ್ಪೊರೇಟರ್ ಸಿ.ಕೆ. ರಾಮಮೂರ್ತಿ ಪ್ರಥಮ ಬಾರಿಗೆ ವಿಧಾನಸಭೆಗೆ ಪ್ರವೇಶಿಸುತ್ತಿದ್ದಾರೆ.

'ಎಲ್ಲವೂ ನಿಯಮದಂತೆ'

ಮತ ಎಣಿಕೆ ಕೇಂದ್ರದ ಕೊಠಡಿಗೆ ಮೊದಲು ರಾಮಲಿಂಗಾರೆಡ್ಡಿ ಅವರು ಬಂದು ಕೂಗಾಡಿದರು. ಅಧಿಕಾರಿಗಳು ಪ್ರತಿ ಮತದ ಮರು ಎಣಿಕೆಯನ್ನೂ ರೆಕಾರ್ಡ್ ಮಾಡಿದ್ದಾರೆ. ಎಲ್ಲ ನಿಯಮದಂತೆಯೇ ನಡೆದಿದೆ ಎಂದು ಬಿಜೆಪಿಯ ಸಿ.ಕೆ.ರಾಮಮೂರ್ತಿ ತಿಳಿಸಿದರು.

ಶಾಸಕಾಂಗ ಪಕ್ಷದ ಸಭೆ

ನಗರದಲ್ಲಿ ಭಾನುವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸಿದ್ದ ಶಾಸಕರಾದ ನರೇಂದ್ರ ಸ್ವಾಮಿ, ಚಲುವರಾಯಸ್ವಾಮಿ, ಕೆ.ವೆಂಕಟೇಶ್, ಟಿ.ಬಿ. ಜಯಚಂದ್ರ, ಆರ್.ವಿ.ದೇಶಪಾಂಡೆ ಹಾಗೂ ಇತರರು –ಪ್ರಜಾವಾಣಿ ಚಿತ್ರ

ನೂತನ ಶಾಸಕರ ಪಟ್ಟಿ: ಆಯೋಗದಿಂದ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿರುವ 224 ಮಂದಿಯ ಹೆಸರನ್ನು ಕೇಂದ್ರ ಚುನಾವಣಾ ಆಯೋಗವು ಭಾನುವಾರ ರಾಜ್ಯಪತ್ರದ ಮೂಲಕ ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಮೇ 10ರಂದು ಮತದಾನ ನಡೆದಿದ್ದು, ಶನಿವಾರ ಮತಗಳ ಎಣಿಕೆ ನಡೆದಿತ್ತು. ಪ್ರಜಾಪ್ರತಿನಿಧಿ ಕಾಯ್ದೆ ಅಡಿಯಲ್ಲಿ ಅಧಿಸೂಚನೆ ಹೊರಡಿಸಿರುವ ಆಯೋಗ, ಎಲ್ಲ ಕ್ಷೇತ್ರಗಳಿಗೆ ಆಯ್ಕೆಯಾಗಿರುವ ಶಾಸಕರ ಹೆಸರು ಮತ್ತು ಪಕ್ಷದ ಹೆಸರನ್ನು ಪ್ರಕಟಿಸಿದೆ.

ರಾಜ್ಯಪಾಲರಿಗೆ ಪಟ್ಟಿ ಸಲ್ಲಿಕೆ: ಕೇಂದ್ರ ಚುನಾವಣಾ ಆಯೋಗದ ಉಪ ಚುನಾವಣಾ ಆಯುಕ್ತ ಅಜಯ್ ಬಾಡೂ ನೇತೃತ್ವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿದ ಆಯೋಗದ ಅಧಿಕಾರಿಗಳು, ನೂತನ ಶಾಸಕರ ಪಟ್ಟಿ ಸಲ್ಲಿಸಿದರು.

ಆಯೋಗದ ಪ್ರಧಾನ ಕಾರ್ಯದರ್ಶಿ ನರೇಂದ್ರ ಎನ್. ಬುಟೋಲಿಯ, ಕಾರ್ಯದರ್ಶಿ ಬಿ.ಸಿ. ಪಾತ್ರ, ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿಗಳಾದ ರಾಜೇಂದ್ರ ಚೋಳನ್ ಮತ್ತು ವೆಂಕಟೇಶ್ ಕುಮಾರ್ ಈ ನಿಯೋಗದಲ್ಲಿದ್ದರು.

ಲಿಂಗಾಯತ ಸಮಾಜಕ್ಕೆ ಸಿ.ಎಂ ನಂತರದ ಸ್ಥಾನ ನೀಡಲಿ: ರಂಭಾಪುರಿ ಶ್ರೀ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಸಮಾಜವು ಹೆಚ್ಚಿನ ಪ್ರಮಾಣದಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಬೆಂಬಲಿಸಿದೆ. ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ನಂತರದ ಸ್ಥಾನವನ್ನು ವೀರಶೈವ ಲಿಂಗಾಯತ ಸಮಾಜಕ್ಕೇ ನೀಡಬೇಕು' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಪೀಠಾಧ್ಯಕ್ಷ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಒತ್ತಾಯಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿ, 'ಕಾಂಗ್ರೆಸ್‌ಗೆ ಜನರೇ ಪ್ರಚಂಡ ಜಯ ತಂದುಕೊಟ್ಟಿದ್ದಾರೆ. ಪಕ್ಷವು ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು.

'ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೂ ಪಕ್ಷಕ್ಕಾಗಿ ದುಡಿದಿದ್ದಾರೆ. ಮುಖ್ಯಮಂತ್ರಿ ಯಾರು ಎಂಬುದನ್ನು ಆ ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ. ಸ್ವಾಮೀಜಿಯಾಗಿ ನಾನು ಪ್ರತಿಕ್ರಿಯಿಸುವುದಿಲ್ಲ. ಯಾರೇ ಅಧಿಕಾರಕ್ಕೆ ಬಂದರೂ ಉತ್ತಮ ಆಡಳಿತ ನೀಡಬೇಕು' ಎಂದು ಹೇಳಿದರು.

ಬಿಜೆಪಿ ಮಣಿಸಲು ನೆರವಾದ 'ಎದ್ದೇಳು ಕರ್ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ, ದುರಾಡಳಿತ, ಜನರನ್ನು ಕಾಡುತ್ತಿರುವ ಬೆಲೆ ಏರಿಕೆಯ ವಿರುದ್ಧ ಹಲವು ಮಂದಿ ಲೇಖಕರು, ಚಿಂತಕರು, ಹೋರಾಟಗಾರರು ಒಗ್ಗೂಡಿ ರಾಜ್ಯವ್ಯಾಪಿ ನಡೆಸಿದ 'ಎದ್ದೇಳು ಕರ್ನಾಟಕ' ಅಭಿಯಾನ ಕೂಡ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸಲು ನೆರವಾಗಿದೆ.

ಸಾಹಿತಿಗಳಾದ ದೇವನೂರ ಮಹಾದೇವ, ಜಿ.ಎನ್. ದೇವಿ, ರಾಜಕೀಯ ವಿಶ್ಲೇಷಕ ಯೋಗೇಂದ್ರ ಯಾದವ್ ಸೇರಿದಂತೆ ಹಲವರು ಈ ಅಭಿಯಾನದ ನೇತೃತ್ವ ವಹಿಸಿದ್ದರು.

ರಾಜ್ಯದ ನೂರಾರು ಮಂದಿ ಬರಹಗಾರರು, ಸಾಹಿತಿಗಳು, ಚಿಂತಕರು, ಹೋರಾಟಗಾರರು ಅಭಿಯಾನದ ಜತೆ ಕೈಜೋಡಿಸಿದ್ದರು. ಅನೇಕ ಸಮಾನಮನಸ್ಕ ಸಂಘಟನೆಗಳು ರಾಜ್ಯದ ಉದ್ದಗಲ ಅಭಿಯಾನ ನಡೆಸಿದ್ದವು.

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರಗಳು ಹಿಂದಿನ ಚುನಾವಣೆಗೂ ಮುನ್ನ ಜನರಿಗೆ ನೀಡಿದ್ದ ಭರವಸೆಗಳು, ಅವುಗಳನ್ನು ಅನುಷ್ಠಾನಗೊಳಿಸದೇ ಇರುವ ಕುರಿತು ಜನರಿಗೆ ಜಾಗೃತಿ ಮೂಡಿಸುವ ಕೆಲಸವನ್ನು ಅಭಿಯಾನದಲ್ಲಿ ಮಾಡಿತ್ತು. ಬೆಲೆ ಏರಿಕೆಯನ್ನು ತಡೆಯಲು ಬಿಜೆಪಿಯ ವಿರುದ್ಧ ಮತ ಚಲಾಯಿಸುವಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜಾಥಾ ನಡೆಸಲಾಗಿತ್ತು.

ಮಾರ್ಚ್ ಮೊದಲ ವಾರ ಆರಂಭವಾದ ಅಭಿಯಾನ ಮತದಾನ ಪೂರ್ಣಗೊಳ್ಳುವವರೆಗೂ ನಡೆದಿತ್ತು. ಸಾಹಿತಿಗಳು, ಕಲಾವಿದರು ಮತ್ತು ಹೋರಾಟಗಾರರು ಹಲವು ತಂಡಗಳಾಗಿ ರಾಜ್ಯದ ಉದ್ದಗಲಕ್ಕೆ ಸಂಚರಿಸಿ ಪತ್ರಿಕಾಗೋಷ್ಠಿ, ಸಾರ್ವಜನಿಕ ಸಭೆಗಳ ಮೂಲಕ ಬಿಜೆಪಿಯ ವಿರುದ್ಧ ಮತ ಚಲಾಯಿಸುವಂತೆ ಮತದಾರರ ಮನವೊಲಿಸುವ ಪ್ರಯತ್ನ ಮಾಡಿದ್ದರು.

ಸದ್ದು ಮಾಡಿದ ಹಾಡು

ನೆರೆ, ಬರ, ಕೋವಿಡ್‌ನಂತಹ ಸಂಕಷ್ಟಗಳ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿನ ಜನರ ನೆರವಿಗೆ ನಿಲ್ಲಲಿಲ್ಲ. ಆದರೆ, ಚುನಾವಣೆ ಬಂದಾಗ ಪದೇ ಪದೇ ಬರುತ್ತಾರೆ ಎಂಬುದನ್ನು ಬಿಂಬಿಸುವ 'ಕಷ್ಟದ ಕಾಲ ಬಂದಾಗವ್ವ ಮೋದಿ ಬರಲಿಲ್ಲ ನೋಡಾಕ...' ಎಂಬ ಹಾಡಿನ ತುಣುಕನ್ನು ಸಿದ್ಧಪಡಿಸಿದ 'ಎದ್ದೇಳು ಕರ್ನಾಟಕ' ತಂಡ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟಿತು.

ಅತ್ಯಂತ ಸುಶ್ರಾವ್ಯವಾಗಿ ಹಾಡಿದ್ದ ಹಾಡು ದೊಡ್ಡ ಸಂಖ್ಯೆಯಲ್ಲಿ ಹಂಚಿಕೆಯಾಯಿತು. ಸಾಮಾಜಿಕ ಮಾಧ್ಯಮಗಳಲ್ಲಿ ಜೋರು ಸದ್ದು ಮಾಡಿತ್ತು.

ಸಂಕ್ಷಿಪ್ತ ಸುದ್ದಿ

ಶಕ್ತಿ ತೋರಿಸುವೆ: ಪ್ರೀತಂ ಆಕ್ರೋಶ

ಹಾಸನ: 'ಒಂದು ವರ್ಗದ ಜನ ಏನು ನಮಗೆ ತೋರಿಸಿದ್ದಾರೆ, ಆ ವರ್ಗದ ಜನರಿಗೆ ಮುಂದಿನ ದಿನಗಳಲ್ಲಿ ನಾವೇನೆಂದು ಹಾಸನದಲ್ಲಿ ತೋರಿಸುತ್ತೇನೆ. ಇದು ಸೂರ್ಯ, ಚಂದ್ರ ಇರುವುದು ಎಷ್ಟು ಸತ್ಯವೋ ಅಷ್ಟೇ ಸತ್ಯ' ಎಂದು ಪರಾಜಿತ ಬಿಜೆಪಿ ಅಭ್ಯರ್ಥಿ ಪ್ರೀತಂಗೌಡ ಆಕ್ರೋಶ ಹೊರಹಾಕಿದ್ದಾರೆ.

ಫಲಿತಾಂಶದ ನಂತರ ತಮ್ಮ ಮನೆಯ ಬಾಲ್ಕನಿಯಲ್ಲಿ ನಿಂತು ಮಾತನಾಡಿರುವ ಪ್ರೀತಂ, 'ಸೋಲಿಗೆ ಒಂದು ಸಮುದಾಯವೇ ಕಾರಣ' ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ವಿಶ್ವಾಸ, ಪ್ರೀತಿಯಿಂದ ಇಡೀ ಸಮಾಜವನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಆ ಪ್ರಯತ್ನದ ನಡುವೆಯೂ ನನ್ನನ್ನು ದ್ವೇಷಿಸುವ ಕೆಲಸವನ್ನು ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅವರ ದೇವರು ಅವರನ್ನು ಕಾಪಾಡಿಕೊಳ್ಳಲಿ. ಪ್ರೀತಂ ಗೌಡನ ಶಕ್ತಿ ಏನೆಂಬುದನ್ನು ತೋರಿಸುತ್ತೇನೆ' ಎಂದು ಗುಡುಗಿದ್ದಾರೆ.

'ಐದು ವರ್ಷ ಕೆಲಸ ಮಾಡಿದ್ದೇವೆ. ಕೋವಿಡ್ ಸೇರಿದಂತೆ ಕಷ್ಟದ ಸಂದರ್ಭದಲ್ಲಿ ಕೆಲವರು ಮನೆಯಲ್ಲಿ ಮಲಗಿದ್ದರು. ಆದರೆ, ಕೆಲಸ ಮಾಡಿರುವ ನಾವು ಇಲ್ಲಿದ್ದೇವೆ. ಜನ ಇದನ್ನೆಲ್ಲ ಮರೆತಿರುವುದಿಲ್ಲ' ಎಂದು ಹೇಳಿದ್ದಾರೆ.

ಎಚ್‌ಡಿಕೆ ಗೆಲುವು: ಮುಡಿ ಕೊಟ್ಟ ಅಭಿಮಾನಿ

ಚನ್ನಪಟ್ಟಣ: ಜೆಡಿಎಸ್ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಜಯ ಸಾಧಿಸಿದರೆ ಕೇಶ ಮುಡಿ ಕೊಡುವುದಾಗಿ ಹರಕೆ ಹೊತ್ತಿದ್ದ ತಾಲ್ಲೂಕಿನ ಜಗದಾಪುರ ಕೃಷ್ಣೇಗೌಡ ಭಾನುವಾರ ಕೆಂಗಲ್ ಆಂಜನೇಯ ಸ್ವಾಮಿಗೆ ಮುಡಿ ಕೊಡುವ ಮೂಲಕ ಹರಕೆ ತೀರಿಸಿದರು.

ನಗರದಲ್ಲಿ ಹಣ್ಣಿನ ಅಂಗಡಿ ಇಟ್ಟುಕೊಂಡಿರುವ ಕೃಷ್ಣೇಗೌಡ ಹರಕೆ ತೀರಿಸಿದ ಬಗ್ಗೆ ಫೇಸ್‌ಬುಕ್‌ನಲ್ಲಿ ಫೋಟೊ ಹಂಚಿಕೊಂಡಿದ್ದಾರೆ. ಎಚ್.ಡಿ. ದೇವೇಗೌಡ ಹಾಗೂ ಕುಮಾರಸ್ವಾಮಿ ಅಭಿಮಾನಿ ಎಂದು ಹೇಳಿಕೊಂಡಿದ್ದಾರೆ.

'ದ್ವೇಷ ರಾಜಕಾರಣ ಮಾಡಲ್ಲ'

ನಾಗಮಂಗಲ: 'ಆರೋಗ್ಯದ ಸಮಸ್ಯೆ ಇರುವ ಸಂಸದ ಎಚ್.ಡಿ. ದೇವೇಗೌಡರ ಆಶೀರ್ವಾದವನ್ನು ಇದ್ದ ಜಾಗದಲ್ಲಿ ಪಡೆದು ಚುನಾವಣೆ ಹೋಗದೆ ಅವರನ್ನು ರಾಜ್ಯ ಸುತ್ತುವಂತೆ ಮಾಡಿದವರಿಗೆ ದೇವರು ಬುದ್ಧಿಕೊಡಲಿ' ಎಂದು ಶಾಸಕ ಚಲುವರಾಯಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಭಾನುವಾರ ಚುನಾವಣಾ ಫಲಿತಾಂಶದ ನಂತರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಜಿಲ್ಲೆಯ ಎಲ್ಲಾ ದೇವರ ಆಶೀರ್ವಾದದಿಂದ ಒಳ್ಳೆಯದಾಗಿದೆ. ಹಿಂದೆಯಿದ್ದ ಶಾಸಕರು, ಜೆಡಿಎಸ್ ಮುಖಂಡರು ನಮ್ಮನ್ನು ಹೇಗೆ ನಡೆಸಿಕೊಂಡರು ಎಂಬುದು ಎಲ್ಲರಿಗೂ ಗೊತ್ತಿದೆ. ಜೊತೆಗೆ ನಮ್ಮ ಪಕ್ಷವೇ ಅವರನ್ನು ಮುಖ್ಯಮಂತ್ರಿ ಮಾಡಿದರೂ ಸಹ ಹೇಗೆ ನಡೆದುಕೊಂಡರು ಎಂಬುದು ನಿಮಗೂ ಗೊತ್ತಿದೆ. ಜಿಲ್ಲೆಯಲ್ಲಿ ಅದನ್ನೆಲ್ಲಾ ಸಹಿಸಿಕೊಳ್ಳಲು ನಾವು ಸಿದ್ಧರಿದ್ದೆವು. ಜೊತೆಗೆ ಗೆದ್ದವರು ಏನು ಬೇಕಾದರೂ ಮಾತನಾಡಿಕೊಳ್ಳಲಿ ಎಂದು ಸುಮ್ಮನಿದ್ದೆವು. ನಮ್ಮದು ಆ ರೀತಿಯ ಸಂಸ್ಕೃತಿಯಿಲ್ಲ, ನಾವು ಯಾರ ಮೇಲೂ ದ್ವೇಷ ಸಾಧಿಸುವ ಕೆಲಸವನ್ನು ಮಾಡುವುದಿಲ್ಲ' ಎಂದರು.

ಲಿಖಿತ ಅಭಿಪ್ರಾಯ ತಿಳಿಸಲು ಅವಕಾಶ

ಸಿಎಲ್‌ಪಿ ನಾಯಕನ ಆಯ್ಕೆ: ತಡರಾತ್ರಿಯವರೆಗೂ ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಕುರಿತು ಎಐಸಿಸಿಯ ಮೂವರು ವೀಕ್ಷಕರು ಭಾನುವಾರ ತಡರಾತ್ರಿಯವರೆಗೂ ಪಕ್ಷದ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿದರು.

ವಸಂತನಗರದಲ್ಲಿರುವ ಶಾಂಗ್ರಿಲಾ ಹೋಟೆಲ್‌ನಲ್ಲಿ ಭಾನುವಾರ ಸಂಜೆ ನಡೆದ ಶಾಸಕಾಂಗ ಪಕ್ಷದ ಸಭೆ ನಡೆಯಿತು. ರಾತ್ರಿ ಊಟದ ಬಳಿಕ ಪ್ರತ್ಯೇಕವಾಗಿ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು.

ಕೆಲವು ಶಾಸಕರು ಮೌಖಿಕವಾಗಿ ಅಭಿಪ್ರಾಯ ತಿಳಿಸಲು ಆಕ್ಷೇಪಿಸಿದರು. ಅಂಥವರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲು ಶಾಸಕ ಕೃಷ್ಣ ಭೈರೇಗೌಡ ಅವರು ಸಲಹೆ ನೀಡಿದರು. ಆಗ ಲಿಖಿತ ಅಭಿಪ್ರಾಯ ತಿಳಿಸುವ ವ್ಯವಸ್ಥೆಯನ್ನು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ವೀಕ್ಷಕರು ಮಾಡಿಕೊಟ್ಟರು.

ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಈ ಇಬ್ಬರ ಪರವಾಗಿ ಒಲವಿದ್ದರೂ ತಿಳಿಸಿ, ಅಥವಾ ಅವರಿಬ್ಬರನ್ನು ಬಿಟ್ಟು ಬೇರೆಯವರ ಪರವಾಗಿ ಅಥವಾ ತಟಸ್ಥರಾಗಿ ಉಳಿಯುವಂತಿದ್ದರೂ ತಿಳಿಸಿ ಎಂದೂ ಶಾಸಕರಿಗೆ ವೀಕ್ಷಕರು ಸಲಹೆ ನೀಡಿದರು.

'ನಾನು ಲಿಖಿತವಾಗಿ ಅಭಿಪ್ರಾಯ ತಿಳಿಸಿದ್ದೇನೆ' ಎಂದು ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರೆ, 'ಒಬ್ಬರ ಹೆಸರು ಹೇಳಲು ಆಗದವರು ಹೈಕಮಾಂಡ್ ತೀರ್ಮಾನಕ್ಕೆ ಎನ್ನುತ್ತಿದ್ದಾರೆ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂದು ನಾನು ಹೇಳಿದ್ದೇನೆ' ಎಂದು ಕೋಲಾರ ಕ್ಷೇತ್ರದ ಕೊತ್ತೂರು ಮಂಜುನಾಥ ಹೇಳಿದರು.

'ಇಬ್ಬರೂ ನನಗೆ ಎರಡು ಕಣ್ಣುಗಳು ಇದ್ದಂತೆ. ನನಗೆ ಅವರಿಬ್ಬರೂ ಬೇಕು. ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂದು ನಾನು ತಿಳಿಸಿದ್ದೇನೆ' ಎಂದು ಚಿಕ್ಕಬಳ್ಳಾಪುರ ಕ್ಷೇತ್ರದ ಪ್ರದೀಪ್ ಈಶ್ವರ್ ತಿಳಿಸಿದರು.

'ಪ್ರತಿಯೊಬ್ಬ ಶಾಸಕರ ಅಭಿಪ್ರಾಯವನ್ನು ವೀಕ್ಷಕರು ಪಡೆಯುತ್ತಿದ್ದಾರೆ. ನಾನೂ ವೈಯಕ್ತಿಕ ಅಭಿಪ್ರಾಯ ತಿಳಿಸಿದ್ದೇನೆ' ಎಂದು ನಾಗಮಂಗಲ ಕ್ಷೇತ್ರದ ಚಲುವರಾಯಸ್ವಾಮಿ ತಿಳಿಸಿದರು.

'ಮುಖ್ಯಮಂತ್ರಿ ಸ್ಥಾನಕ್ಕೆ ಹಲವರು ಅರ್ಹರಿದ್ದಾರೆ. ನಾನು ಕೂಡಾ ಆ ಸ್ಥಾನದ ಆಕಾಂಕ್ಷಿ. ಆದರೆ, ನಾನು ನನ್ನ ಮತವನ್ನು ಸಿದ್ದರಾಮಯ್ಯ ಅವರಿಗೆ ಹಾಕಿದ್ದೇನೆ' ಎಂದು ಕೆ.ಎನ್.ರಾಜಣ್ಣ ಹೇಳಿದರು.

ಶಾಸಕರಾದ ಜಿ. ಪರಮೇಶ್ವರ, ಈಶ್ವರ ಖಂಡ್ರೆ, ಕೆ.ಜೆ.ಜಾರ್ಜ್, ಎಚ್.ಕೆ.ಪಾಟೀಲ, ಪುಟ್ಟರಂಗಶೆಟ್ಟಿ, ಕೆ.ಎಂ.ಶಿವಲಿಂಗೇಗೌಡ ಅವರೂ ವೀಕ್ಷಕರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದಾಗಿ ಹೇಳಿದರು.

ಮಂಜುಳಾ ಲಿಂಬಾವಳಿ ಅವರಿಗೆ ಬಿಜೆಪಿ ಕಾರ್ಯಕರ್ತರು ಅಭಿನಂದಿಸಿದರು

'ಬಿಜೆಪಿ ನಾಯಕರಿಂದ ಆತ್ಮಾವಲೋಕನ ಅಗತ್ಯ'

ಕೆ.ಆರ್.ಪುರ: ಚುನಾವಣೆಯಲ್ಲಿ ಬಿಜೆಪಿಗೆ ಹೀನಾಯ ಸೋಲಿಗೆ ನಾಯಕರಿಂದ ಆತ್ಮಾವಲೋಕನ ಅಗತ್ಯವಿದೆ ಎಂದು ಮಾಜಿ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಶಾಸಕಿ ಮಂಜುಳಾ ಲಿಂಬಾವಳಿ ಅವರಿಗೆ ಪಕ್ಷದ ಕಾರ್ಯಕರ್ತರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

'ಫಲಿತಾಂಶದಿಂದ ಬಿಜೆಪಿಗೆ ಆಘಾತವಾಗಿದೆ. ಪಕ್ಷದ ಸಂಘಟನೆ ಹಾಗೂ ಸರ್ಕಾರ ನಡೆಸಿದವರು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಹಿರಿಯರ ಕಡೆಗಣನೆ, ಟಿಕೆಟ್ ಹಂಚಿಕೆಯಲ್ಲಿ ಏಕಪಕ್ಷೀಯ ಧೋರಣೆ ಸೋಲಿಗೆ ಕಾರಣ' ಎಂದರು.

ಕ್ಷೇತ್ರದ ಅಧ್ಯಕ್ಷ ಮನೋಹರ್ ರೆಡ್ಡಿ, ನಟರಾಜ್, ಪ್ರಧಾನ ಕಾರ್ಯದರ್ಶಿಗಳಾದ ಹೂಡಿ ಪಿಳ್ಳಪ್ಪ, ರಾಜೇಶ್, ಮುಖಂಡರಾದ ರಾಜಾರೆಡ್ಡಿ, ಹೂಡಿ ಮಂಜುನಾಥ್, ಬಿದರಹಳ್ಳಿ ರಾಜೇಶ್, ಅನಂದ್ ಕುಮಾರ್ (ಕಿಟ್ಟಿ) ಇದ್ದರು.

ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ಬೆಲೆ ಏರಿಕೆ ಸಂಕೇತವಾಗಿ ಅಡುಗೆ ಅನಿಲ ಸಿಲಿಂಡರ್‌ಗಳನ್ನಿಟ್ಟು ಭಾನುವಾರ ಪ್ಯಾಲೇಸ್ ರಸ್ತೆಯ ಮಾರುತಿ ದೇವಸ್ಥಾನದಲ್ಲಿ ಬಜರಂಗಬಲಿ ಹನುಮಾನ್ ಪೂಜೆ ನೆರವೇರಿಸಿದರು –ಪ್ರಜಾವಾಣಿ ಚಿತ್ರ

ಶಾಸಕ ನಾಗೇಂದ್ರಗೆ ಕತ್ತಿ ತೋರಿಸಿ ಬೆದರಿಕೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕ ಬಿ. ನಾಗೇಂದ್ರ ಅವರಿಗೆ ಕಿಡಿಗೇಡಿಗಳಿಬ್ಬರು ಕತ್ತಿ ತೋರಿಸಿ ಬೆದರಿಕೆ ಹಾಕಿದರೆನ್ನಲಾದ ಘಟನೆ ದೇವಿನಗರ ಮುಖ್ಯ ರಸ್ತೆಯಲ್ಲಿ ಶನಿವಾರ ಸಂಜೆ ನಡೆದಿದ್ದು, ಈ ಸಂಬಂಧ ದೇವಿನಗರದ ವಿಷ್ಣು ವೆಂಕಟೇಶ್ ಮತ್ತು ರಮೇಶ್ ಎಂಬುವವರನ್ನು ಬಂಧಿಸಲಾಗಿದೆ.

ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ದಿನ ಸಂಜೆ 7.30ರ ಸಮಯದಲ್ಲಿ ನಾಗೇಂದ್ರ ಅವರು ಆಪ್ತರೊಬ್ಬರ ಮನೆಗೆ ಹೋಗಿ ವಾಪಸ್ ಬರುವಾಗ ರಸ್ತೆ ಬದಿಯಲ್ಲಿದ್ದ ಇಬ್ಬರು ಕೈಯಲ್ಲಿದ್ದ ಕತ್ತಿ ಝುಳಪಿಸಿ ಬೆದರಿಕೆ ಹಾಕಿದರು. ನಾಗೇಂದ್ರ ಕಾರಿನೊಳಗೆ ಕುಳಿತಿದ್ದರಿಂದ ತೊಂದರೆ ಆಗಲಿಲ್ಲ.

ಶಾಸಕರಾಗಲೀ ಅಥವಾ ಅವರ ಬೆಂಬಲಿಗರಾಗಲೀ ಘಟನೆ ಕುರಿತು ದೂರು ನೀಡಿಲ್ಲ. ಆದರೆ, ಸ್ವಯಂ ಪ್ರೇರಣೆಯಿಂದ ದೂರು ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು ಯಾರು? ಯಾವ ಕಾರಣಕ್ಕೆ ಕತ್ತಿ ಹಿಡಿದಿದ್ದರು? ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಕೌಲ್ ಬಜಾರ್ ಠಾಣೆಯಲ್ಲಿ ಎಫ್‌ಐಆರ್ 73/23 ದಾಖಲಾಗಿದೆ. ಇನ್‌ಸ್ಪೆಕ್ಟರ್ ವಾಸು ಕುಮಾರ್ ತನಿಖೆ ನಡೆಸುತ್ತಿದ್ದಾರೆ.

ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ನಾಗೇಂದ್ರ ಎರಡನೇ ಸಲ ಪುನರಾಯ್ಕೆಯಾಗಿದ್ದಾರೆ. ಇದಕ್ಕೂ ಮೊದಲು ಎರಡು ಸಲ ಕೂಡ್ಲಿಗಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

'ಇತರ ರಾಜ್ಯಗಳಲ್ಲೂ ಕರ್ನಾಟಕ ಮಾದರಿ'

ಮುಂಬೈ (ಪಿಟಿಐ): 'ಕರ್ನಾಟಕ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನುಸರಿಸಿದ ತಂತ್ರಗಾರಿಕೆ ಮಾದರಿಯನ್ನೇ ಇತರ ರಾಜ್ಯಗಳಲ್ಲಿಯೂ ಅಳವಡಿಸಿಕೊಳ್ಳುವ ಅಗತ್ಯ ಇದೆ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಭಾನುವಾರ ಹೇಳಿದರು.

ತಮ್ಮನ್ನು ಇಲ್ಲಿ ಭಾನುವಾರ ಭೇಟಿ ಮಾಡಿದ ಸಿಪಿಐ ನಾಯಕ ಡಿ.ರಾಜಾ ಅವರೊಂದಿಗೆ ಚರ್ಚೆ ನಡೆಸಿದ ನಂತರ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಬಿಜೆಪಿಯನ್ನು ಮಣಿಸಿತು. ಆದರೆ, ಬೇರೆ ರಾಜ್ಯಗಳಲ್ಲಿ ಕರ್ನಾಟಕದಲ್ಲಿದ್ದಂತಹ ಸನ್ನಿವೇಶವನ್ನು ಸೃಷ್ಟಿಸಬೇಕು. ಇದಕ್ಕಾಗಿ ಸಮಾನ ಮನಸ್ಕ ಪಕ್ಷಗಳು 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ರೂಪಿಸಬೇಕು' ಎಂದು ಪವಾರ್ ಪ್ರತಿಪಾದಿಸಿದರು.

ಭಾರಿ ಹಿನ್ನಡೆಗೆ ಕಾರಣ ಹುಡುಕಲು ಬಿಜೆಪಿಯಲ್ಲಿ ಆರಂಭವಾದ ಚರ್ಚೆ

ಶಾಸಕರ ಮೇಲೆ ಸಿಟ್ಟು: ಕೈ ಕೊಟ್ಟ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಪಕ್ಷದ ಎಲ್ಲ ಹಂತಗಳಲ್ಲೂ ವಿಭಿನ್ನ ವಿಮರ್ಶೆ, ವ್ಯಾಖ್ಯಾನಗಳು ಆರಂಭವಾಗಿದೆ. ಕಾರ್ಯಕರ್ತರು ನಾಲ್ಕು ವರ್ಷಗಳ ಬಿಜೆಪಿ ಸರ್ಕಾರದ ಆಡಳಿತ, ಶಾಸಕರ ವರ್ತನೆಯ ಬಗ್ಗೆ ಅಸಮಾಧಾನಗೊಂಡಿದ್ದ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ.

'ದಕ್ಷಿಣ ಕನ್ನಡದಲ್ಲಿ ಪ್ರವೀಣ್ ನೆಟ್ಟಾರು ಹತ್ಯೆ ನಡೆದಾಗ ಕಾರ್ಯಕರ್ತರ ಆಕ್ರೋಶದ ಬಿಸಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಇತರರನ್ನು ತಟ್ಟಿತ್ತು. ಆದರೂ ಮುಖಂಡರು ಎಚ್ಚೆತ್ತುಕೊಳ್ಳಲಿಲ್ಲ. ಸಣ್ಣಪುಟ್ಟ ಕೆಲಸ ಮಾಡಿಸಿಕೊಳ್ಳುವುದೂ ಕಾರ್ಯಕರ್ತರಿಗೆ ಕಷ್ಟವಾಗಿತ್ತು. ಹಲವು ಕ್ಷೇತ್ರಗಳಲ್ಲಿ ಶಾಸಕರ ಪರ ಕೆಲಸ ಮಾಡದೇ ಉಳಿದರು' ಎಂದು ಮೂಲಗಳು ಹೇಳಿವೆ.

ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಸ್ಥಳೀಯ ಮಟ್ಟದಲ್ಲಿ ಸಣ್ಣಪುಟ್ಟ ಕಾಮಗಾರಿಗಳ ಟೆಂಡರ್‌ಗಳನ್ನು ಪಕ್ಷದ ಕಾರ್ಯಕರ್ತರಿಗೆ ಕೊಡುವುದನ್ನು ನಿಲ್ಲಿಸಿ, ಶಾಸಕರ ಸಂಬಂಧಿಗಳು ಮತ್ತು ನಿಕಟವರ್ತಿಗಳಿಗೆ ಮಾತ್ರ ನೀಡುವ ಪರಿಪಾಠ ಆರಂಭಿಸಲಾಯಿತು. ಇದರಿಂದ ಸಿಗಬಹುದಾದ ಸಣ್ಣ ಆದಾಯಕ್ಕೂ ಕಲ್ಲು ಬಿತ್ತು. ಶಾಸಕರು ಎಲ್ಲ ರೀತಿಯ ಗುತ್ತಿಗೆಗಳನ್ನು ತಮ್ಮ ಸಂಬಂಧಿಕರ ಮೂಲಕವೇ ನಡೆಸುತ್ತಿದ್ದರು ಎಂಬ ಮಾತು ಬಿಜೆಪಿಯಲ್ಲಿ ಕೇಳಿ ಬಂದಿದೆ.

'50 ಸಾವಿರ ಬೂತ್ ಸಮಿತಿ ಕಾರ್ಯಕರ್ತರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರೆ, ಈ ಸ್ಥಿತಿ ಬರುತ್ತಿತ್ತೇ? ಬೂತ್ ಗೆದ್ದರೆ, ರಾಜ್ಯ ಗೆಲ್ಲಬಹುದು ಎಂಬ ಕಾರ್ಯತಂತ್ರವೇ ವಿಫಲವಾಗಿದೆ. ಇದು ಶಾಸಕರ ವಿರುದ್ಧ ಇದ್ದ ಆಕ್ರೋಶವನ್ನು ಸೂಚಿಸುತ್ತದೆ' ಎಂದು ನಾಯಕರೊಬ್ಬರು ಹೇಳಿದ್ದಾರೆ.

ದುರ್ಬಲವಾದ ಸಂಘಟನೆ

'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ ನಳಿನ್ ಕುಮಾರ್ ಕಟೀಲ್ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಆ ಬಳಿಕ ಸಂಘಟನೆ ದುರ್ಬಲವಾಗತೊಡಗಿತು. ಬಿಎಸ್‌ವೈ ನೇತೃತ್ವದಲ್ಲೇ ಉಪಚುನಾವಣೆ, ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಗೆದ್ದಿತ್ತು. ನಳಿನ್ 'ರಬ್ಬರ್ ಸ್ಟಾಂಪ್' ಅಧ್ಯಕ್ಷರೆಂದೇ ಕರೆಸಿಕೊಂಡರು' ಎಂಬ ಮಾತು ಕಾರ್ಯಕರ್ತರ ವಲಯದಲ್ಲಿದೆ.

ಯಡಿಯೂರಪ್ಪ ಶಕ್ತಿ ಕುಂದಿಸುವ ಪ್ರಯತ್ನ ಪಕ್ಷದ ಅಧ್ಯಕ್ಷರಾಗಿದ್ದಾಗ, ಮುಖ್ಯಮಂತ್ರಿ ಆಗಿದ್ದಾಗಲೂ ನಿರಂತರವಾಗಿ ನಡೆಯಿತು. ಕೆ.ಎಸ್. ಈಶರಪ್ಪ, ಸಿ.ಟಿ.ರವಿ, ಬಸನಗೌಡ ಪಾಟೀಲ ಯತ್ನಾಳ, ಲಕ್ಷ್ಮಣ ಸವದಿ ಇದಕ್ಕೆ ದಾಳವಾದರು. ಆತುರ- ಆತುರವಾಗಿ ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲಾಯಿತು. ಇದು ವಿಶೇಷವಾಗಿ ವೀರಶೈವ–ಲಿಂಗಾಯತರಲ್ಲಿ ಅಸಮಾಧಾನಕ್ಕೆ ಕಾರಣವಾಯಿತು ಎಂದು ವಿಶ್ಲೇಷಿಸುತ್ತಾರೆ.

ಕಾಂಗ್ರೆಸ್‌ನಲ್ಲಿ ಡಿ.ಕೆ.ಶಿವಕುಮಾರ್, ಜೆಡಿಎಸ್‌ನಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಯಾವುದೇ ರೀತಿಯಲ್ಲಿ ಸರಿಗಟ್ಟಲಾಗದ ನಳಿನ್ ಕುಮಾರ್ ಕಟೀಲ್ ಕೇವಲ ಕೈಗೊಂಬೆ ಅಧ್ಯಕ್ಷರಾಗಿದ್ದರು. ಬಿ.ಎಲ್.ಸಂತೋಷ್ ಅಣತಿಯನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದರು. ಇದರಿಂದಾಗಿಯೇ ಪಕ್ಷ ದುರ್ಬಲವಾಗಿದೆ ಎಂಬ ಅಭಿಪ್ರಾಯವೂ ಪಕ್ಷದ ಕಾರ್ಯಕರ್ತರ ವಲಯದಲ್ಲಿ ಕೇಳಿ ಬಂದಿದೆ.

ಅಲ್ಲದೇ, ಬಿಜೆಪಿ ಸಾಮಾಜಿಕ ಜಾಲತಾಣದ ವೇದಿಕೆಯಲ್ಲಿ ಕ್ರಿಯಾಶೀಲತೆ ತೋರಲೇ ಇಲ್ಲ. ಸಿಎಂ ವಿರುದ್ಧ ಪೇಸಿಎಂ ಅಭಿಯಾನ ನಡೆದಾಗ, ಹೇಗೆ ತಿರುಗೇಟು ನೀಡಬೇಕು ಎಂಬುದು ಗೊತ್ತಾಗದೇ ಕಕ್ಕಾಬಿಕ್ಕಿಯಾಗಿತ್ತು. ಹಿಂದೆಲ್ಲ ಬಿಜೆಪಿ ಈ ಕ್ಷೇತ್ರದಲ್ಲಿ ಉಳಿದೆಲ್ಲ ಪಕ್ಷಗಳಿಗಿಂತಲೂ ಮುಂದಿರುತ್ತಿತ್ತು. ಈಗ ಎಲ್ಲರಿಗಿಂತಲೂ ಹಿಂದೆ ಉಳಿದಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಚಂದ್ರಶೇಖರ ಕಂಬಾರರ ಮೂರು ಕೃತಿಗಳ ಬಿಡುಗಡೆ

'ಕಲ್ಮಶ ಮನಸ್ಸಿನಿಂದ ನಾಟಕ ವೀಕ್ಷಣೆ'

ಪ್ರಜಾವಾಣಿ ವಾರ್ತೆ

ಚಂದ್ರಶೇಖರ ಕಂಬಾರ

ಬೆಂಗಳೂರು: 'ನಾಟಕವನ್ನು ನಾಟಕವಾಗಿಯೇ ನೋಡದೇ, ರಾಜಕೀಯ ಹಾಗೂ ಜಾತಿಯ ನೆಲೆಗಟ್ಟಿನಲ್ಲಿ ವೀಕ್ಷಿಸಲಾಗುತ್ತಿದೆ' ಎಂದು ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ಅಂಕಿತ ಪ್ರಕಾಶನ ನಗರದಲ್ಲಿ ಭಾನುವಾರ ಆನ್‌ಲೈನ್ ವೇದಿಕೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರ 'ಸಾವಿರದ ಶರಣವ್ವ ಕನ್ನಡದ ತಾಯೇ', 'ಕಿತ್ತೂರು ಚೆನ್ನಮ್ಮ ಮತ್ತು ಇತರ ಮಕ್ಕಳ ನಾಟಕಗಳು' ಹಾಗೂ 'ಅಮೋಘವರ್ಷ ನೃಪತುಂಗ ಮತ್ತು ಇತರ ನಾಟಕಗಳು' ಕೃತಿ ಬಿಡುಗಡೆಯಾಯಿತು.

ಮುಖ್ಯಾಂಶಗಳು

- ಅಂಕಿತ ಪ್ರಕಾಶನದಿಂದ ಕಾರ್ಯಕ್ರಮ ಆಯೋಜನೆ
- ವಿವಿಧ ಗಣ್ಯರು ಭಾಗಿ

'ಕತೆ ಇರುವುದೇ ಮಕ್ಕಳಿಗೋಸ್ಕರ. ದೊಡ್ಡವರಿಗೆ ಕತೆಗಳ ಮೇಲೆ ಆಸಕ್ತಿ ಇರುವುದಿಲ್ಲ. ದೊಡ್ಡವರ ಆಸಕ್ತಿಯ ಹಿಂದೆ ಸ್ವಾರ್ಥದ ಆಲೋಚನೆ ಇರುತ್ತದೆ' ಎಂದು ಚಂದ್ರಶೇಖರ ಕಂಬಾರ ತಿಳಿಸಿದರು.

ವಿಮರ್ಶಕ ಬಸವರಾಜ ಕಲ್ಗುಡಿ, 'ನಮ್ಮ ಸಾಹಿತ್ಯದ ಶೈಲಿಯನ್ನು ಬಳಸಿಕೊಂಡು, ಆಧುನಿಕತೆಯ ಸಂದಿಗ್ಧತೆಯೊಂದಿಗೆ ಮುಖಾಮುಖಿಯಾಗಿಸುವ ಪರಿ ದೊಡ್ಡದು. ಕಂಬಾರರು ಆಧುನಿಕ ಭಾರತದ ಬರಹ ಪ್ರಪಂಚದ ಪರಂಪರೆಯಲ್ಲಿ ಒಂದು ಭಿನ್ನವಾದ ಮಾರ್ಗವನ್ನು ತುಳಿದಿದ್ದಾರೆ' ಎಂದರು.

ಕೃತಿಗಳ ಬಗ್ಗೆ ಮಾತನಾಡಿದ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, 'ಕಂಬಾರರ ನಾಟಕ ಸಾಹಿತ್ಯದಲ್ಲಿ ಭಾಷೆಯೇ ಭಿನ್ನ. ಅದರದ್ದೇ ಆದ ಪದಗತಿಯಲ್ಲಿ ವಿಶೇಷವೆನ್ನಿಸುತ್ತದೆ. ಭಾಷೆ ಕಸುವನ್ನು ಇನ್ನೊಂದು ಭಾಷೆಯ ಜೊತೆಗೆ ಸಮೀಕರಿಸುವ ಕೆಲಸ ಮಾಡಲಾಗಿದೆ. ಬದುಕಿನ ಬಗ್ಗೆ ಭರವಸೆ ಮೂಡಿಸುವ, ನಾಳೆಗಳಿವೆ ಎಂದು ತಿಳಿಸುವ ನಾಟಕ ಕೃತಿಗಳಿವು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾದಂಬರಿಕಾರ ಗಜಾನನ ಶರ್ಮ, 'ಬಾಲ್ಯದ ತುಂಟತನ ಇರುವವರಷ್ಟೇ ಮಕ್ಕಳ ನಾಟಕ ಬರೆಯಬಹುದು. ಮಕ್ಕಳು ಸರ್ವತೋಮುಖವಾಗಿ ಬೆಳವಣಿಗೆಗೆ ನಾಟಕ ಸೇರಿದಂತೆ ಸಾಹಿತ್ಯದ ಅಗತ್ಯತೆ ಹೆಚ್ಚಿದೆ' ಎಂದರು.

ಲೇಖಕ ಮತ್ತು ರಂಗ ಚಿಂತಕ ನಾರಾಯಣ ರಾಯಚೂರ್ ಇದ್ದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ
ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಹಗಲಿರುಳು ಶ್ರಮಿಸಿದ
ಎಐಸಿಸಿ ಅಧ್ಯಕ್ಷರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು
ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು ಹಾಗೂ ಅಭಿನಂದನೆಗಳು.
ರಾಜ್ಯದ ಕೆಪಿಸಿಸಿ ಅಧ್ಯಕ್ಷ ಗಾದಿಯನ್ನು ಪಡೆದ ನಂತರ ಮೇಕೆದಾಟು ಪಾದಯಾತ್ರೆ, ಭಾರತ್ ಜೋಡೋ
ಯಾತ್ರೆ, ಸ್ವಾತಂತ್ರ ನಡಿಗೆ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಹಾಗೂ ಪೆಟ್ರೋಲ್, ಡೀಸೆಲ್,
ಗ್ಯಾಸ್ ಸಿಲಿಂಡರ್ ಬೆಲೆಯನ್ನು ನಿರಂತರವಾಗಿ ಹೆಚ್ಚಿಸಿದ್ದ ವಿರುದ್ಧವಾಗಿ ನಿರಂತರ ಪ್ರತಿಭಟನೆ
ಮತ್ತು ಹೋರಾಟವನ್ನು ಹಮ್ಮಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕ
ರಾಜ್ಯದಲ್ಲಿ 35 ವರ್ಷಗಳ ಇತಿಹಾಸದಲ್ಲೇ ಕಂಡರಿಯದ,
ಕೇಳರಿಯದ ಅಭೂತಪೂರ್ವವಾದ ಕಾಂಗ್ರೆಸ್ ಪಕ್ಷದ ಗೆಲುವಿಗೆ
ಕಾರಣರಾದ ಕೆಪಿಸಿಸಿ ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಹಾಗೂ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ
ಮತ್ತು
ಸನ್ಮಾನ್ಯ ಡಿ.ಕೆ. ಸುರೇಶ್ ಅವರಿಗೆ
ಮತ್ತು ಎಲ್ಲಾ ಕೆಪಿಸಿಸಿ ಕಾರ್ಯಾಧ್ಯಕ್ಷರುಗಳಿಗೆ, ರಾಜ್ಯದ ಎಲ್ಲಾ
ಕಾಂಗ್ರೆಸ್ ಮುಖಂಡರುಗಳು ಹಾಗೂ ಕಾರ್ಯಕರ್ತರಿಗೆ
ಧನ್ಯವಾದಗಳು ಮತ್ತು
ಅಭಿನಂದನೆಗಳು
ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಅವರಿಗೆ
61ನೇ
ಹುಟ್ಟುಹಬ್ಬದ ಶುಭಾಶಯಗಳು
ರಾಜ್ಯದ ಆರೂವರೆ ಕೋಟಿ ಜನರ ಆಶೀರ್ವಾದ ಸದಾ ಡಿ.ಕೆ. ಶಿವಕುಮಾರ್
ಅವರ ಮೇಲೆ ಇರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ
ಶುಭ ಕೋರುವವರು ಹಾಗೂ
ಅಭಿನಂದನೆಗಳನ್ನು ಸಲ್ಲಿಸುವವರು
ಡಾ|| ಆರ್. ಪ್ರಭಾಕರ್ ರೆಡ್ಡಿ
ಕಾಂಗ್ರೆಸ್ ಮುಖಂಡರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ

ಮುಖ್ಯಮಂತ್ರಿ ಸ್ಥಾನ: ಒಕ್ಕಲಿಗ ಸಂಘದ ಪದಾಧಿಕಾರಿಗಳ ಸಭೆ

ಡಿಕೆಶಿಗೆ ಒಕ್ಕಲಿಗ ಸ್ವಾಮೀಜಿಗಳ ಬೆಂಬಲ

ಪ್ರಜಾವಾಣಿ ವಾರ್ತೆ

ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಬೆಂಗಳೂರಿನ ಆದಿಚುಂಚನಗಿರಿ ಮಠದ ಸಭಾಂಗಣದಲ್ಲಿ ಭಾನುವಾರ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಆಯೋಜಿಸಿದ್ದ ಸಭೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಹಾಜರಿದ್ದರು

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಪರ ಬೆಂಬಲಿಗರು ನಗರದಲ್ಲಿ ಭಾನುವಾರ ಪ್ರತ್ಯೇಕ ಸಭೆ ನಡೆಸಿ 'ತಮ್ಮ ನಾಯಕರಿಗೇ ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

ಆದಿಚುಂಚನಗಿರಿ ಮಠದ ಸಭಾಂಗಣದಲ್ಲಿ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಆಯೋಜಿಸಿದ್ದ ಸಭೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಅವರು, 'ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಒತ್ತಾಯಿಸಿದರು.

'ಪಕ್ಷವು ಸಂಕಷ್ಟದಲ್ಲಿದ್ದಾಗ ಹಗಲು– ರಾತ್ರಿ ಎನ್ನದೇ ಸಂಘಟಿಸಿ ಅಧಿಕಾರಕ್ಕೆ ತಂದಿರುವ ಶಿವಕುಮಾರ್‌ಗೆ ಅವಕಾಶ ಸಿಗಬೇಕು. ಕೆಪಿಸಿಸಿ ಅಧ್ಯಕ್ಷರಾದವರೇ ಮುಖ್ಯಮಂತ್ರಿ ಆಗುವ ಸಂಪ್ರದಾಯ ಕಾಂಗ್ರೆಸ್‌ನಲ್ಲಿದೆ. ಅದನ್ನು ಮುರಿಯಬಾರದು' ಎಂದು ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

'ಪಕ್ಷಕ್ಕಾಗಿ ಎಲ್ಲ ತ್ಯಾಗ ಮಾಡಿ ಸಂಘಟನೆ ಮಾಡಿದ್ದಾರೆ. ಯಾರೂ ಊಹಿಸಲು ಸಾಧ್ಯವಾಗದ ಮಟ್ಟಿಗೆ ಕಾಂಗ್ರೆಸ್ ಪರ ಫಲಿತಾಂಶ ಬಂದಿದೆ. ಇದಕ್ಕೆ ಶಿವಕುಮಾರ್ ಪರಿಶ್ರಮವೂ ಇದೆ' ಎಂದು ಹೇಳಿದರು.

'ಸಮುದಾಯವು ನಿರ್ಧಾರ ಕೈಗೊಂಡರೆ ಯಾವ ರೀತಿಯಲ್ಲಿ ಫಲಿತಾಂಶ ಬರಲಿದೆ ಎಂಬುದು ಹಿಂದೆಯೇ ಗೊತ್ತಾಗಿದೆ. ಇದಕ್ಕೆ ಅವಕಾಶ ಆಗಬಾರದು' ಎಂದು ನಂಜಾವಧೂತ ಸ್ವಾಮೀಜಿ ಹೇಳಿದರು.

'ಬದ್ಧತೆಯಿಂದ ಶಿವಕುಮಾರ್ ಕೆಲಸ ಮಾಡಲಿದ್ದಾರೆ ಎನ್ನುವ ನಂಬಿಕೆಯಿದೆ. ಷರತ್ತು ರಹಿತವಾಗಿ ಅವರಿಗೆ ಅವಕಾಶ ಕಲ್ಪಿಸಬೇಕು' ಎಂದರು.

'ಶ್ರಮಪಟ್ಟವರಿಗೆ ಅಧಿಕಾರ ಸಿಗಬೇಕು ಎಂಬುದು ಒಕ್ಕಲಿಗರ ಸಂಘದ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಸಮುದಾಯದ ಆಶಯವಾಗಿದೆ' ಎಂದು ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ ಹೇಳಿದರು.

ಕೆಂಪೇಗೌಡ ಆಸ್ಪತ್ರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಎಸ್. ಉಮಾಪತಿ, 'ಪಕ್ಷಕ್ಕಾಗಿ ಶಿವಕುಮಾರ್ ದುಡಿಮೆಯಿದೆ. ಮೇಕೆದಾಟು ಯೋಜನೆಗಾಗಿ ಹೋರಾಟ ಮಾಡಿದ್ದರು. ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಯಾತ್ರೆ ರಾಜ್ಯದಲ್ಲಿ ಯಶಸ್ವಿಯಾಗಲು ಸಾಕಷ್ಟು ಶ್ರಮ ಪಟ್ಟಿದ್ದಾರೆ' ಎಂದರು. 'ಸಿದ್ದರಾಮಯ್ಯ ಅವರಿಗೆ ಅವಕಾಶ ಸಿಕ್ಕಿದೆ. ಶಿವಕುಮಾರ್‌ಗೆ ಅವಕಾಶ ಸಿಕ್ಕಿಲ್ಲ. ಈಗ ಅವಕಾಶಕ್ಕಾಗಿ ಕಾಲ ಕೂಡಿ ಬಂದಿದೆ' ಎಂದರು.

ಒಕ್ಕಲಿಗರ ಸಂಘದ ಉಪಾಧ್ಯಕ್ಷ ಡಿ. ಹನುಮಂತಯ್ಯ, ಮುಖಂಡ ಹನುಮಂತರಾಯಪ್ಪ, ಶಿಸ್ತುಪಾಲನಾ ಸಮಿತಿ ಅಧ್ಯಕ್ಷ ಲೋಕೇಶ್ ಡಿ. ನಾಗರಾಜಯ್ಯ ಇದ್ದರು.

ಕುರುಬರ ಸಭೆ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಬೆಂಗಳೂರಿನ ಕುರುಬರ ಸಂಘದ ಕಚೇರಿಯಲ್ಲಿ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಭಾನುವಾರ ಸಭೆ ನಡೆಯಿತು

ಸಿದ್ಧಗಂಗಾ, ನೊಣವಿನಕೆರೆ ಕಾಡಸಿದ್ದೇಶ್ವರ ಮಠಕ್ಕೆ ಭೇಟಿ

ಸಿ.ಎಂ ಆಗುವ ನಂಬಿಕೆ ಇದೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ತಿಪಟೂರು ತಾಲ್ಲೂಕಿನ ನೊಣವಿನಕೆರೆ ಹೋಬಳಿಯ ಕಾಡಸಿದ್ದೇಶ್ವರ ಮಠಕ್ಕೆ ಭಾನುವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭೇಟಿ ನೀಡಿದರು. ಕರಿವೃಷಭ ದೇಶಿಕೇಂದ್ರ ಸ್ವಾಮೀಜಿ ಇದ್ದಾರೆ

ತುಮಕೂರು: 'ಪಕ್ಷದ ವರಿಷ್ಠರು ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಆಯ್ಕೆ ತೀರ್ಮಾನ ಮಾಡುತ್ತಾರೆ. ಮುಖ್ಯಮಂತ್ರಿ ಆಗುತ್ತೇನೆ ಎನ್ನುವ ನಂಬಿಕೆ ನನಗಿದೆ. ನೋಡೋಣ...'

–ತಿಪಟೂರು ತಾಲ್ಲೂಕಿನ ನೊಣವಿನಕೆರೆ ಹೋಬಳಿಯ ಕಾಡಸಿದ್ದೇಶ್ವರ ಮಠಕ್ಕೆ ಭಾನುವಾರ ಕುಟುಂಬ ಸಮೇತರಾಗಿ ಭೇಟಿ ನೀಡಿ ಕರಿವೃಷಭ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದ ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ ಮಾತಿದು.

ಪೂಜೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಮತ್ತು ನನ್ನ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಒಟ್ಟಿಗೆ ಕೆಲಸ ಮಾಡಿಕೊಂಡು ಹೋಗುತ್ತೇವೆ' ಎಂದರು.

'ಈ ಹಿಂದೆ ದಿನೇಶ್ ಗುಂಡೂರಾವ್ ನೈತಿಕ ಹೊಣೆ ಹೊತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆಗ ಸೋನಿಯಾ ಗಾಂಧಿ ಅವರು ನನ್ನ ಹೆಗಲಿಗೆ ಪಕ್ಷದ ಜವಾಬ್ದಾರಿ ಹೊರಿಸಿದರು. ಅಧಿಕಾರ ಹಿಡಿದ ದಿನದಿಂದ ಹಗಲು-ರಾತ್ರಿ ಎನ್ನದೇ ದುಡಿಯುತ್ತಿದ್ದೇನೆ. ಮುಖ್ಯಮಂತ್ರಿಯ ನಿರ್ಧಾರ ಏನಿದ್ದರೂ ಶಾಸಕಾಂಗ ಸಭೆಯಲ್ಲಿ ನಿರ್ಣಯವಾಗಲಿದೆ. ಮುಖ್ಯಮಂತ್ರಿ ಆಗುವ ನಂಬಿಕೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಲ್ಲಿಂದ ನೇರವಾಗಿ ತುಮಕೂರಿನ ನಗರದ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದ ಅವರು ಶಿವಕುಮಾರ ಸ್ವಾಮೀಜಿ ಗದ್ದುಗೆ, ಸಿದ್ಧಲಿಂಗ ಸ್ವಾಮೀಜಿ ದರ್ಶನ ಪಡೆದರು. ನಂತರ ಸ್ವಾಮೀಜಿ ಜತೆ ಪ್ರಸ್ತುತ ರಾಜಕೀಯ ಸನ್ನಿವೇಶ ಸೇರಿದಂತೆ ಇತರೆ ವಿಷಯಗಳ ಕುರಿತು ಚರ್ಚೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಮಂಡ್ಯದ ಶಾಸಕನಿಗೆ ಚುಂಚಶ್ರೀ ಶಿಸ್ತಿನ ಪಾಠ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಮಂಡ್ಯ ಕ್ಷೇತ್ರದಿಂದ ಗೆಲುವು ಕಂಡಿರುವ ಕಾಂಗ್ರೆಸ್‌ನ ಗಣಿಗ ರವಿಕುಮಾರ್ ಅವರಿಗೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಭಾನುವಾರ ಶಿಸ್ತಿನ ಪಾಠ ಹೇಳಿದರು.

ಹೊಸದಾಗಿ ಗೆದ್ದಿರುವ ಶಾಸಕರೆಲ್ಲರೂ ಸ್ವಾಮೀಜಿ ಆಶೀರ್ವಾದ ಪಡೆಯಲು ಆದಿಚುಂಚನಗಿರಿಗೆ ತೆರಳಿದ್ದರು. ಗಣಿಗ ರವಿಕುಮಾರ್ ಆಶೀರ್ವಾದ ಪಡೆಯುವಾಗ ಅವರ ಅಂಗಿಯ ಮೇಲ್ಭಾಗದ ಗುಂಡಿ ಹಾಕದಿರುವುದನ್ನು ಗಮನಿಸಿದರು. ಈ ವೇಳೆ, 'ನೀನೀಗ ಶಾಸಕ, ಮೊದಲಿನ ಹಾಗೆ ಗುಂಡಿ ಹಾಕದೇ ಓಡಾಡಬಾರದು. ಅಂಗಿಯ ಗುಂಡಿ ಹಾಕಿಕೊಂಡು ಶಿಸ್ತಿನಿಂದ ಇರಬೇಕು' ಎಂದು ಸೂಚಿಸಿದರು. ತಕ್ಷಣ ರವಿಕುಮಾರ್ ಗುಂಡಿ ಹಾಕಿಕೊಂಡರು.

ಮೇಲುಕೋಟೆ ಕ್ಷೇತ್ರದ ದರ್ಶನ್ ಪುಟ್ಟಣ್ಣಯ್ಯ ಸೇರಿದಂತೆ ಜಿಲ್ಲೆಯಿಂದ ಗೆದ್ದಿರುವ ಐವರು ಸ್ವಾಮೀಜಿಯ ಆಶೀರ್ವಾದ ಪಡೆದರು. ಕಾಲಭೈರವೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದರು.

ಹಾಸನ ಕ್ಷೇತ್ರದಿಂದ ಗೆದ್ದಿರುವ ಜೆಡಿಎಸ್ ಸ್ವರೂಪ್ ಪ್ರಕಾಶ್ ಕೂಡ ಸ್ವಾಮೀಜಿ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಆಶೀರ್ವಾದ ಪಡೆದರು.

'ಪಕ್ಷದ ಸೋಲು ಮೋದಿ ಸೋಲಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಬಿಜೆಪಿಯ ಸೋಲು ಮೋದಿಯವರ ಸೋಲಲ್ಲ. ಇಲ್ಲಿ ಅವರು ಪಕ್ಷದ ಪರವಾಗಿ ಪ್ರಚಾರಕಷ್ಟೇ ಬಂದಿದ್ದರು' ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ನಾಯಕತ್ವ ಇಡೀ ದೇಶದಲ್ಲಿ ಸೋತಿದೆ. ಕರ್ನಾಟಕದಲ್ಲಿ ಮಾತ್ರ ಗೆದ್ದಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮೋದಿಯವರು ರಾಷ್ಟ್ರೀಯ ನಾಯಕರು. ಇಲ್ಲಿಗೆ ಪ್ರಚಾರಕ್ಕೆ ಬಂದಿದ್ದರು. ಇದು ಅವರ ಸೋಲು ಎನ್ನುವುದು ಸರಿಯಲ್ಲ ಎಂದು ಹೇಳಿದರು.

'ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಗಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ನಡುವಿನ ಪೈಪೋಟಿ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಇಬ್ಬರಿಗೂ ಶುಭಾಶಯ ಕೋರುತ್ತೇನೆ' ಎಂದರು.

ಅಡುಗೆ ಅನಿಲ ಬೆಲೆ ಏರಿಕೆಯಿಂದ ಸೋಲು: ಸೋಮಶೇಖರ್

ನಾಗಮಂಗಲ (ಮಂಡ್ಯ ಜಿಲ್ಲೆ): 'ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ, 'ಅನ್ನಭಾಗ್ಯ' ಯೋಜನೆಯಲ್ಲಿ ನೀಡುವ ಅಕ್ಕಿಯ ಪ್ರಮಾಣ ಕಡಿಮೆ ಮಾಡಿದ್ದು, ಮುಸ್ಲಿಮರ ಮೀಸಲಾತಿ ತೆಗೆದದ್ದು ಮೊದಲಾದ ಕಾರಣಗಳಿಂದ ಬಿಜೆಪಿ ಸೋತಿರಬಹುದು' ಎಂದು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಭಾನುವಾರ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಹಳ್ಳಿಗಳಿಗೆ ಹೋದಾಗಲೆಲ್ಲಾ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ, ಅಕ್ಕಿ ಕಡಿಮೆ ಮಾಡಿರುವ ಬಗ್ಗೆ ಮಹಿಳೆಯರು ದೂರುತ್ತಿದ್ದರು. ಹಲಾಲ್ ಕಟ್ ವಿಚಾರದಲ್ಲೂ ಜನರಿಗೆ ಕೋಪ ಇತ್ತು. ಮುಸ್ಲಿಮರ ಶೇ 4ರಷ್ಟು ಮೀಸಲಾತಿ ತೆಗೆದದ್ದು ತಪ್ಪಾಗಿರಬಹುದು. ಆದರೆ, ನನ್ನ ಕ್ಷೇತ್ರದಲ್ಲಿ ಮುಸ್ಲಿಮರು ಬಿಜೆಪಿ ಪರವಾಗಿದ್ದರು' ಎಂದು ತಿಳಿಸಿದರು.

'ಕಾಂಗ್ರೆಸ್‌ನವರು ನಮ್ಮ ವಿರುದ್ಧ ವ್ಯಾಪಕ ಅಪಪ್ರಚಾರ ಮಾಡಿದರು. 40 ಪರ್ಸೆಂಟ್ ಸರ್ಕಾರ, ಪೇಸಿಎಂ ಎಂದೆಲ್ಲಾ ಸುಳ್ಳು ಸುದ್ದಿ ಹಬ್ಬಿಸಿದರು' ಎಂದು ದೂರಿದರು.

'ಚಿಕ್ಕಬಳ್ಳಾಪುರದಲ್ಲಿ ಡಾ.ಸುಧಾಕರ್ ಉತ್ತಮ ಕೆಲಸ ಮಾಡಿದ್ದರು. ಆದರೆ, ಅವರ ಸೋಲಿಗೆ ಕಾರಣವೇ ತಿಳಿಯುತ್ತಿಲ್ಲ' ಎಂದರು.

'ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಭರವಸೆಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಮುಂದೆ ಕಾಂಗ್ರೆಸ್‌ನವರ ಬಂಡವಾಳ ಜನರಿಗೆ ತಿಳಿಯಲಿದೆ' ಎಂದು ಹೇಳಿದರು.

ಶೀಘ್ರವೇ ಸೋಲಿನ ಪರಾಮರ್ಶೆ ಸಭೆ: ನಳಿನ್

ಬೆಂಗಳೂರು: 'ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಕ್ಷೇತ್ರವಾರು ಸಭೆ ನಡೆಸಿ ಸೋಲಿನ ಪರಾಮರ್ಶೆ ನಡೆಸಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಪಕ್ಷದ ಕಚೇರಿಯಲ್ಲಿ ಭಾನುವಾರ ನಡೆದ ನೂತನ ಶಾಸಕರ ಸಭೆಯಲ್ಲಿ ಮಾತನಾಡಿ, ಸೋಲಿನ ಪರಾಮರ್ಶೆಯ ಜೊತೆಗೆ ಮುಂದಿನ ಸಾಲಿನಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗೆ ಸನ್ನದ್ಧರಾಗಬೇಕು ಎಂದು ತಿಳಿಸಿದರು.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೆ ಗೆಲ್ಲಿಸಿ ಮೋದಿ ಅವರನ್ನು ಪ್ರಧಾನಿ ಮಾಡಲು ಹಗಲಿರುಳೆನ್ನದೇ ದುಡಿಯಬೇಕು ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಶೀಘ್ರವೇ, ಶಾಸಕಾಂಗ ಪಕ್ಷದ ಸಭೆ ಕರೆದು ಶಾಸಕಾಂಗ ಪಕ್ಷದ ನಾಯಕನನ್ನೂ ಆಯ್ಕೆ ಮಾಡಲಾಗುವುದು ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಜಯನಗರ: 16 ಮತಗಳ ಅಂತರದಿಂದ ಬಿಜೆಪಿಗೆ ಜಯ

ಬೆಂಗಳೂರು: ಪ್ರತಿಷ್ಠಿತ ಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಮತಗಳ ಮರು ಎಣಿಕೆ ಪ್ರಕ್ರಿಯೆಯ ವಿಳಂಬದಿಂದ ಬುಧವಾರ ಮಧ್ಯರಾತ್ರಿ ಫಲಿತಾಂಶ ಘೋಷಣೆಯಾಯಿತು.

ಬಿಜೆಪಿಯ ಸಿ.ಕೆ. ರಾಮಮೂರ್ತಿ 16 ಮತಗಳ ಅಂತರದಿಂದ ಕಾಂಗ್ರೆಸ್‌ನ ಸೌಮ್ಯ ರೆಡ್ಡಿ ವಿರುದ್ಧ ಜಯ ಸಾಧಿಸಿದರು.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮನೆಗಳಲ್ಲಿ ಬಿರುಸಿನ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮನೆಗಳು ಭಾನುವಾರ ಇಡೀ ದಿನ ಚಟುವಟಿಕೆಯ ಕೇಂದ್ರಗಳಾಗಿದ್ದವು. ಮುಖ್ಯಮಂತ್ರಿ ಸ್ಥಾನ ಪಡೆಯಲು ಬಲವಾದ ಪಟ್ಟುಹಾಕುವ ಪ್ರಯತ್ನಗಳನ್ನು ಇಬ್ಬರೂ ನಾಯಕರು ತಮ್ಮ ಮನೆಗಳಿಂದಲೇ ಆರಂಭಿಸಿದರು.

ಕುಮಾರ ಪಾರ್ಕ್‌ನಲ್ಲಿರುವ ಸಿದ್ದರಾಮಯ್ಯ ಅವರ ಸರ್ಕಾರಿ ಬಂಗಲೆಗೆ ಬೆಳಿಗ್ಗೆಯಿಂದಲೇ ನೂತನ ಶಾಸಕರು, ಕಾಂಗ್ರೆಸ್ ಮುಖಂಡರು ತಂಡೋಪತಂಡವಾಗಿ ಬರಲಾರಂಭಿಸಿದ್ದರು. ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸುವ ಫ್ಲೆಕ್ಸ್‌ಗಳನ್ನು ಅವರ ಬೆಂಬಲಿಗರು ಅಳವಡಿಸಿದ್ದರು. 'ಸಿದ್ದರಾಮಯ್ಯ ಮುಖ್ಯಮಂತ್ರಿ, ಜಮೀರ್ ಅಹಮ್ಮದ್ ಉಪ ಮುಖ್ಯಮಂತ್ರಿ' ಎಂಬ ಫ್ಲೆಕ್ಸ್ ಕೂಡ ಅಲ್ಲಿ ಕಂಡುಬಂತು.

ಕೃಷ್ಣ ಬೈರೇಗೌಡ ಸೇರಿದಂತೆ ಹಲವು ಶಾಸಕರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಹರಪನಹಳ್ಳಿ ಕ್ಷೇತ್ರದಿಂದ ಆಯ್ಕೆಯಾಗಿರುವ ಪಕ್ಷೇತರ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ ಭೇಟಿ ಮಾಡಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದಾಗಿ ತಿಳಿಸಿದರು.

ಮಧ್ಯಾಹ್ನದ ವೇಳೆ ಮನೆಯಿಂದ ಹೊರಹೋದ ಸಿದ್ದರಾಮಯ್ಯ, ಸಂಜೆವರೆಗೂ ತಮ್ಮ ಆಪ್ತ ಶಾಸಕರ ಜತೆ ರಹಸ್ಯ ಸಭೆಗಳನ್ನು ನಡೆಸಿದರು. ಶಾಸಕ ಕೆ.ಜೆ. ಜಾರ್ಜ್ ಅವರ ಮನೆಯಲ್ಲಿ ಒಂದು ಸುತ್ತಿನ ಚರ್ಚೆ ನಡೆಸಿದ ಅವರು, ಅಲ್ಲಿಂದ ಜಾರ್ಜ್ ಅವರ ಅತಿಥಿ ಗೃಹಕ್ಕೆ ಬಂದು ಒಂದು ಸುತ್ತಿನ ಚರ್ಚೆ ನಡೆಸಿದರು. ನಂತರ ಶಾಸಕಾಂಗ ಪಕ್ಷದ ಸಭೆಗೆ ಬಂದರು.

ಮನೆಯಲ್ಲೇ ಬಲ ಪ್ರದರ್ಶನ: ಸದಾಶಿವನಗರದಲ್ಲಿರುವ ಶಿವಕುಮಾರ್ ಮನೆಯಲ್ಲೂ ಬೆಳಿಗ್ಗೆಯಿಂದಲೇ ಜನಜಂಗುಳಿ ಇತ್ತು. ಅವರ ಬೆಂಬಲಿಗ ಶಾಸಕರು ತಂಡೋಪತಂಡವಾಗಿ ಬಂದು ಭೇಟಿಮಾಡಿದರು. 'ಡಿ.ಕೆ. ಶಿವಕುಮಾರ್ ಅವರೇ ಮುಂದಿನ ಮುಖ್ಯಮಂತ್ರಿ' ಎಂದು ಬಿಂಬಿಸುವ ಫ್ಲೆಕ್ಸ್ ಅವರ ಮನೆಯ ಮುಂಭಾಗದಲ್ಲಿ ಇತ್ತು.

ವಿವಿಧ ಮಠಗಳಿಗೆ ಭೇಟಿ ನೀಡಲು ತುಮಕೂರು ಜಿಲ್ಲೆಗೆ ತೆರಳಿದ್ದ ಶಿವಕುಮಾರ್ ಸಂಜೆಯ ವೇಳೆಗೆ ಮನೆಗೆ ವಾಪಸಾದರು. ಆಂಧ್ರಪ್ರದೇಶದ ಅಹೋಬಿಲದಿಂದ ಬಂದಿದ್ದ ಅರ್ಚಕರು ಮನೆಯಲ್ಲಿ ಪೂಜೆ ನೆರವೇರಿಸಿ, ಪ್ರಸಾದ ನೀಡಿದರು.

ಶಿವಕುಮಾರ್ ಮನೆಗೆ ತಲುಪಿರುವ ಮಾಹಿತಿ ಅರಿತ ಅವರ ಬೆಂಬಲಿಗರು ನೂರಾರು ಸಂಖ್ಯೆಯಲ್ಲಿ ಅಲ್ಲಿಗೆ ದೌಡಾಯಿಸಿದರು. ಹಲವು ಮಂದಿ ಶಾಸಕರೂ ಅಲ್ಲಿದ್ದರು. ಶಿವಕುಮಾರ್ ಶಾಸಕರ ಜತೆ ಸಭೆ ನಡೆಸುತ್ತಿದ್ದರೆ, ಬೆಂಬಲಿಗರು ಮನೆಯ ಮುಂದೆ ಘೋಷಣೆ ಕೂಗಿದರು. ಅವರನ್ನೇ ಮುಖ್ಯಮಂತ್ರಿ ಮಾಡುವಂತೆ ಆಗ್ರಹಿಸಿದರು.

ಸಿ.ಟಿ.ರವಿ ಸೋಲು: ಭೋಜೇಗೌಡರ ಮೇಲೆ ಹಾಲು ಸುರಿದು ಸಂಭ್ರಮ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಟಿ.ರವಿ ಸೋಲಿಸಲು ಕಾಂಗ್ರೆಸ್‌ಗೆ ಪರೋಕ್ಷವಾಗಿ ಸಹಕಾರ ನೀಡಿದ್ದಕ್ಕೆ ಜೆಡಿಎಸ್ ಕಾರ್ಯಕರ್ತರು, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಸ್.ಎಲ್. ಭೋಜೇಗೌಡ ಅವರ ಮೇಲೆ ಹಾಲು ಸುರಿದು ಸಂತಸ ವ್ಯಕ್ತಪಡಿಸಿದರು.

ಹೊಸಮನೆ ಬಡಾವಣೆಯ ವೃತ್ತದ ಸಮೀಪ ಎ.ಸಿ. ಕುಮಾರಗೌಡ, ಗೋಪಿ, ಸಿ.ಕೆ. ಮೂರ್ತಿ, ಮೊದಲಾದವರು ಭೋಜೇಗೌಡ ಅವರಿಗೆ ಹೂಮಾಲೆ ಹಾಕಿ, ಹಾಲು ಸುರಿದರು.

ಭೋಜೇಗೌಡ ಮಾತನಾಡಿ, 'ಕ್ಷೇತ್ರದಲ್ಲಿ 20 ವರ್ಷದ ಬಿಜೆಪಿ ಆಡಳಿತ ಕೊನೆಗೊಂಡಿದೆ. ಹೊಸ ಶಾಸಕರು ನಗರಸಭೆ, ಸರ್ಕಾರಿ ಕಚೇರಿಗಳಲ್ಲಿ ಲಂಚಕ್ಕೆ ಕಡಿವಾಣ ಹಾಕಬೇಕು. ಉತ್ತಮ ಆಡಳಿತ ನೀಡಬೇಕು' ಎಂದು ಸಲಹೆ ನೀಡಿದರು.

ಚಿಕ್ಕಮಗಳೂರಿನ ಹೊಸಮನೆ ಬಡಾವಣೆ ವೃತ್ತದಲ್ಲಿ ಜೆಡಿಎಸ್ ಮುಖಂಡರು ಭೋಜೇಗೌಡ ಅವರಿಗೆ ಕ್ಷೀರ ಸುರಿದರು

ತಲವಾರ್ ಝಳಪಿಸಿದ ಯತ್ನಾಳ ಬೆಂಬಲಿಗನ ಬಂಧನ

ವಿಜಯಪುರ: ವಿಧಾನಸಭಾ ಚುನಾವಣೆಯಲ್ಲಿ ವಿಜಯಪುರ ನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಸನಗೌಡ ಪಾಟೀಲ ಯತ್ನಾಳ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶನಿವಾರ ನಗರದಲ್ಲಿ ನಡೆದ ವಿಜಯೋತ್ಸವದಲ್ಲಿ ತಲವಾರ್ ಝಳಪಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯತ್ನಾಳ ಬೆಂಬಲಿಗ ಮಹೇಶ ಹಳ್ಳದಮನಿ(26) ಎಂಬಾತನನ್ನು ಬಂಧಿಸಲಾಗಿದೆ.

ಮೆರವಣಿಗೆಯಲ್ಲಿ ಆರೋಪಿಯು ತಲವಾರ್ ಝಳಪಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಹರಿದಾಡಿತ್ತು. 'ಪ್ರಜಾವಾಣಿ' ಆನ್‌ಲೈನ್ ಪ್ರಕಟವಾದ ಸುದ್ದಿಯನ್ನು ತಮ್ಮ ಟ್ವೀಟರ್ ಖಾತೆಯಲ್ಲಿ ಟ್ಯಾಗ್ ಮಾಡಿರುವ ಎಡಿಜಿಪಿ ಅಲೋಕ್ ಕುಮಾರ್, 'ಆರೋಪಿ ವಿರುದ್ಧ ಭಾನುವಾರ ಪ್ರಕರಣ ದಾಖಲಿಸಿ, ಬಂಧಿಸಲಾಗಿದೆ' ಎಂದು ತಿಳಿಸಿದ್ದಾರೆ.

ಯತ್ನಾಳ ಜಯಗಳಿಸುತ್ತಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ನಗರದ ಸಿದ್ಧೇಶ್ವರ ದೇವಸ್ಥಾನದ ಬಳಿ ಶನಿವಾರ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ದೊಡ್ಡ ಪ್ರಮಾಣದಲ್ಲಿ ವಿಜಯೋತ್ಸವ ಆಚರಿಸಿದ್ದರು. ಗಾಂಧಿಚೌಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿತ್ತು.

ಶಾಸಕರು, ಸಂಸದರ ಊರು ಯಕ್ಸಂಬಾ!

• ಸುಧಾಕರ ತಳವಾರ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಯಕ್ಸಂಬಾ ಐದು ದಶಕಗಳಿಂದ ರಾಜಕೀಯ ಹಾಗೂ ಸಹಕಾರ ಕ್ಷೇತ್ರದ ಶಕ್ತಿಕೇಂದ್ರವಾಗಿ ಬೆಳದಿದೆ. ಹುಕ್ಕೇರಿ ಹಾಗೂ ಜೊಲ್ಲೆ ಕುಟುಂಬಗಳು 24 ಸಾವಿರ ಜನಸಂಖ್ಯೆ ಹೊಂದಿರುವ ಈ ಪಟ್ಟಣಕ್ಕೆ ದೊಡ್ಡ ಹೆಸರು ತಂದುಕೊಟ್ಟಿವೆ. ರಾಜಕೀಯ, ಸಹಕಾರ, ಶಿಕ್ಷಣ, ಉದ್ಯೋಗ, ಸಕ್ಕರೆ ಕಾರ್ಖಾನೆ... ಹೀಗೆ ಎಲ್ಲದರಲ್ಲೂ ಈ ಊರಿನ ಸಾಧನೆ ಹಿರಿದು.

ಇದು ಒಬ್ಬ ಸಂಸದ, ಒಬ್ಬ ವಿಧಾನ ಪರಿಷತ್ ಸದಸ್ಯ ಹಾಗೂ ಇಬ್ಬರು ಶಾಸಕರನ್ನು ಕೊಟ್ಟಿದೆ. ಐದು ಬಾರಿ ಶಾಸಕರಾಗಿ, ಒಂದು ಅವಧಿಗೆ ಸಂಸದರಾಗಿ ಮತ್ತು ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಪ್ರಕಾಶ ಹುಕ್ಕೇರಿ ಹುಟ್ಟಿ– ಬೆಳೆದಿದ್ದು ಇದೇ ಊರಲ್ಲಿ. ಅವರ ಪುತ್ರ ಗಣೇಶ ಹುಕ್ಕೇರಿ, ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರ ಜನ್ಮ, ಬಾಲ್ಯ, ವಿದ್ಯೆ, ಉದ್ಯಮ ಎಲ್ಲಕ್ಕೂ ಇದೇ ಊರು ಆಶ್ರಯ ನೀಡಿದೆ. ಸಂಸದ ಅಣ್ಣಾಸಾಹೇಬ ಅವರ ಪತ್ನಿ ಶಶಿಕಲಾ ಜೊಲ್ಲೆ (ತವರೂರು ನಿಪ್ಪಾಣಿ ತಾಲ್ಲೂಕಿನ ಭಿವಶಿ) ಯಕ್ಸಂಬಾದವರೇ ಆಗಿದ್ದಾರೆ.

ಈ ಬಾರಿ ನಿಪ್ಪಾಣಿಯಿಂದ ಶಶಿಕಲಾ ಹಾಗೂ ಚಿಕ್ಕೋಡಿ– ಸದಲಗಾ ಕ್ಷೇತ್ರದಿಂದ ಗಣೇಶ ಹುಕ್ಕೇರಿ ಇಬ್ಬರೂ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ.

ಪಕ್ಷದ ಸೋಲು: ನಾಯಕರು, ಕಾರ್ಯಕರ್ತರಿಂದ ಆತ್ಮಾವಲೋಕನ

ಬಿಜೆಪಿ ಸಖ್ಯ ಜೆಡಿಎಸ್‌ಗೆ ಮುಳುವಾಯಿತೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ದೊಡ್ಡಮಟ್ಟದ ಸೋಲು ಅನುಭವಿಸಲು ಕಾರಣಗಳೇನು ಎಂಬ ಆತ್ಮಾವಲೋಕನವನ್ನು ಜೆಡಿಎಸ್ ನಾಯಕರು, ಕಾರ್ಯಕರ್ತರು ಆರಂಭಿಸಿದ್ದಾರೆ. ಬಿಜೆಪಿ ಜತೆಗಿನ ಸಖ್ಯವೇ ಜೆಡಿಎಸ್ ಸೋಲಿಗೆ ಕಾರಣವಾಯಿತೆ? ಎಂಬ ಚರ್ಚೆ ಪಕ್ಷದೊಳಗೆ ಆರಂಭವಾಗಿದೆ.

2018ರ ಚುನಾವಣೆಯಲ್ಲಿ 37 ಸ್ಥಾನಗಳಿಸಿದ್ದ ಜೆಡಿಎಸ್, ಆಪರೇಷನ್ ಕಮಲದಿಂದ 34ಕ್ಕೆ ಇಳಿದಿತ್ತು. ಈ ಬಾರಿ ಜೆಡಿಎಸ್ ಶಾಸಕರ ಸಂಖ್ಯೆ 19ಕ್ಕೆ ಕುಸಿದಿದೆ. ದೀರ್ಘಕಾಲದಿಂದ ಜೆಡಿಎಸ್‌ನ ಭದ್ರಕೋಟೆಗಳಂತಿದ್ದ ಜಿಲ್ಲೆಗಳಲ್ಲೂ ಈ ಚುನಾವಣೆಯಲ್ಲಿ ಬಲ ಕ್ಷೀಣಿಸಿದೆ. ಇದು ಪಕ್ಷದ ನಾಯಕರು ಮತ್ತು ಬೆಂಬಲಿಗರನ್ನು ಕಳವಳಕ್ಕೆ ದೂಡಿದೆ.

ಮುಸ್ಲಿಂ ಮತಗಳು ಕಾಂಗ್ರೆಸ್ ಪಕ್ಷದ ಕಡೆಗೆ ಧ್ರುವೀಕರಣ ಆಗಿರುವುದು ಹಲವು ಕ್ಷೇತ್ರಗಳಲ್ಲಿ ಜೆಡಿಎಸ್ ಸೋಲಿಗೆ ಕಾರಣವಾಗಿದೆ. ಬಜರಂಗ ದಳ ನಿಷೇಧ ಕುರಿತು ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿದ್ದು ಇದಕ್ಕೆ ಒಂದು ಕಾರಣ. ಅತಂತ್ರ ಸ್ಥಿತಿ ನಿರ್ಮಾಣವಾದರೆ ಬಿಜೆಪಿ ಜತೆ ಜೆಡಿಎಸ್ ಕೈಜೋಡಿಸಬಹುದು ಎನ್ನುವ ಅನುಮಾನ ಇನ್ನೊಂದು ಕಾರಣವಾಗಿದೆ ಎಂಬ ಅಭಿಪ್ರಾಯ ಪಕ್ಷದ ಮುಖಂಡರಲ್ಲಿದೆ.

'ಬಿಜೆಪಿ ಆಡಳಿತದ ವಿರುದ್ಧ ಜನಾಭಿಪ್ರಾಯ ಇತ್ತು. ಆ ಪಕ್ಷವನ್ನು ಅಧಿಕಾರದಿಂದ ದೂರ ಇಡಬೇಕು ಎಂಬ ಭಾವನೆ ಜನರಲ್ಲಿತ್ತು. ಇಂತಹ ಸಂದರ್ಭದಲ್ಲಿ ಜೆಡಿಎಸ್‌ಗೆ ಮತ ನೀಡಿದರೆ ಸಮ್ಮಿಶ್ರ ಸರ್ಕಾರ ರಚನೆಗೆ ಕಾರಣವಾಗಬಹುದು. ಬಿಜೆಪಿ ಮತ್ತೆ ಅಧಿಕಾರದಲ್ಲಿ ಮುಂದುವರಿಯಬಹುದು ಎಂಬ ಅನುಮಾನವೂ ಜನರಲ್ಲಿತ್ತು. ಆ ಕಾರಣಕ್ಕಾಗಿಯೇ ಜೆಡಿಎಸ್‌ನ ಪ್ರಾಬಲ್ಯವಿದ್ದ ಕ್ಷೇತ್ರಗಳಲ್ಲೂ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳು ದೊರಕಿವೆ. ಜೆಡಿಎಸ್ ಅನ್ನು ಬೆಂಬಲಿಸುತ್ತಿದ್ದ ತಟಸ್ಥ ಮತದಾರರಲ್ಲಿ ಹೆಚ್ಚಿನವರು ಕಾಂಗ್ರೆಸ್‌ನತ್ತ ವಾಲಿರುವುದು ಸ್ಪಷ್ಟ' ಎಂದು ಜೆಡಿಎಸ್ ಮುಖಂಡರು ಹೇಳುತ್ತಾರೆ.

ಮೌನಕ್ಕೆ ಜಾರಿದ ಎಚ್‌ಡಿಕೆ: ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಪಕ್ಷದ ನಾಯಕರು, ಕಾರ್ಯಕರ್ತರಿಂದ ದೂರ ಉಳಿದಿದ್ದಾರೆ. ಕೆಲವು ದಿನಗಳ ಕಾಲ ವಿಶ್ರಾಂತಿ ಪಡೆಯಲು ಬಯಸಿದ್ದು, ಅಲ್ಲಿಯವರೆಗೆ ಯಾರನ್ನೂ ಸಂಪರ್ಕಿಸುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ ಎಂದು ಜೆಡಿಎಸ್ ಮೂಲಗಳು ಹೇಳಿವೆ.

ಕಿತ್ತೂರು ಕರ್ನಾಟಕ

7 ಜಿಲ್ಲೆಗಳು | 56 ಒಟ್ಟು ಕ್ಷೇತ್ರಗಳು

ಜಿಲ್ಲೆ	ಒಟ್ಟು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್
ಬೆಳಗಾವಿ	18	11	7	0
ವಿಜಯಪುರ	8	6	1	1
ಧಾರವಾಡ	7	4	3	0
ಹಾವೇರಿ	6	5	1	0
ಗದಗ	4	2	2	0
ಉತ್ತರ ಕನ್ನಡ	6	4	2	0
ಬಾಗಲಕೋಟೆ	7	5	2	0



ತಿದ್ದುಪಡಿ

ಭಾನುವಾರದ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು

ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದವರು

ಕ್ಷೇತ್ರ	ಶಾಸಕರ ಹೆಸರು	ಪಕ್ಷ
ಮಾಯಕೊಂಡ (ಎಸ್‌ಸಿ ಮೀಸಲು)	ಕೆ.ಎಸ್. ಬಸವಂತಪ್ಪ	ಕಾಂಗ್ರೆಸ್
ಚನ್ನಗಿರಿ	ಬಸವರಾಜು ವಿ. ಶಿವಗಂಗಾ	ಕಾಂಗ್ರೆಸ್
ಜಗಳೂರು (ಎಸ್‌ಟಿ ಮೀಸಲು)	ಬಿ.ದೇವೇಂದ್ರಪ್ಪ	ಕಾಂಗ್ರೆಸ್
ಶಿವಮೊಗ್ಗ ನಗರ	ಎಸ್.ಎನ್. ಚನ್ನಬಸಪ್ಪ	ಬಿಜೆಪಿ
ಶಿಕಾರಿಪುರ	ಬಿ.ವೈ. ವಿಜಯೇಂದ್ರ	ಬಿಜೆಪಿ
ಚಿತ್ರದುರ್ಗ	ಕೆ.ಸಿ. ವೀರೇಂದ್ರ	ಕಾಂಗ್ರೆಸ್
ಗಂಗಾವತಿ	ಗಾಲಿ ಜನಾರ್ದನರೆಡ್ಡಿ	ಕೆಆರ್‌ಪಿಪಿ
ದೇವದುರ್ಗ	ಜಿ.ಕರೆಮ್ಮ	ಜೆಡಿಎಸ್
ಬೀದರ್ ದಕ್ಷಿಣ	ಶೈಲೇಂದ್ರ ಬೆಲ್ದಾಳೆ	ಬಿಜೆಪಿ
ಹುಮನಾಬಾದ್	ಸಿದ್ದು ಪಾಟೀಲ	ಬಿಜೆಪಿ
ಕಲಬುರಗಿ ದಕ್ಷಿಣ	ಅಲ್ಲಮಪ್ರಭು ಪಾಟೀಲ	ಕಾಂಗ್ರೆಸ್
ಗುರುಮಠಕಲ್	ಶರಣಗೌಡ ಕಂದಕೂರ	ಜೆಡಿಎಸ್
ಪಾವಗಡ (ಎಸ್‌ಸಿ ಮೀಸಲು)	ಎಚ್.ವಿ. ವೆಂಕಟೇಶ್	ಕಾಂಗ್ರೆಸ್
ಮುಳಬಾಗಿಲು (ಎಸ್‌ಸಿ ಮೀಸಲು)	ಸಮೃದ್ಧಿ ಮಂಜುನಾಥ್	ಜೆಡಿಎಸ್
ಶಿಡ್ಲಘಟ್ಟ	ಬಿ.ಎನ್. ರವಿಕುಮಾರ್	ಜೆಡಿಎಸ್
ಗೌರಿಬಿದನೂರು	ಕೆ.ಎಚ್. ಪುಟ್ಟಸ್ವಾಮಿಗೌಡ	ಪಕ್ಷೇತರ
ರಾಮನಗರ	ಎಚ್.ಎ. ಇಕ್ಬಾಲ್ ಹುಸೇನ್	ಕಾಂಗ್ರೆಸ್
ದೊಡ್ಡಬಳ್ಳಾಪುರ	ಧೀರಜ್ ಮುನಿರಾಜು	ಬಿಜೆಪಿ
ದೇವನಹಳ್ಳಿ (ಎಸ್‌ಸಿ ಮೀಸಲು)	ಕೆ.ಎಚ್ ಮುನಿಯಪ್ಪ	ಕಾಂಗ್ರೆಸ್
ನೆಲಮಂಗಲ (ಎಸ್‌ಸಿ ಮೀಸಲು)	ಎನ್. ಶ್ರೀನಿವಾಸಯ್ಯ	ಕಾಂಗ್ರೆಸ್
ಪುಲಕೇಶಿನಗರ (ಎಸ್‌ಸಿ ಮೀಸಲು)	ಎ.ಸಿ. ಶ್ರೀನಿವಾಸ	ಕಾಂಗ್ರೆಸ್
ಜಯನಗರ	ಸಿ.ಕೆ. ರಾಮಮೂರ್ತಿ	ಬಿಜೆಪಿ
ಮಹದೇವಪುರ (ಎಸ್‌ಸಿ ಮೀಸಲು)	ಮಂಜುಳಾ ಲಿಂಬಾವಳಿ	ಬಿಜೆಪಿ
ನಂಜನಗೂಡು	ದರ್ಶನ್ ಧ್ರುವನಾರಾಯಣ	ಕಾಂಗ್ರೆಸ್
ಕೆ.ಆರ್.ನಗರ	ಡಿ.ರವಿಶಂಕರ್	ಕಾಂಗ್ರೆಸ್
ಚಾಮರಾಜ	ಕೆ. ಹರೀಶ್‌ಗೌಡ	ಕಾಂಗ್ರೆಸ್
ಹುಣಸೂರು	ಜಿ.ಡಿ. ಹರೀಶ್‌ಗೌಡ	ಜೆಡಿಎಸ್
ಕೃಷ್ಣರಾಜ	ಟಿ.ಎಸ್. ಶ್ರೀವತ್ಸ	ಬಿಜೆಪಿ
ಹನೂರು	ಎಂ.ಆರ್. ಮಂಜುನಾಥ್	ಜೆಡಿಎಸ್
ಗುಂಡ್ಲುಪೇಟೆ	ಎಚ್.ಎಂ. ಗಣೇಶ್ ಪ್ರಸಾದ್	ಕಾಂಗ್ರೆಸ್
ಮಡಿಕೇರಿ	ಡಾ.ಮಂತರ್ ಗೌಡ	ಕಾಂಗ್ರೆಸ್
ವಿರಾಜಪೇಟೆ	ಎ.ಎಸ್. ಪೊನ್ನಣ್ಣ	ಕಾಂಗ್ರೆಸ್
ಮಂಡ್ಯ	ಗಣಿಗ ರವಿಕುಮಾರ್	ಕಾಂಗ್ರೆಸ್
ಮದ್ದೂರು	ಕದಲೂರು ಉದಯ್	ಕಾಂಗ್ರೆಸ್
ಕೆ.ಆರ್.ಪೇಟೆ	ಎಚ್.ಟಿ. ಮಂಜು	ಜೆಡಿಎಸ್
ಹಾಸನ	ಸ್ವರೂಪ್ ಪ್ರಕಾಶ್	ಜೆಡಿಎಸ್
ಬೇಲೂರು	ಎಚ್.ಕೆ. ಸುರೇಶ್	ಬಿಜೆಪಿ
ಸಕಲೇಶಪುರ	ಸಿಮೆಂಟ್ ಮಂಜುನಾಥ	ಬಿಜೆಪಿ
ಕೂಡ್ಲಿಗಿ	ಡಾ.ಎನ್.ಟಿ. ಶ್ರೀನಿವಾಸ್	ಕಾಂಗ್ರೆಸ್
ಹೂವಿನಹಡಗಲಿ	ಕೃಷ್ಣ ನಾಯ್ಕ	ಬಿಜೆಪಿ
ಹರಪನಹಳ್ಳಿ	ಎಂ.ಪಿ. ಲತಾ ಮಲ್ಲಿಕಾರ್ಜುನ	ಪಕ್ಷೇತರ
ಬಾದಾಮಿ	ಭೀಮಸೇನ ಚಿಮ್ಮನಕಟ್ಟಿ	ಕಾಂಗ್ರೆಸ್
ಜಮಖಂಡಿ	ಜಗದೀಶ ಗುಡಗುಂಟಿ	ಬಿಜೆಪಿ
ಸಿಂದಗಿ	ಅಶೋಕ ಮನಗೂಳಿ	ಕಾಂಗ್ರೆಸ್
ಶಿರಸಿ	ಭೀಮಣ್ಣ ನಾಯ್ಕ	ಕಾಂಗ್ರೆಸ್
ಹುಬ್ಬಳ್ಳಿ–ಧಾರವಾಡ ಕೇಂದ್ರ	ಮಹೇಶ್ ಟೆಂಗಿನಕಾಯಿ	ಬಿಜೆಪಿ
ಕುಡಚಿ	ಮಹೇಶ್ ತಮ್ಮಣ್ಣವರ	ಕಾಂಗ್ರೆಸ್
ಸವದತ್ತಿ–ಯಲ್ಲಮ್ಮ	ವಿಶ್ವಾಸ ವೈದ್ಯ	ಕಾಂಗ್ರೆಸ್
ಚನ್ನಮ್ಮನ ಕಿತ್ತೂರು	ಬಾಬಾಸಾಹೇಬ್ ಪಾಟೀಲ	ಕಾಂಗ್ರೆಸ್
ಖಾನಾಪುರ	ವಿಠಲ ಹಲಗೇಕರ	ಬಿಜೆಪಿ
ಬೆಳಗಾವಿ ಉತ್ತರ	ಆಸೀಫ್ (ರಾಜು) ಸೇಠ್	ಕಾಂಗ್ರೆಸ್
ಹುಕ್ಕೇರಿ	ನಿಖಿಲ್ ಕತ್ತಿ	ಬಿಜೆಪಿ
ಕುಂದಗೋಳ	ಎಂ.ಆರ್. ಪಾಟೀಲ	ಬಿಜೆಪಿ
ಬಳ್ಳಾರಿ ನಗರ	ನಾ.ರಾ. ಭರತ್ ರೆಡ್ಡಿ	ಕಾಂಗ್ರೆಸ್
ಶಿರಹಟ್ಟಿ	ಡಾ.ಚಂದ್ರು ಲಮಾಣಿ	ಬಿಜೆಪಿ
ಉಡುಪಿ	ಯಶ್‌ಪಾಲ್ ಸುವರ್ಣ	ಬಿಜೆಪಿ
ಕುಂದಾಪುರ	ಕಿರಣ್ ಕುಮಾರ್ ಕೊಡ್ಗಿ	ಬಿಜೆಪಿ
ಬೈಂದೂರು	ಗುರುರಾಜ ಶೆಟ್ಟಿ ಗಂಟಿಹೊಳೆ	ಬಿಜೆಪಿ
ಕಾಪು	ಗುರ್ಮೆ ಸುರೇಶ್ ಶೆಟ್ಟಿ	ಬಿಜೆಪಿ
ಸುಳ್ಯ (ಎಸ್‌ಸಿ ಮೀಸಲು)	ಭಾಗೀರಥಿ ಮುರುಳ್ಯ	ಬಿಜೆಪಿ
ಪುತ್ತೂರು	ಅಶೋಕ್ ಕುಮಾರ್ ರೈ	ಕಾಂಗ್ರೆಸ್

ಶಿಕ್ಷಣ

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

MATHEMATICS

MULTIPLE CHOICE QUESTIONS

93) The area of the triangle formed by the lines joining the vertex of the parabola $x^2 = 12y$ to the ends of latus rectum is

a) 20 sq. units b) 18 sq. units
c) 17 sq. units d) 19 sq. units

Ans:- b;

Expln – Area of triangle $= \frac{1}{2}(4a)(a) = 2a^2$

$= 2.3^2 = 18$ sq.units



94) The function represented by the following graph is ……………..



a) Continuous but not differentiable at x = 1
b) Differentiable but not continuous at x = 1
c) Continuous and differentiable at x = 1
d) Neither continuous nor differentiable at = 1

Ans:- a;

Expln- From the given graph, the function is continuous,

The given graph is that of $y = |x - 1|$

Now, $f(x) = y = \begin{cases} x-1, & x \geq 1 \\ 1-x, & x < 1 \end{cases}$

$$Rf'(1) = \lim_{h\to 0} \frac{f(1+h)-f(1)}{h} = \lim_{h\to 0} \frac{(1+h-1)-0}{h} = 1$$

$$Lf'(1) = \lim_{h\to 0} \frac{f(1-h)-f(1)}{-h} = \lim_{h\to 0} \frac{(1-1+h)-0}{-h} = -1$$

Since $Rf'(1) \neq Lf'(1)$

So, the given function is not differentiable.

95) If an LPP admits optimal solution at two consecutive vertices of a feasible reagion , then

(a) the LPP under consideration is not solvable
(b) the LPP under consideration must be reconstructed
(c) the required optimal solution is at the midpoint of the line joining two points
(d) the optimal solution occurs at every point on the line joining these two points

Ans: d

96) If $x + y \leq 2, x \geq 0, y \geq 0$ the point at which maximum value of $3x + 2y$ attained will be

a) (0, 2) b) (0, 0)
c) (2, 0) d) (½, ½)

Ans:- c;

Expln-Convert the given inequations into equations.

So, we have, x + y = 2, x = 0, y = 0

The graph of the above equations, is



So, the feasible region is shaded in the graph.

∴ Points are A(2, 0), B(0, 2) and O(0, 0)

Value of Z at A = 3 x 2 + 2 x 0 = 6

Value of Z at B = 3 x 0 + 2 x 2 = 4

Value of Z at O = 3 x 0 + 2 x 0 = 0

∴ Maximum value of Z = 6 which is at (2, 0)

97) $\int \frac{\sin^2 x}{1+\cos x} dx$

(a) $x - \sin x + C$ **(b) $\cos x + C$**
(c) $x + \sin x + C$ **(d) $\sin x + C$**

Ans: (a) $x - \sin x + C$

$$\int \frac{\sin^2 x}{1+\cos x} dx = \int \frac{1-\cos^2 x}{1+\cos x} dx$$

$$= \int \frac{(1+\cos x)(1-\cos x)}{1+\cos x} dx$$

$$= \int (1-\cos x)\, dx = x - \sin x + C$$

98) The domain of the function $f(x) = \sqrt{\cos x}$ is

a) $\left[\frac{3\pi}{2}, 2\pi\right]$ b) $\left[0, \frac{\pi}{2}\right]$

c) $\left[\frac{-\pi}{2}, \frac{\pi}{2}\right]$ d) $\left[0, \frac{\pi}{2}\right] \cup \left[\frac{3\pi}{2}, 2\pi\right]$

Ans:- d;

Expln– We have, $f(x) = \sqrt{\cos x}$

$\sqrt{\cos x}$ is defined when cosx is +ve or 0,

i.e., 1^{st} (or) 4^{th} quadrant.

So, domain $= \left[0, \frac{\pi}{2}\right] \cup \left[\frac{3\pi}{2}, 2\pi\right]$

PHYSICS

88) See the diagram. Area of each plate is 2.0 m² and d = 2 × 10^{-3} m. A charge of 8.85 × 10^{-8} C is given to Q. Then the potential of Q becomes



(a) 13 V (b) 10 V
(c) 6.67 V (d) 8.825 V

Ans:- (c)

Expln- In the given arrangement, plate Q is common for two capacitors which are connected in parallel.

$$\therefore C_{eff} = C_P = C_1 + C_2$$

$$\Rightarrow C_P = \frac{\varepsilon_0 A}{d} + \frac{\varepsilon_0 A}{2d} = \frac{2\varepsilon_0 A}{2d}$$

The given arrangement can be shown as

Let V be the potential difference across the capacitor, which is equal to the potential of the plate Q



So, $C = \frac{q}{V}$ i.e., $C_{eff} = \frac{q}{V}$

i.e., $\frac{3\varepsilon_0 A}{2d} = \frac{8.85 \times 10^{-8}}{V}$

$$\Rightarrow V = \frac{8.85\times10^{-8}\times2\times2\times10^{-3}}{3\times8.85\times10^{-12}\times2} = \frac{20}{3} = 6.67V$$

89) The concentric spheres of radii R and r have positive charges q_1 and q_2 with equal surface charge densities. What is the electric potential at their common centre?

(a) $\frac{\sigma}{\varepsilon_0}(R + r)$ (b) $\frac{\sigma}{\varepsilon_0}(R - r)$

(c) $\frac{\sigma}{\varepsilon_0}\left(\frac{1}{R}+\frac{1}{r}\right)$ (d) $\frac{\sigma}{\varepsilon_0}\left(\frac{1}{R}\right)$

Ans:- (a)

Expln- Potential at the centre due to sphere with radius R,

$$V_1 = \frac{q_1}{4\pi\varepsilon_0 R}$$

Potential at the centre due to sphere with radius r,

$$V_2 = \frac{q_2}{4\pi\varepsilon_0 r}$$

Given, surface charge densities for both spheres

$$\sigma = \sigma_R = \sigma_r$$

i.e., $\frac{q_1}{4\pi\varepsilon_0 R^2} = \frac{q_2}{4\pi\varepsilon_0 r^2}$

$$\Rightarrow q_1 = \frac{R^2}{r^2} q_2$$

Total potential at the centre due to both spheres

$$V = V_1 + V_2$$

$$= \frac{q_1}{4\pi\varepsilon_0 R} + \frac{q_2}{4\pi\varepsilon_0 r} = \frac{1}{4\pi\varepsilon_0}\left(\frac{q_1}{R} + \frac{q_2}{r}\right)$$

$$= \frac{q_2}{4\pi\varepsilon_0}\left(\frac{R+r}{r^2}\right) = \frac{q_2}{4\pi r^2 \varepsilon_0}(R+r) = \frac{\sigma}{\varepsilon_0}(R+r)$$

90) In the circuit, $R_1 = R_2$. The value of E and R_1 are …….. (E – EMF, R_1 – resistance)



(a) 180 V; 60 Ω (b) 120 V, 60 Ω
(c) 180 V, 10 Ω (d) none of these

Ans:- d

Expln- Applying Kirchoff's 2^{nd} law in loop ABEFA

- IR – (I – 1.5) R + E = 0



(or) E = I R + (I– 1.5) R

$\Rightarrow$ E = R [2I – 1.5] ………..(i)

Now apply KVL in loop ABCDEFA,

$\Rightarrow$ - IR – 1.5 R′ + E = 0

$\Rightarrow$ E = IR + 1.5 R′ ………..(ii)

Eliminating I from (i) and (ii),

$$\Rightarrow \frac{1}{2}\left[\frac{E}{R} + 1.5\right] = I \quad \text{[from Eq.(i)]}$$

$$\text{and} \left[\frac{E - 1.5R'}{R}\right] = I \quad \text{[from Eq. (ii)]}$$

$$\text{So, } \frac{E}{R} + 1.5 = \frac{2}{R}[E - 1.5R']$$

So, if R′ were known, we could find the correct value.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು



ಔಪಚಾರಿಕ ಪದವಿ ಇಲ್ಲದೆಯೂ ಸ್ವಪ್ರಯತ್ನದಿಂದ ವೆಬ್ ಡೆವಲಪ್‌ಮೆಂಟ್ ಕಲಿತು, ಉತ್ತಮ ಬದುಕನ್ನು ಕಟ್ಟಿಕೊಳ್ಳಬಹದು. ಹೀಗೆ ಅಭ್ಯಾಸ ಮಾಡುವವರಿಗೆ ಸಾಕಷ್ಟು ಆನ್‌ಲೈನ್ ಕೋರ್ಸ್‌ಗಳಿವೆ. ಜೊತೆಗೆ ಸಂಪನ್ಮೂಲಗಳೂ ಇವೆ.

ವೆಬ್‌ಡಿಸೈನಿಂಗ್

ಇ-ಕೋರ್ಸ್ 4

ಸಿಬಂತಿ ಪದ್ಮನಾಭ ಕೆ.ವಿ.

ವ್ಯಕ್ತಿಯಾಗಲಿ, ಸಂಸ್ಥೆಯಾಗಲಿ- ಆನ್‌ಲೈನ್ ಇರುವಿಕೆ ಪ್ರಸ್ತುತದ ಅನಿವಾರ್ಯ. ಕಟ್ಟಡ, ಕಚೇರಿ ಇನ್ನಿತರ ಸೌಕರ್ಯಗಳಿಗಿಂತಲೂ ಒಂದು ಸಂಸ್ಥೆಯ ವಿವರಗಳು ಅಂತರ್ಜಾಲದಲ್ಲಿ ಲಭ್ಯವಿವೆಯೇ, ಅವು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲಾಗಿದೆಯೇ ಎಂಬುದು ಜನರಿಗೆ ಮುಖ್ಯವಾಗುತ್ತದೆ. ಯಾವುದೇ ವ್ಯವಹಾರವನ್ನು ಆರಂಭಿಸುವುದಕ್ಕಿಂತ ಮುಂಚೆ ಆನ್‌ಲೈನ್ ವಿವರಗಳನ್ನು ಪರಿಶೀಲಿಸುವುದು ಇಂದಿನ ಕ್ರಮ. ಹೀಗಾಗಿ ಸಾಮಾನ್ಯ ಸಂಸ್ಥೆಗಳಿಂದ ತೊಡಗಿ ದೊಡ್ಡದೊಡ್ಡ ಕಂಪನಿಗಳವರೆಗೆ ಎಲ್ಲರೂ ತಮ್ಮದೇ ಆದ ವೆಬ್‌ಸೈಟ್‌ನ್ನು ಹೊಂದಬೇಕೆಂದು ಬಯಸುತ್ತಾರೆ. ಪರಿಣಾಮ, ಜಾಲತಾಣಗಳನ್ನು ವಿನ್ಯಾಸಗೊಳಿಸುವವರಿಗೆ ಮತ್ತು ಅಭಿವೃದ್ಧಿಪಡಿಸುವವರಿಗೆ ಇಂದು ಎಲ್ಲಿಲ್ಲದ ಬೇಡಿಕೆ.

ಸಂಸ್ಥೆ ಹಾಗೂ ವ್ಯಕ್ತಿಗಳಿಗೆ ಜಾಲತಾಣಗಳನ್ನು ಅಭಿವೃದ್ಧಿಪಡಿಸಿಕೊಡುವುದಕ್ಕೆಂದೇ ಇಂದು ನೂರಾರು ಏಜೆನ್ಸಿಗಳಿವೆ; ಸ್ವತಂತ್ರವಾಗಿ ಕೆಲಸ ಮಾಡುವ ವ್ಯಕ್ತಿಗಳಿದ್ದಾರೆ. ವೆಬ್‌ಸೈಟ್ ಅಭಿವೃದ್ಧಿಪಡಿಸಿಕೊಡುವ ಕಂಪನಿಯ ಉದ್ಯೋಗಿಗಳಾಗಿಯೋ, ಸ್ವತಂತ್ರವಾಗಿಯೋ ಈ ಕೆಲಸದಲ್ಲಿ ತೊಡಗಿಸಿಕೊಂಡವರಿಗೆ ಕೈತುಂಬ ಸಂಪಾದನೆಯಿದೆ. ಈ ಕ್ಷೇತ್ರಕ್ಕೆ ಎರಡು ರೀತಿ ಪ್ರವೇಶಿಸಬಹುದು: ಮೊದಲನೆಯದು, ಔಪಚಾರಿಕ ಎಂಜಿನಿಯರಿಂಗ್ ಪದವಿ ಪಡೆಯುವುದು; ಎರಡನೆಯದು, ಸ್ವತಂತ್ರವಾಗಿ ಅಭ್ಯಸಿಸುವುದು.

ಔಪಚಾರಿಕ ಪದವಿ ಇಲ್ಲದೆಯೂ ಸ್ವಪ್ರಯತ್ನದಿಂದ ವೆಬ್ ಡೆವಲಪ್‌ಮೆಂಟ್ ಕಲಿತುಕೊಂಡು ಉತ್ತಮ ಬದುಕನ್ನು ರೂಪಿಸಿಕೊಂಡ ಸಾಕಷ್ಟು ಮಂದಿ ಇದ್ದಾರೆ. ಹೀಗೆ ಅಭ್ಯಾಸ ಮಾಡುವವರಿಗೆ ಹೇರಳ ಆನ್‌ಲೈನ್ ಕೋರ್ಸ್‌ಗಳು ಹಾಗೂ ಸಂಪನ್ಮೂಲಗಳಿವೆ.

ಏನಿದು ಕೋರ್ಸ್ ?

ವೆಬ್‌ಡಿಸೈನಿಂಗ್ ಅಥವಾ ವೆಬ್ ಡೆವಲಪ್‌ಮೆಂಟ್ ಅನೇಕ ಕೌಶಲಗಳ ಒಂದು ಗುಚ್ಛ. ಈ ಕೌಶಲಗಳನ್ನು ಒಟ್ಟಾಗಿಯೂ ಕಲಿಯಬಹುದು, ಪ್ರತ್ಯೇಕವಾಗಿಯೂ ಅಭ್ಯಾಸ ಮಾಡಬಹುದು. ಜಾಲತಾಣ ಅಭಿವೃದ್ಧಿಪಡಿಸುವವರು ಎಚ್‌ಟಿಎಂಎಲ್, ಜಾವಾಸ್ಕ್ರಿಪ್ಟ್, ಸಿಎಸ್‌ಎಸ್ ಮುಂತಾದ ಕೋಡಿಂಗ್ ಭಾಷೆಗಳನ್ನು ಕಲಿಯುವುದು ಒಂದು ಪ್ರಾಥಮಿಕ ಅವಶ್ಯಕತೆ. ಕೋಡಿಂಗ್ ಇಲ್ಲದೆಯೂ ವೆಬ್‌ಸೈಟ್‌ಗಳನ್ನು ವಿನ್ಯಾಸಗೊಳಿಸುವುದಕ್ಕೆ ಇಂದು ಅವಕಾಶ ವಿದೆ. ಸಿದ್ಧ ಟೆಂಪ್ಲೆಟ್‌ಗಳನ್ನು ಒದಗಿಸುವ ಅನೇಕ ಆನ್‌ಲೈನ್ ವೇದಿಕೆಗಳಿದ್ದು, ಅವುಗಳನ್ನು ಬಳಸಿಕೊಂಡು ಜಾಲತಾಣಗಳನ್ನು ಸುಲಭವಾಗಿ ಅಭಿವೃದ್ಧಿಪಡಿಸಬಹುದು.

ಆದರೆ ಈ ದಾರಿಗೆ ಅನೇಕ ಮಿತಿಗಳಿವೆ. ಈ ಸಿದ್ಧ ವಿನ್ಯಾಸಗಳನ್ನು ಬಳಸಿಕೊಂಡು ನಮ್ಮ ಕಲ್ಪನೆಯ ವೆಬ್‌ಸೈಟ್‌ಗಳನ್ನು ರೂಪುಗೊಳಿಸುವುದು ಕಷ್ಟ. ಅವುಗಳಲ್ಲಿ ನಮ್ಮ ಅಪೇಕ್ಷೆಯ ಬದಲಾವಣೆಗಳನ್ನು ತರುವುದಕ್ಕೆ ಮತ್ತೆ ಕೋಡಿಂಗ್ ಜ್ಞಾನ ಅನಿವಾರ್ಯವಾಗುತ್ತದೆ. ಆರಂಭಿಕ ಹಂತದಲ್ಲಿ ಬ್ಲಾಗರ್, ಗೋಡ್ಯಾಡಿ, ವರ್ಡ್‌ಪ್ರೆಸ್, ಜೂಮ್ಲಾ, ದ್ರುಪಲ್, ಶಾಪಿಫೈ, ಮಜೆಂಟೊ, ವಿಕ್ಸ್ - ಮುಂತಾದ ವೇದಿಕೆಗಳನ್ನು ಬಳಸಿಕೊಂಡು ವೆಬ್ ವಿನ್ಯಾಸದ ಪ್ರಾಥಮಿಕ ಜ್ಞಾನ ಪಡೆದುಕೊಂಡು, ಮುಂದೆ ಹಂತ-ಹಂತವಾಗಿ ಕೋಡಿಂಗ್ ತಿಳಿವಳಿಕೆ ಪಡೆದುಕೊಳ್ಳುವುದು ಉತ್ತಮ.

ಯಾರಿಗೆ ಸೂಕ್ತ?

ಪಿಯುಸಿ ಪೂರೈಸಿದವರು, ಪದವಿ ವ್ಯಾಸಂಗ ಮಾಡುತ್ತಿರುವವರು ಧಾರಾಳವಾಗಿ ವೆಬ್ ಡಿಸೈನಿಂಗ್ ಕೋರ್ಸ್‌ಗಳನ್ನು ತೆಗೆದುಕೊಳ್ಳಬಹುದು. ವಿಜ್ಞಾನ ವಿಷಯಗಳ ಹಿನ್ನೆಲೆ ಇರುವವರಿಗೆ ಮಾತ್ರ ಇದು ಸೀಮಿತವಲ್ಲ. ಕಲೆ ಹಾಗೂ ವಾಣಿಜ್ಯ ವಿಭಾಗದವರೂ ತೊಡಗಿಸಿಕೊಳ್ಳಬಹುದು. ಕಂಪ್ಯೂಟರ್, ಇಂಟರ್ನೆಟ್ ಹಾಗೂ ಹಾಗೂ ಇಂಗ್ಲಿಷ್‌ನ ಪ್ರಾಥಮಿಕ ಜ್ಞಾನ ಇದ್ದರೆ ಸಾಕು. ವಿನ್ಯಾಸ, ಸೌಂದರ್ಯಪ್ರಜ್ಞೆ, ಬಣ್ಣಗಳ ಸಂಯೋಜನೆಯ ಜ್ಞಾನ ಇದ್ದಷ್ಟು ಒಳ್ಳೆಯದು. ಬರವಣಿಗೆ ಕೌಶಲ ಇನ್ನೊಂದು ಅರ್ಹತೆ.

(ಮುಂದಿನ ವಾರ: ಸೈಬರ್ ಸೆಕ್ಯೂರಿಟಿ ಕೋರ್ಸ್‌ಗಳು)

(ಲೇಖಕರು: ಸಹಾಯಕ ಪ್ರಾಧ್ಯಾಪಕ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ)

ಎಲ್ಲಿ ಲಭ್ಯ?

- ಕೋಡಿಂಗ್ ಭಾಷೆಗಳನ್ನು ಕಲಿಯುವುದು ಕೊಂಚ ಕಷ್ಟ ಎನಿಸುವವರು ಆರಂಭಿಕ ಹಂತದಲ್ಲಿ ಸಿದ್ಧ ವಿನ್ಯಾಸಗಳ ಸಹಾಯದಿಂದ ಜಾಲತಾಣಗಳನ್ನು ಅಭಿವೃದ್ಧಿಪಡಿಸುವುದನ್ನು ಕಲಿಯಬಹುದು. ಈ ಯೂಟ್ಯೂಬ್ ಕೊಂಡಿಯು ಅಂತಹ ಅನೇಕ ವೇದಿಕೆಗಳನ್ನು ನಿಮಗೆ ಪರಿಚಯಿಸುತ್ತದೆ :https://www.youtube.com/watch?v = Pvi_metetxk
- ಇನ್‌ಫೋಸಿಸ್ ಸ್ಪ್ರಿಂಗ್‌ಬೋರ್ಡ್, ವೆಬ್ ವಿನ್ಯಾಸ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಸಣ್ಣ ಹಾಗೂ ದೊಡ್ಡಕೋರ್ಸ್‌ಗಳನ್ನು ಒಂದೇ ಕಡೆ ನೀಡುತ್ತದೆ. ಅಡೋಬ್ ಡ್ರೀಮ್‌ವೀವರ್, ಎಚ್‌ಟಿಎಂಎಲ್, ಸಿಎಸ್‌ಎಸ್, ಜಾವಾಸ್ಕ್ರಿಪ್ಟ್‌ನಂತಹ ಭಾಷೆಗಳನ್ನು ಪ್ರತ್ಯೇಕವಾಗಿ ಕಲಿಸುವ, ವೆಬ್ ವಿನ್ಯಾಸದ ಪಾಥಮಿಕ ತಿಳಿವಳಿಕೆಯನ್ನು ನೀಡುವ ಅನೇಕ ಕೋರ್ಸ್‌ಗಳು ಇಲ್ಲಿವೆ. ವಿವರಗಳಿಗೆ ಲಿಂಕ್ ನೋಡಿ. :https://infyspringboard.onwingspan.com/
- ಗೂಗಲ್ ಕಂಪನಿಯು ವೆಬ್ ಡೆವಲಪರ್ ಎಂಬ ವೃತ್ತಿಪರ ಕೋರ್ಸ್ ಅನ್ನು ಒದಗಿಸುತ್ತಿದ್ದು, ಇದು ವೆಬ್‌ಡೆವಲಪ್‌ಮೆಂಟ್‌ಗೆ ಸಂಬಂಧಿಸಿದ ಎಲ್ಲ ಕೌಶಲಗಳನ್ನೂ ಒಂದೇ ಕಡೆ ನೀಡುತ್ತದೆ. ಇದಕ್ಕೆ ನಿರ್ದಿಷ್ಟ ಶುಲ್ಕ ಪಾವತಿಸಬೇಕಾಗುತ್ತದೆ. ಲಿಂಕ್ ಇಲ್ಲಿದೆ:https://learndigital.withgoogle.com/digitalgarage/course/web-developer
- ಗ್ರೇಟ್ ಲರ್ನಿಂಗ್ ಅಕಾಡೆಮಿಯು ವೆಬ್ ಅಭಿವೃದ್ಧಿಗೆ ಸಂಬಂಧಿಸಿದ ಐದು ಪ್ರತ್ಯೇಕ ಕೋರ್ಸ್‌ಗಳನ್ನು ಉಚಿತವಾಗಿ ನೀಡುತ್ತದೆ. ಇಂಟ್ರೊಡಕ್ಷನ್ ಟು ವೆಬ್ ಡಿಸೈನಿಂಗ್, ಯುಐ/ಯುಎಕ್ಸ್ ಫಾರ್ ಬಿಗಿನರ್ಸ್, ಫ್ರಂಟ್ ಎಂಡ್ ಡೆವಲಪ್‌ಮೆಂಟ್- ಎಚ್‌ಇಎಂಎಲ್/ಸಿಎಸ್‌ಎಸ್ ಮುಂತಾದ ಕೋರ್ಸ್‌ಗಳಿವೆ. ವಿವರಗಳಿಗೆ ಕೊಂಡಿ ನೋಡಿ: https://www.mygreatlearning.com/web-design/free-courses

ಎಂ.ಎಸ್ಸಿ ನರ್ಸಿಂಗ್ ಪ್ರವೇಶಕ್ಕೆ ಸಿಇಟಿ ಇದೆಯೇ?

ನಾನು ಬಿ.ಎಸ್ಸಿ (ನರ್ಸಿಂಗ್) ಮುಗಿಸಿ, ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೀಗ 37 ವರ್ಷಗಳಾಗಿದ್ದು, ಎಂ.ಎಸ್ಸಿ ನರ್ಸಿಂಗ್‌ಗೆ ಸಿಇಟಿ ಪರೀಕ್ಷೆ ಬರೆಯಬಹುದೇ?

ಹೆಸರು, ಊರು ತಿಳಿಸಿಲ್ಲ.



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ಎಂ.ಎಸ್ಸಿ (ನರ್ಸಿಂಗ್) ಕೋರ್ಸ್ ಮಾಡಲು ಬಯಸುವ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆಯೋಜಿಸುವ ಪಿಜಿಸಿಇಟಿ ಪರೀಕ್ಷೆಯನ್ನು ಬರೆಯಬೇಕು. ಕಳೆದ ವರ್ಷದ ಅಧಿಸೂಚನೆಯಂತೆ, ಅಭ್ಯರ್ಥಿಗಳ ವಯಸ್ಸು ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕಡೆಯ ದಿನಾಂಕದಂದು 45 ವರ್ಷದ ಒಳಗಿರಬೇಕು. ಹಾಗಾಗಿ, ನೀವು ಈ ಪರೀಕ್ಷೆಯನ್ನು ಬರೆಯಬಹುದು. ಈ ವರ್ಷದ ಪ್ರವೇಶ ಪರೀಕ್ಷೆಯ ಅಧಿಸೂಚನೆ ಇನ್ನು ಕೆಲವು ತಿಂಗಳಲ್ಲಿ ಪ್ರಕಟವಾಗಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://cetonline.karnataka.gov.in/kea/

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ https://www.prajavani.net/education-career ಈ ಜಾಲತಾಣಕ್ಕೆ ಭೇಟಿ ನೀಡಿ.

CMR UNIVERSITY
Private University Established in Karnataka State by Act No. 45 of 2013
BENGALURU
Recognised by UGC

SCAN FOR MORE DETAILS ABOUT CMRU

ARCHITECTURE
B.Arch.

DESIGN
B.Des. (Product Design | Fashion Design | Interior Design | Communication Design)

ENGINEERING
B.Tech. (CSE | CSE (Data Science) | CSE (AI & ML) | IT | ECE)
M.Tech. (CSE | AI)

SCIENCE STUDIES
BCA (General | Data Science | Cloud Computing | Game Development)
MCA
B.Sc. (Sound Engineering | Visual Effects & Animation)

SOCIAL SCIENCES AND HUMANITIES
B.A. (English, Journalism & Psychology)
B.Sc. Psychology Newly Added Programme
M.Sc. Psychology (Clinical | HRDM | Counselling)

COMMERCE
B.Com. (General | International Accounting & Finance | Professional-CA Integrated)

MANAGEMENT
BBA (General | Digital Marketing | Business Analytics)
MBA

LAW
BA.LL.B. (Hons.)
BBA.LL.B. (Hons.)
LL.B.
LL.M. (Constitutional Law | Commercial Law)

STAY AHEAD OF THE COMPETITION WITH CMRU ACCELERATED CREDITS

APPLY TODAY to get trained & certified for FREE in niche courses

CELEBRATING 30 YEARS
CMRIT
CMR INSTITUTE OF TECHNOLOGY, BENGALURU.

Permanently Affiliated to VTU
Approved by AICTE
Recognised by the Govt. of Karnataka
Accredited by NAAC With A++ Grade
NBA Accredited | NIRF Ranked

Programmes Offered
B.E. | Computer Science & Engineering
B.E. | Computer Science & Engineering (AI & ML)
B.E. | Computer Science & Engineering (DS)
B.E. | Artificial Intelligence and Machine Learning
B.E. | Artificial Intelligence & Data Science
B.E. | Information Science & Engineering
B.E. | Electronics & Communication Engineering
MBA | MCA | Ph.D.

admission@cmrit.ac.in
www.cmrit.ac.in

ADMISSIONS HELPLINE
93429 00666
www.cmr.edu.in
admissions@cmr.edu.in

City Campus : #2, 3rd C Cross, 6th A Main, HRBR Layout, Bengaluru - 560043
Lakeside Campus : Off Hennur-Bagalur Main Road, Chagalahatti, Bengaluru - 562149
OMBR Campus : No.5, Bhuvanagiri, OMBR Layout, Bengaluru -560043
CMRIT Campus : 132, AECS Layout, ITPL Main Road, Kundalahalli, Bengaluru - 560037

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಉತ್ತಮವಾದುದು ಶ್ರಮವಿಲ್ಲದೇ ಲಭಿಸದು,
ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಇಲ್ಲ.

–ಕುವೆಂಪು

ಚಿಲ್ಲರೆ ಹಣದುಬ್ಬರ ಇಳಿಕೆ ಇನ್ನು ಮುಂಗಾರಿನ ಮೇಲೆ ಗಮನ

ಹಣಕಾಸು ಜಗತ್ತಿಗೆ ಹೊಸ ವರ್ಷದ ಮೊದಲ ತಿಂಗಳಾದ ಏಪ್ರಿಲ್‌ಗೆ ಸಂಬಂಧಿಸಿದಂತೆ, ಹಿತಾನುಭವ ನೀಡುವ ಅಂಕಿ–ಅಂಶಗಳು ಪ್ರಕಟವಾಗಿವೆ. ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾದ ವರಮಾನ ಎಷ್ಟು ಎಂಬುದರ ವಿವರವನ್ನು ಕೇಂದ್ರ ಸರ್ಕಾರವು ಈಚೆಗೆ ಬಿಡುಗಡೆ ಮಾಡಿದೆ. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ನಂತರದ ಸಾರ್ವಕಾಲಿಕ ಗರಿಷ್ಠ ಮೊತ್ತದ ವರಮಾನವು ಏಪ್ರಿಲ್‌ನಲ್ಲಿ ಸಂಗ್ರಹವಾಗಿದೆ. ಕೇಂದ್ರ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಏಪ್ರಿಲ್ ತಿಂಗಳ ಚಿಲ್ಲರೆ ಹಣದುಬ್ಬರ ಕುರಿತ ವಿವರಗಳನ್ನು ಪ್ರಕಟಿಸಿದೆ. ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇಕಡ 4.7ಕ್ಕೆ ತಗ್ಗಿದೆ. ಹಣದುಬ್ಬರ ಇಳಿಕೆಯಲ್ಲಿ ಆಹಾರ ವಸ್ತುಗಳ ಹಣದುಬ್ಬರದಲ್ಲಿ ಆಗಿರುವ ಇಳಿಕೆಯ ಕೊಡುಗೆ ದೊಡ್ಡದಿದೆ. ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ದರವು ಈಚಿನ ತಿಂಗಳುಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಯಾಗಿರುವ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುತ್ತಿದ್ದುದೇ ಜಾಸ್ತಿ. ಈಗ ಈ ಮಟ್ಟಕ್ಕೆ ತಗ್ಗಿರುವುದು ಶುಭ ಸಮಾಚಾರವಿದ್ದಂತೆ. ಏಪ್ರಿಲ್‌ನ ಜಿಎಸ್‌ಟಿ ವರಮಾನ ಸಂಗ್ರಹ ಹಾಗೂ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಒಟ್ಟಿಗೆ ಗಮನಿಸಿದಾಗ, ಬೆಲೆ ಏರಿಕೆಯ ಪ್ರಮಾಣ ಕಡಿಮೆ ಆಗಿದೆ ಹಾಗೂ ಮಾರುಕಟ್ಟೆಯಲ್ಲಿ ಲವಲವಿಕೆಯೂ ಹೆಚ್ಚಿನ ಮಟ್ಟದಲ್ಲಿದೆ ಎಂಬುದು ಖಚಿತವಾಗುತ್ತದೆ.

ರೆಪೊ ದರ ಯಥಾಸ್ಥಿತಿಯಲ್ಲಿ ಮುಂದುವರಿಯಲಿದೆ ಎಂಬ ಖಚಿತ ಸಂದೇಶ ದೊರೆತರೆ, ಬಂಡವಾಳ ಸಂಗ್ರಹದ ಉದ್ದೇಶ ಹೊಂದಿರುವವರ ಪಾಲಿಗೆ ಮುಂದಿನ ಹಾದಿ ಸ್ಪಷ್ಟವಾಗುತ್ತದೆ

ಚಿಲ್ಲರೆ ಹಣದುಬ್ಬರವು ಕಡಿಮೆ ಆಗಿರುವುದು, ಹಣಕಾಸು ತಜ್ಞರ ಗಮನವು ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಕೈಗೊಳ್ಳುವ ತೀರ್ಮಾನದ ಕಡೆ ಹರಿಯುವಂತೆ ಮಾಡಿದೆ. ಹಣದುಬ್ಬರವು ಅಂಕೆಯನ್ನು ಮೀರಿದ ನಂತರದಲ್ಲಿ, ಅದನ್ನು ನಿಯಂತ್ರಿಸುವ ಉದ್ದೇಶದಿಂದ ಎಂಪಿಸಿ, ರೆಪೊ ದರವನ್ನು ಹೆಚ್ಚು ಮಾಡುತ್ತ ಬಂದಿದೆ. ಈಗ ರೆಪೊ ದರವು ಶೇ 6.50ರಷ್ಟು ಇದೆ. ರೆಪೊ ದರ ಹೆಚ್ಚಾಗಿರುವ ಕಾರಣದಿಂದಾಗಿ ಬಂಡವಾಳ ಸಂಗ್ರಹಿಸಲು ಕಷ್ಟವಾಗುತ್ತಿದೆ ಎಂದು ಉದ್ಯಮಗಳು, ಅದರಲ್ಲೂ ಮುಖ್ಯವಾಗಿ ಬ್ಯಾಂಕ್ ಸಾಲವನ್ನು ಹೆಚ್ಚಾಗಿ ನೆಚ್ಚಿಕೊಂಡಿರುವ ಎಂಎಸ್‌ಎಂಇ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ) ಉದ್ಯಮಗಳು ಅಳಲು ಹೇಳಿಕೊಂಡಿವೆ. ಹಣದುಬ್ಬರ ದರವು ಇಳಿಕೆ ಆಗಿರುವುದು, ಹಣಕಾಸು ನೀತಿಯ ವಿಚಾರವಾಗಿ ಆರ್‌ಬಿಐ ಕೈಗೊಂಡಿರುವ ಕ್ರಮಗಳು ಸರಿದಾರಿಯಲ್ಲಿ ಸಾಗುತ್ತಿವೆ ಎಂಬುದರ ಸೂಚನೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಎಂಪಿಸಿ ಮುಂದಿನ ಸಭೆಯು ಜೂನ್‌ನಲ್ಲಿ ನಡೆಯಬೇಕಿದೆ. ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸುವ ತೀರ್ಮಾನವನ್ನು ಸಮಿತಿಯು ಕೈಗೊಳ್ಳಬಹುದು ಎಂದು ಹಣಕಾಸು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರೆಪೊ ದರ ಯಥಾಸ್ಥಿತಿಯಲ್ಲಿ ಮುಂದುವರಿಯಲಿದೆ ಎಂಬ ಖಚಿತ ಸಂದೇಶ ದೊರೆತರೆ, ಬಂಡವಾಳ ಸಂಗ್ರಹದ ಉದ್ದೇಶ ಹೊಂದಿರುವವರ ಪಾಲಿಗೆ ಮುಂದಿನ ಹಾದಿಯು ಸ್ಪಷ್ಟವಾಗುತ್ತದೆ. ದೇಶದ ಕೈಗಾರಿಕಾ ಉತ್ಪಾದನೆಯು ಮಾರ್ಚ್ ತಿಂಗಳಲ್ಲಿ ಐದು ತಿಂಗಳ ಕನಿಷ್ಠ ಮಟ್ಟವಾದ ಶೇ 1.1ಕ್ಕೆ ತಗ್ಗಿದೆ. ತಯಾರಿಕಾ ವಲಯದ ಚಟುವಟಿಕೆಗಳಲ್ಲಿ ದೊಡ್ಡ ಮಟ್ಟದ ಇಳಿಕೆ ಕಂಡುಬಂದಿದ್ದು ಇದಕ್ಕೆ ಒಂದು ಕಾರಣ. ರೆಪೊ ದರದಲ್ಲಿ ಮುಂದೆ ಏರಿಕೆ ಆದಲ್ಲಿ, ಅದರಿಂದ ವಿವಿಧ ವಲಯಗಳ ಮೇಲೆ ಆಗುವ ಪರಿಣಾಮವು ತೀವ್ರವಾಗಿ ಇರಬಹುದು.

ಏಪ್ರಿಲ್‌ನಲ್ಲಿ ಆರ್‌ಬಿಐ ಮಾಡಿದ ಅಂದಾಜಿನ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಬಹಳ ಕಡಿಮೆ ಆಗುವ ಸಾಧ್ಯತೆ ಇಲ್ಲ. ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರವು ಶೇ 5.3ರಷ್ಟು ಇರಲಿದೆ ಎಂದು ಈ ಮೊದಲು ಅಂದಾಜು ಮಾಡಿದ್ದ ಆರ್‌ಬಿಐ, ಅದನ್ನು ಏಪ್ರಿಲ್‌ನಲ್ಲಿ ಶೇ 5.2ಕ್ಕೆ ತಗ್ಗಿಸಿದೆ. ಹೀಗಾಗಿ, ಮುಂದಿನ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಈಗಿನ ಮಟ್ಟಕ್ಕಿಂತ ತುಸು ಹೆಚ್ಚಾಗುವ ಸಾಧ್ಯತೆಯೂ ಇದೆ. ವಾಸ್ತವದಲ್ಲಿ, ಮುಂದಿನ ದಿನಗಳಲ್ಲಿ ಹಣದುಬ್ಬರದ ಏರಿಳಿತ ಯಾವ ರೀತಿ ಇರಲಿದೆ ಎಂಬುದು ಮುಂಗಾರು ಮಳೆಯು ವಾಡಿಕೆಯಂತೆ ಆಗಲಿದೆಯೇ ಎಂಬುದನ್ನು ಒಂದಿಷ್ಟು ಆಧರಿಸಿದೆ. ಮುಂಗಾರು ಮಳೆ ಕೊರತೆ ಎದುರಾದರೆ, ಅತಿವೃಷ್ಟಿ ಉಂಟಾದರೆ ಆಹಾರ ವಸ್ತುಗಳ ಉತ್ಪಾದನೆಯ ಮೇಲೆ ನೇರವಾಗಿ ಪರಿಣಾಮ ಆಗುತ್ತದೆ. ಅದು ಮತ್ತೆ ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೀಗಾಗಿ, ನೀತಿ ನಿರೂಪಕರ ಗಮನವು ಇನ್ನು ಮುಂಗಾರಿನ ಮೇಲೆ ಹೆಚ್ಚು ಕೇಂದ್ರೀಕೃತವಾಗಬಹುದು.

ವಿಕಾಸ ಸಿದ್ಧಾಂತವನ್ನು ಬೋಧಿಸದ ದೇಶಗಳು ನಮಗೆ ಮಾದರಿಯಾಗಬಾರದು

ವಿಕಾಸವಾದ ಇಂದು ಅಪ್ರಸ್ತುತವೇ?

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

'ಮಂಗನಿಂದ ಮಾನವ' ಎಂಬ ವಿಕಾಸವಾದದ ಆಧಾರಿತ ಹೇಳಿಕೆ ನಿಜವಾಗಿದ್ದಲ್ಲಿ, ನಮ್ಮ ಸುತ್ತಲಿನ ಮಂಗಗಳೇಕೆ ಮಾನವರಾಗಿಲ್ಲ? ಅವು ಹಾಗೆಯೇ ಉಳಿದಿರಲು ಏನು ಕಾರಣ?- ಇವು, ಪ್ರೌಢಶಾಲಾ ಹಂತದ ಜೀವವಿಜ್ಞಾನದ ವಿದ್ಯಾರ್ಥಿಗಳಿಗೆ ಒಂದಲ್ಲ ಒಂದು ಬಾರಿ ಎದುರಾಗುವ ಕುತೂಹಲಕಾರಿ ಪ್ರಶ್ನೆಗಳು. ನುರಿತ ಶಿಕ್ಷಕರು ಈ ಅನುಮಾನವನ್ನು ಸರಳವಾಗಿ ಬಗೆಹರಿಸುತ್ತಾರೆ. ಆದರೆ ಇದೇ ಪ್ರಶ್ನೆಯನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಉನ್ನತ ಶಿಕ್ಷಣ ರಾಜ್ಯ ಸಚಿವರು ಕೇಳಿದಾಗ, ದೇಶದ ವಿಜ್ಞಾನ ಸಮುದಾಯ, ಶಿಕ್ಷಣ ತಜ್ಞರು, ಶಿಕ್ಷಕರಿಗೆ ತೀವ್ರ ಮುಜುಗರವಾಗಿತ್ತು.

2018ರ ಜನವರಿಯಲ್ಲಿ ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಭಾಗವಹಿಸಿದ್ದ ಈ ಸಚಿವರು, 'ಮಂಗನು ಮಾನವನಾಗಿ ವಿಕಾಸ ಹೊಂದುವುದನ್ನು ಇದುವರೆಗೂ ಯಾರೂ ಪ್ರತ್ಯಕ್ಷವಾಗಿ ನೋಡಿಲ್ಲ. ಹೀಗಾಗಿ ಚಾರ್ಲ್ಸ್ ಡಾರ್ವಿನ್ ಪ್ರತಿಪಾದಿಸಿದ ಜೀವವಿಕಾಸ ಸಿದ್ಧಾಂತವೇ ತಪ್ಪು. ಅಂತಹ ಅವೈಜ್ಞಾನಿಕ ಸಿದ್ಧಾಂತವನ್ನು ಪ್ರೌಢಶಾಲೆ ಮತ್ತು ಕಾಲೇಜು ಹಂತಗಳಲ್ಲಿ ಬೋಧಿಸುವ ಅಗತ್ಯವಿಲ್ಲ. ಅದನ್ನು ನಮ್ಮ ಪಠ್ಯಪುಸ್ತಕಗಳಿಂದ ತೆಗೆಯಬೇಕು' ಎಂದು ಸೂಚಿಸಿದ್ದರು. ಐದು ವರ್ಷಗಳ ನಂತರ, ಎನ್‌ಸಿಇಆರ್‌ಟಿ ಪ್ರಕಟಿಸಿರುವ ಈ ವರ್ಷದ 10ನೆಯ ತರಗತಿಯ ವಿಜ್ಞಾನ ಪಠ್ಯಪುಸ್ತಕದಲ್ಲಿ ವಿಕಾಸವಾದವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ, ವಿದ್ಯಾರ್ಥಿಗಳ ಪಠ್ಯಕ್ರಮದ ಹೊರೆ ಕಡಿಮೆ ಮಾಡುವುದು, ಸಂಕೀರ್ಣ ಪರಿಕಲ್ಪನೆಗಳನ್ನು ಸರಳೀಕರಿಸುವುದು, ಗತಕಾಲದ, ಪ್ರಸ್ತುತವಲ್ಲದ, ಪುನರಾವರ್ತನೆಗೊಳ್ಳುವ ವಿಷಯಗಳನ್ನು ಕೈಬಿಡುವಂತಹ ತರ್ಕಬದ್ಧ ಪರಿಷ್ಕರಣ ಕ್ರಮಗಳನ್ನು ಅನುಸರಿಸಿ ಹೊಸ ಪಠ್ಯಪುಸ್ತಕವನ್ನು ಹೊರತರಲಾಗಿದೆಯೆಂದು ಎನ್‌ಸಿಇಆರ್‌ಟಿ ತಿಳಿಸಿದೆ. ಪಠ್ಯಪುಸ್ತಕದಲ್ಲಿ ಕೈಬಿಟ್ಟಿರುವ ವಿಷಯಗಳನ್ನು ಆಸಕ್ತ ವಿದ್ಯಾರ್ಥಿಗಳು ಶಿಕ್ಷಕರ ನೆರವಿಲ್ಲದೆ ಬೇರೆಯ ಆಕರಗಳಿಂದ ಕಲಿಯಬಹುದೆಂದೂ ಸೂಚನೆ ನೀಡಿದೆ. ಆದರೆ ಈ ಬದಲಾವಣೆಗಳು ತೀವ್ರ ಸ್ವರೂಪದ ಚರ್ಚೆಗೆ ದಾರಿ ಮಾಡಿಕೊಟ್ಟಿವೆ.

2018ರಲ್ಲಿ, ಕೇಂದ್ರ ಸಚಿವರು ವಿಕಾಸ ಸಿದ್ಧಾಂತವನ್ನು ಪಠ್ಯಪುಸ್ತಕಗಳಿಂದ ತೆಗೆಯಬೇಕೆಂದು ಸೂಚಿಸಿದಾಗ, ದೇಶದ ವೈಜ್ಞಾನಿಕ ಸಮುದಾಯ ಆ ಸಲಹೆಯನ್ನು ತೀವ್ರವಾಗಿ ವಿರೋಧಿಸಿತ್ತು. ದೇಶದ ಪ್ರತಿಷ್ಠಿತ ವೈಜ್ಞಾನಿಕ ಸಂಸ್ಥೆಗಳಾದ 'ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್ ಮತ್ತು ದಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್- ಇಂಡಿಯಾಗಳು ಒಟ್ಟಾಗಿ ಸೇರಿ ಹೊರಡಿಸಿದ ಹೇಳಿಕೆಯಲ್ಲಿ, ಆಧುನಿಕ ಜೀವವಿಜ್ಞಾನದ ಅಡಿಗಲ್ಲನ್ನೇ ಸಡಿಲಗೊಳಿಸುವ ಸಚಿವರ ಸಲಹೆಯನ್ನು ವಿರೋಧಿಸಿ, ವಿಕಾಸವಾದವನ್ನು ಪಠ್ಯಪುಸ್ತಕದಿಂದ ಕೈಬಿಡುವ ಕ್ರಮದ ಪರಿಣಾಮಗಳ ಬಗ್ಗೆ ಎಚ್ಚರಿಸಿತ್ತು.

ಅನುವಂಶಿಕ ಲಕ್ಷಣಗಳು ಮುಂದಿನ ಪೀಳಿಗೆಗೆ ಸಾಗುವಾಗ ವಿಕೃತಿಗಳು (ಮ್ಯುಟೇಷನ್) ಉಂಟಾಗುತ್ತವೆ. ಉಳಿವಿಗಾಗಿ ಜೀವಿ ನಡೆಸುವ ಹೋರಾಟದಲ್ಲಿ ಅನುಕೂಲಕರವಾದ ವಿಕೃತಿಗಳು ನೈಸರ್ಗಿಕ ಆಯ್ಕೆಯ ಫಲವಾಗಿ ಉಳಿದು, ಅನನುಕೂಲ ವಿಕೃತಿಗಳು ನಶಿಸುತ್ತವೆ. ಇದರ ಫಲವಾಗಿ ಹೊಸ ಜೀವಿ ಪ್ರಭೇದಗಳು ಅಸ್ತಿತ್ವಕ್ಕೆ ಬರುತ್ತವೆ- ಇದು ಡಾರ್ವಿನ್ ಪ್ರತಿಪಾದಿಸಿದ, ಪ್ರಕೃತಿಯ ಆಯ್ಕೆ ಮತ್ತು ಜೀವಿ ಪ್ರಭೇದಗಳ ಉಗಮದ ಬಗೆಗಿನ ವಿಕಾಸ ಸಿದ್ಧಾಂತದ ತಿರುಳು. ಸೂರ್ಯ ಕೇಂದ್ರ ಸಿದ್ಧಾಂತವನ್ನು ಮಂಡಿಸಿ, ಭೌತ ಮತ್ತು ಖಗೋಳ ವಿಜ್ಞಾನಗಳ ದಿಕ್ಕನ್ನೇ ಬದಲಿಸಿದ ಕೋಪರ್ನಿಕಸ್‌ನ ಆವಿಷ್ಕಾರಕ್ಕೆ ಸಮನಾದ ಮಹತ್ವವು ಡಾರ್ವಿನ್‌ನ ವಿಕಾಸ ಸಿದ್ಧಾಂತಕ್ಕಿದೆ. ಸುದೀರ್ಘವಾದ ತರ್ಕದಂತೆ ರೂಪುಗೊಂಡಿರುವ ಈ ಸಿದ್ಧಾಂತದ ಮೂಲಭೂತ ವೈಜ್ಞಾನಿಕ ಪರಿಕಲ್ಪನೆಗಳ ಬಗ್ಗೆ ವಿಜ್ಞಾನಿಗಳಲ್ಲಿ ಯಾವುದೇ ವಿವಾದ, ಗೊಂದಲಗಳಿಲ್ಲ. ಸ್ಟೀಫನ್ ಹಾಕಿಂಗ್ ಪ್ರಕಾರ, ಪ್ರಕೃತಿಯ ವಿದ್ಯಮಾನಗಳನ್ನು ವಿವರಿಸುವ ಎಲ್ಲ ಸಿದ್ಧಾಂತಗಳಿಗೆ ಮುನ್ಸೂಚಕ ಮೌಲ್ಯವಿರಬೇಕು. ಡಾರ್ವಿನ್ ಸಿದ್ಧಾಂತ ಮುನ್ಸೂಚಿಸಿದ್ದ ಅನೇಕ ಪರಿಣಾಮಗಳನ್ನು ಪ್ರಯೋಗಗಳು ಮತ್ತು ಅವಲೋಕನಗಳು ಮತ್ತೆ ಮತ್ತೆ ಖಚಿತಪಡಿಸಿವೆ.

ಮನುಷ್ಯನೂ ಸೇರಿದಂತೆ ಜೀವಪ್ರಪಂಚದ ಎಲ್ಲ ಜೀವಿಗಳ ಭೂತ, ವರ್ತಮಾನ ಮತ್ತು ಭವಿಷ್ಯದ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಬಲ ಸಾಧನವಾಗಿರುವ ಈ ಸಿದ್ಧಾಂತವು ಜೀವವಿಜ್ಞಾನದ ಅಡಿಗಲ್ಲಾಗಿರುವ ಮೂಲಭೂತ ಸಂಶೋಧನೆಗಳಲ್ಲೊಂದು. 'ಬೀಗಲ್' ಹಡಗಿನಲ್ಲಿ 5 ವರ್ಷಗಳ ಕಾಲ ಸಾಗರ ಪರ್ಯಟನೆ ಕೈಗೊಂಡು ಮಾಹಿತಿ ಸಂಗ್ರಹಿಸಿ, ಕ್ರಮಬದ್ಧ ವಿಶ್ಲೇಷಣೆ, ಪ್ರಾಯೋಗಿಕ ತಪಾಸಣೆಗಳ ನಂತರ ಜೀವವಿಕಾಸ ಸಿದ್ಧಾಂತವನ್ನು ಮಂಡಿಸುವಲ್ಲಿ ಡಾರ್ವಿನ್ ಅನುಸರಿಸಿದ ಮಾರ್ಗ 'ವೈಜ್ಞಾನಿಕ ವಿಧಾನ'ದ ಅತ್ಯುತ್ತಮ ಉದಾಹರಣೆ. ಈ ಕುತೂಹಲಭರಿತ, ವಸ್ತುನಿಷ್ಠ ಸಂಶೋಧನೆಯ ವಿಧಾನದ ಪರಿಚಯ ನಮ್ಮ ಮಕ್ಕಳಿಗಾಗಬೇಕು. ಡಾರ್ವಿನ್ ಮತ್ತು ಆತ ಪ್ರತಿಪಾದಿಸಿದ ವಿಕಾಸ ಸಿದ್ಧಾಂತವನ್ನು ಪಠ್ಯಪುಸ್ತಕದಿಂದ ಕೈಬಿಟ್ಟಿರುವುದು, ಶಾಲಾ ವಿದ್ಯಾರ್ಥಿಗಳಲ್ಲಿ ತರ್ಕಬದ್ಧವಾದ ಯೋಚನಾ ಸಾಮರ್ಥ್ಯವನ್ನು ಬೆಳೆಸುವ ವಿಜ್ಞಾನ ಶಿಕ್ಷಣದ ಮೂಲಭೂತ ಉದ್ದೇಶಕ್ಕೇ ಹಾನಿಯುಂಟಾಗುತ್ತದೆ. ಹೀಗಾಗಿ, ಈ ಅನುಚಿತ ಸಲಹೆಯನ್ನು ಸಚಿವರು ಹಿಂಪಡೆಯಬೇಕೆಂದು ದೇಶದ ಮೂರೂ ಪ್ರತಿಷ್ಠಿತ ಅಕಾಡೆಮಿಗಳು ಸರ್ಕಾರವನ್ನು ಕೋರಿದ್ದವು. ಆದರೆ ದೇಶದ ವಿಜ್ಞಾನಿಗಳ ಒಮ್ಮತದ ಅಭಿಪ್ರಾಯವನ್ನು ಸರ್ಕಾರ ಗೌರವಿಸಿಲ್ಲ.



ಈ ನಡೆಯಿಂದ ನಿರಾಶರಾಗಿರುವ ವಿಜ್ಞಾನಿಗಳು, ಶಿಕ್ಷಕರು, ಶಿಕ್ಷಣ ತಜ್ಞರು, ವಿಜ್ಞಾನ ಸಂವಹನಕಾರರು ಸೇರಿದಂತೆ ಒಟ್ಟು 1,800 ವಿಜ್ಞಾನಾಸಕ್ತರು ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿಯ ಮೂಲಕ ಸರ್ಕಾರಕ್ಕೆ ಬಹಿರಂಗ ಪತ್ರವೊಂದನ್ನು ಬರೆದು, ಭಾರತದಲ್ಲಿನ ವಿಜ್ಞಾನ ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆಗಳ ಗುಣಮಟ್ಟದ ಮೇಲೆ ಈ ಕ್ರಮ ಮುಂದೆ ಗಂಭೀರ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದ್ದಾರೆ. ನಮ್ಮ ದೇಶದ ಐಐಟಿಗಳು, ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರತಿಷ್ಠಿತ ವಿಜ್ಞಾನಿಗಳು ಈ ಪತ್ರಕ್ಕೆ ಸಹಿ ಹಾಕಿದ್ದಾರೆ. ಜೀವ ವಿಜ್ಞಾನದ ಎಲ್ಲ ಶಾಖೆಗಳೂ ಬೆಳೆದು, ಭದ್ರವಾಗಿ ನಿಂತಿರುವುದು ಜೀವವಿಕಾಸದ ಪರಿಕಲ್ಪನೆಯ ಆಧಾರದ ಮೇಲೆ. ಕೃಷಿ ಉತ್ಪಾದನೆ, ಆರೋಗ್ಯ ರಕ್ಷಣೆ, ಜೈವಿಕ ಪ್ರತಿರೋಧ, ಕೋವಿಡ್-19ರಂತಹ ಹೊಸ ಸಾಂಕ್ರಾಮಿಕ ರೋಗಗಳ ವಿರುದ್ಧ ಔಷಧಗಳ ವಿನ್ಯಾಸದಂತಹ ಕ್ಷೇತ್ರಗಳಲ್ಲಿನ ಸಂಶೋಧನಾ ಚಟುವಟಿಕೆಗಳ ಮೂಲದಲ್ಲಿರುವುದು ನೈಸರ್ಗಿಕ ಆಯ್ಕೆಯ ಪ್ರಕ್ರಿಯೆ. ಹೀಗಿರುವಾಗ, ಪ್ರೌಢಶಾಲಾ ಹಂತದಲ್ಲಿ ವಿಕಾಸವಾದವನ್ನು ಕೈಬಿಟ್ಟಿರುವುದು ವಿಜ್ಞಾನ ಶಿಕ್ಷಣದ ದೃಷ್ಟಿಯಿಂದ ಪ್ರತಿಗಾಮಿಯಾದ ಹೆಜ್ಜೆ ಎಂಬುದು ವಿಜ್ಞಾನಿಗಳ ಖಚಿತ ನಿಲುವು.

1859ರಲ್ಲಿ, ಡಾರ್ವಿನ್ ತನ್ನ ಮಹತ್ಕೃತಿ 'ಆನ್ ದಿ ಆರಿಜಿನ್ ಆಫ್ ಸ್ಪೀಷೀಸ್' ಮೂಲಕ ವಿಕಾಸ ಸಿದ್ಧಾಂತವನ್ನು ಮಂಡಿಸಿದಾಗಿನಿಂದಲೂ ಅದರ ಪರ-ವಿರೋಧ ಚರ್ಚೆಗಳು ನಡೆದಿವೆ. ಡಾರ್ವಿನ್‌ನ ಸಿದ್ಧಾಂತವನ್ನು ಶಾಲೆಯಲ್ಲಿ ಬೋಧಿಸಿದ ಜೀವವಿಜ್ಞಾನ ಶಿಕ್ಷಕರನ್ನು ನ್ಯಾಯಾಲಯ ಶಿಕ್ಷಿಸಿರುವ ಪ್ರಕರಣಗಳು ಅಮೆರಿಕದಲ್ಲಿವೆ. ಇಂದಿಗೂ ಅಮೆರಿಕದ ಶೇ 33ರಷ್ಟು ಪ್ರೌಢಶಾಲೆಗಳಲ್ಲಿ ವಿಕಾಸ ಸಿದ್ಧಾಂತವನ್ನು ಬೋಧಿಸುವುದಿಲ್ಲ. ಸೌದಿ ಅರೇಬಿಯಾ, ಒಮನ್, ಅಲ್ಜೀರಿಯಾ, ಮೊರೊಕ್ಕೊ ಮತ್ತು ಲೆಬನಾನ್‌ಗಳಲ್ಲಿ ವಿಕಾಸ ಸಿದ್ಧಾಂತಕ್ಕೆ ವಿಜ್ಞಾನ ಶಿಕ್ಷಣದಲ್ಲಿ ಸ್ಥಾನವಿಲ್ಲ. ಆದರೆ ಈ ದೇಶಗಳು ನಮಗೆ ಮಾದರಿಯಾಗಬಾರದು.

ನಮ್ಮ ದೇಶದ ಶಾಲಾ ಶಿಕ್ಷಣದಲ್ಲಿ ಗಟ್ಟಿಯಾದ ವೈಜ್ಞಾನಿಕ ತಳಹದಿಯ ಮೇಲೆ ನಿಂತಿರುವ ಈ ಸಿದ್ಧಾಂತದ ಬೋಧನೆ ಎಂದಿಗೂ ಸಮಸ್ಯೆಯಾಗಿರಲಿಲ್ಲ. 1958ರಲ್ಲಿ, ಅಂದಿನ ಸಂಸತ್ತು ಸರ್ವಾನುಮತದಿಂದ ಅಂಗೀಕರಿಸಿದ 'ಸೈಂಟಿಫಿಕ್ ಪಾಲಿಸಿ ರೆಸಲ್ಯೂಷನ್', ದೇಶ ಎದುರಿಸುತ್ತಿದ್ದ ಹಸಿವು, ಬಡತನ, ಅನಕ್ಷರತೆ, ಮೂಢನಂಬಿಕೆಯಂತಹ ಸಮಸ್ಯೆಗಳನ್ನು ವಿಜ್ಞಾನದ ನೆರವಿಲ್ಲದೇ ಬಗೆಹರಿಸುವುದು ಅಸಾಧ್ಯವೆಂಬ ನಿಲುವನ್ನು ತಾಳಿ, ವಿಜ್ಞಾನ ಶಿಕ್ಷಣ, ಸಂಶೋಧನೆಗೆ ಅತಿ ಹೆಚ್ಚಿನ ಆದ್ಯತೆ ನೀಡಿತ್ತು. ಅದರ ಫಲವಾಗಿಯೇ ನಮ್ಮ ದೇಶ ಇಂದು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರಗತಿ ಸಾಧಿಸಿದೆ.

ಶಾಲಾ, ಕಾಲೇಜು ಶಿಕ್ಷಣದ ಪಠ್ಯ ವಿಷಯಗಳಲ್ಲಿ ತರುವ ಬದಲಾವಣೆಗಳು ಇಂತಹ ಪ್ರಗತಿಗೆ ಪೂರಕವಾಗಿದ್ದು, ವಿದ್ಯಾರ್ಥಿಗಳ ವಿಶ್ಲೇಷಣಾತ್ಮಕ ಚಿಂತನೆ, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಉದ್ದೀಪಿಸುವಂತೆ ಇರಬೇಕು. ಆದರೆ ಎನ್‌ಸಿಇಆರ್‌ಟಿ ನಡೆ ಈ ಉದ್ದೇಶವನ್ನು ಸಾಧಿಸುವುದಿಲ್ಲವೆಂಬುದೇ ವಿಜ್ಞಾನಿಗಳು, ಶಿಕ್ಷಣ ತಜ್ಞರು, ವಿಜ್ಞಾನಾಸಕ್ತರ ದೂರು.

ಚುರುಮುರಿ

ಫಲಿತಾಂಶದ ಪಾಠ

• ಸುಮಂಗಲಾ

'ಮುದುಡಿತು ಮುದುಡಿತು... ಅರಳಿದ ತಾವರೆ ಮುದುಡಿತು...' ಎಂದು ಬೆಕ್ಕಣ್ಣ ಭಾರೀ ಶೋಕರಾಗದಲ್ಲಿ ಹಾಡುತ್ತಿತ್ತು.

'ಅಷ್ಟೇ ಯಾಕೆ... ಉದುರಿತು ಉದುರಿತು, ತೆನೆಯೂ ಬಲಿಯದೆ ಉದುರಿತು ಅಂತನೂ ಸೇರಿಸ್ಕೊಂಡು ಹಾಡಲೇ' ಎಂದು ನಾನು ಕಿಚಾಯಿಸಿದೆ.

'ಛೇ... ನಮ್ ಕುಮಾರಣ್ಣ ತಾನೇ ಕಿಂಗ್ ಮೇಕರ್, ಕೈ ಪಕ್ಷ ಅಥವಾ ಕಮಲ ಪಕ್ಷ ಯಾರೇ ಆದ್ರೂ ತನ್ನ ಕೈಹಿಡಿಲೇಬೇಕು, ತನ್ನ ಷರತ್ತಿಗೆ ತಲೆಬಾಗಲೇಬೇಕು ಅಂತ ಎಷ್ಟ್ ಹಾರಾಡತಿದ್ದ. ಕುಮಾರಣ್ಣನೇ ಮುಖ್ಯಮಂತ್ರಿಯಾಗತಾನ ಅಂತ ಎಷ್ಟ್ ಖುಷಿಯಾಗಿದ್ದೆ ನಾ' ಬೆಕ್ಕಣ್ಣ ಬಲೇ ಅಲವತ್ತುಕೊಂಡಿತು.

'ನೋಡಲೇ, ಮಂದಿಗಿ ಮಂದಿರ, ಮಸೀದಿ ಜಗಳ ಬ್ಯಾಡ, ಮಾತಿನ ಮಂಟಪ ಬ್ಯಾಡ, ಹೊಟ್ಟೆ, ಬಟ್ಟೆ, ಕಣ್ತುಂಬ ನಿದ್ದೆ, ಒಟ್ಟು ನೆಮ್ಮದಿ ಬೇಕು'.

'ಅದೇ ನಾನೂ ಹೇಳದು, ಹಂಗ ನೆಮ್ಮದಿ ಬೇಕು ಅಂದರ ಡಬ್ಬಲ್ ಎಂಜಿನ್ ಬೇಕು ನಮಗ. ಮೋದಿ ಮಾಮನ ಮುಖ ನೋಡಿಯಾದ್ರೂ ಮಂದಿ ಮತ ಹಾಕಬೇಕಿತ್ತು. ಎಷ್ಟ್ ರೋಡ್ ಶೋ ಮಾಡಿದ್ರು' ಎಂದು ವಾದಿಸಿತು.

'ಮಂದಿ ಬರೇ ಮುಖ ನೋಡಿ ಮತ ಹಾಕಂಗಿಲ್ಲ. ಏನೇನೋ ಲೆಕ್ಕಾಚಾರಗಳು ತೆರೆಮರೆವಳಗ ನಡಿದಿರ್ತಾವು. ಖರೇ ಅಂದರೆ ಗೆದ್ದಿದ್ದು ನಮ್ಮ ಕರುನಾಡಿನ ಮತದಾರರು ಕಣಲೇ. ಎಂಥೆಂಥ ಘಟಾನುಘಟಿಗಳು, ಮಾಜಿ-ಹಾಲಿ ಸಚಿವರನ್ನೇ ಮಕಾಡೆ ಮಲಗಿಸ್ಯಾರೆ. ಕುರ್ಚಿ ಸಿಕ್ಕೇ ಬಿಡತೈತಿ ಅಂತ ಮೆರೀತಿದ್ದವರು ಸೋತಾಗ ಮಾತ್ರ, ಜನತಾ ಜನಾರ್ದನರ ತೀರ್ಪನ್ನು ಸಮಚಿತ್ತದಿಂದ ಸ್ವೀಕರಿಸ್ತೀನಿ ಅಂತ ಮೆತ್ತಗೆ ಉಲೀತಾರ' ನಾನು ನಕ್ಕೆ.

'ಹಂಗ ನೋಡಿದರೆ ಮತದಾರ ತನ್ನ ತೀರ್ಪಿನಲ್ಲಿ ಮೂರೂ ಪಕ್ಷಕ್ಕೆ ಪಾಠ ಕಲಿಸ್ಯಾನ. ದೊಡ್ಡ ಪಾಠ ಕೈ ಪಕ್ಷಕ್ಕೆ ಐತಿ. ಅಭಿವೃದ್ಧಿ ಕೆಲಸ ಮಾಡೂದು ಬಿಟ್ಟು ನೀವು ಈ ಗೆಲುವಿನ ಸೊಕ್ಕಿನಾಗೆ ಬೀಗುತಾ, ಒಳಜಗಳ ಮಾಡುತಾ ಕೂತುಕೋಬ್ಯಾಡ್ರಿ. ನಮ್ಮ ಮೋದಿಮಾಮಾರು, ಈಗಲೇ ಮುಂದಿನ ಲೋಕಸಭೆ ಚುನಾವಣೆ ತಯಾರಿ ಶುರು ಮಾಡ್ಯಾರೆ' ಎನ್ನುತ್ತಾ ಕೊನೆಗೊಮ್ಮೆ ಬೆಕ್ಕಣ್ಣ ಜಾಣತನದ ಮಾತಾಡಿತು.

ದಿನದ ಟ್ವೀಟ್

ಗೆಲ್ಲಬೇಕಿರುವುದು ಏನೆಂದರೆ...



ಕರ್ನಾಟಕ: ಚುನಾವಣೆಯಲ್ಲಿ ಗೆಲ್ಲುವುದು ಕಷ್ಟ. ಜನರ ಹೃದಯವನ್ನು ಗೆಲ್ಲುವುದು ಇನ್ನೂ ಕಷ್ಟ! ಮುಂದಿನ ಐದು ವರ್ಷಗಳ ಕಾಲ ಮುಕ್ತ, ಪ್ರಾಮಾಣಿಕ ಹಾಗೂ ತಾರತಮ್ಯರಹಿತವಾಗಿ ನಡೆದುಕೊಳ್ಳುವ ಮೂಲಕ ಜನರ ಹೃದಯವನ್ನು ಗೆಲ್ಲಿ. ಇದ್ಯಾವುದನ್ನೂ ಪಾಲಿಸದ ಕಾರಣದಿಂದಲೇ ಬಿಜೆಪಿ ಸೋಲುವಂತಾಯಿತು!

ಕಪಿಲ್ ಸಿಬಲ್, ವಕೀಲ

ಕಿಡಿನುಡಿ



ವಿರೋಧ ಪಕ್ಷಗಳು ಒಂದಾದರೆ ಬಿಜೆಪಿ ಅಧಿಕಾರದಲ್ಲಿ ಇರುವುದಿಲ್ಲ ಎಂದು ನಾವು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ಕರ್ನಾಟಕದ ಚುನಾವಣೆ ಬಳಿಕ ದೇಶದಾದ್ಯಂತ ಒಂದು ಅಲೆ ಪ್ರಾರಂಭವಾಗಿದೆ. ಬಿಜೆಪಿಯ ಅಧಿಕಾರ ಕೊನೆಗೊಳ್ಳುತ್ತಿದೆ ಎಂದು ಜನ ಹೇಳಲು ಶುರು ಮಾಡಿದ್ದಾರೆ. ಒಂದು ವೇಳೆ ಈಗ ವಿರೋಧ ಪಕ್ಷಗಳು ಒಂದಾಗದಿದ್ದರೆ, ದೇಶದ ಜನ ಎಂದೂ ನಮ್ಮನ್ನು ಕ್ಷಮಿಸಲಾರರು.

ಅಧೀರ್ ರಂಜನ್ ಚೌಧರಿ, ಕಾಂಗ್ರೆಸ್ ಸಂಸದ, ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 15-5-1998

• **ಮುಖಭಂಗ ತಪ್ಪಿಸಿಕೊಂಡ ಆಡಳಿತ ಪಕ್ಷ**

ಬೆಂಗಳೂರು, ಮೇ 14– ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರನ್ನು ನಾಮಕರಣ ಮಾಡಲು ಸರ್ಕಾರಕ್ಕೆ ಅಧಿಕಾರ ನೀಡುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕ 1998ಕ್ಕೆ ವಿಧಾನಸಭೆಯ ಒಪ್ಪಿಗೆ ಪಡೆಯುವುದರೊಂದಿಗೆ ಆಡಳಿತಾರೂಢ ಜನತಾ ದಳ ಮುಖಭಂಗಕ್ಕೆ ಒಳಗಾಗುವುದನ್ನು ತಪ್ಪಿಸಿಕೊಂಡಿತು.

ತಿದ್ದುಪಡಿ ವಿಧೇಯಕವನ್ನು ತೀವ್ರವಾಗಿ ವಿರೋಧಿಸಿದ ವಿರೋಧ ಪಕ್ಷಗಳು ವಿಧೇಯಕವನ್ನು ಮತಕ್ಕೆ ಹಾಕುವಂತೆ ಒತ್ತಾಯಿಸಿದಾಗ ಆಡಳಿತ ಪಕ್ಷದ ಸಾಲುಗಳಲ್ಲಿ ಒಂದು ಕ್ಷಣ ತಳಮಳ ಉಂಟಾಯಿತು. ವಿರೋಧ ಪಕ್ಷಗಳ ಸದಸ್ಯರ ಒತ್ತಾಯದಂತೆ ಸಭಾಧ್ಯಕ್ಷ ರಮೇಶ್ ಕುಮಾರ್ ಅವರು ತಿದ್ದುಪಡಿ ವಿಧೇಯಕವನ್ನು ಮತಕ್ಕೆ ಹಾಕಿದಾಗ, ಅದು 57– 36 ಮತಗಳಿಂದ ಅಂಗೀಕೃತವಾಯಿತು. ವಿಧೇಯಕ ಅಂಗೀಕೃತವಾಗಿದೆ ಎಂದು ಸಭಾಧ್ಯಕ್ಷರು ಪ್ರಕಟಿಸುತ್ತಿದ್ದಂತೆಯೇ ಆಡಳಿತ ಪಕ್ಷದ ಸದಸ್ಯರು ಸಮಾಧಾನದ ನಿಟ್ಟುಸಿರುಬಿಟ್ಟರು.

• **ಮತ್ತೆ ವೀರಪ್ಪನ್ ಶರಣಾಗತಿ ಇಂಗಿತ**

ಚೆನ್ನೈ, ಮೇ 14– ಕರ್ನಾಟಕ ಸರ್ಕಾರ ತನ್ನ ವಿರುದ್ಧ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ತಮಿಳುನಾಡಿಗೆ ವರ್ಗಾಯಿಸಿದರೆ ಬೇಷರತ್ತಾಗಿ ಶರಣಾಗುವ ಇಂಗಿತವನ್ನು ಕಾಡುಗಳ್ಳ ವೀರಪ್ಪನ್ ಮತ್ತೆ ವ್ಯಕ್ತಪಡಿಸಿದ್ದಾನೆ.

ನೇಟ್ರಿಕಣ್ ಪತ್ರಿಕೆಯ ಸಂಪಾದಕ ಎ.ಎಸ್. ಮಣಿ ಅವರಿಗೆ ಕಳಿಸಿರುವ ಆಡಿಯೊ ಕ್ಯಾಸೆಟ್ಟಿನಲ್ಲಿ ವೀರಪ್ಪನ್ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

50 ವರ್ಷಗಳ ಹಿಂದೆ

ಮಂಗಳವಾರ, 15-5-1973

• **ನಿಗದಿಪಡಿಸಿದ ಗೋಧಿ, ಕೆಂಪು ಜೋಳ ರವಾನೆಗೆ ಕೇಂದ್ರಕ್ಕೆ ತುರ್ತು ತಗಾದೆ**

ಬೆಂಗಳೂರು, ಮೇ 14– ರಾಜ್ಯಕ್ಕೆ ನಿಗದಿಪಡಿಸಿರುವ ಗೋಧಿ ಹಾಗೂ ಕೆಂಪು ಜೋಳವನ್ನು ತತ್‌ಕ್ಷಣ ರಾಜ್ಯಕ್ಕೆ ರವಾನಿಸಲು ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಕೇಂದ್ರಕ್ಕೆ ಆಪತ್ಕಾಲದ ಕರೆಯನ್ನು ಕಳುಹಿಸಿದ್ದಾರೆ.

ಈ ಸಂಬಂಧದಲ್ಲಿ ಕೇಂದ್ರದ ಸಚಿವರನ್ನು ಖುದ್ದಾಗಿ ಭೇಟಿ ಮಾಡಲು ಅವರೇ ಮಂಗಳವಾರ ದೆಹಲಿಗೆ ತೆರಳಿದ್ದಾರೆ.

'ನಮಗೆ ಒದಗಿಸಲಾಗುವುದೆಂದು ಹೇಳಿರುವ ಧಾನ್ಯವನ್ನು ಕೇಂದ್ರವು ರಾಜ್ಯಕ್ಕೆ ರವಾನಿಸಬೇಕು. ಇಲ್ಲದಿದ್ದರೆ ನಾವು ಹಸಿದ ಜನರಿಗೆ ಏನು ಸಮಾಧಾನ ಹೇಳುತ್ತ ಹೋಗೋಣ?' ಎಂಬ ತವಕವನ್ನು ಮುಖ್ಯಮಂತ್ರಿಗಳು ಇಂದು ವರದಿಗಾರರಲ್ಲಿ ವ್ಯಕ್ತಪಡಿಸಿದರು.

• **8 ಭಿನ್ನಮತೀಯ ಶಾಸಕರಿಂದ ಅರಸು ಸಂಪುಟದ ವಿರುದ್ಧ ಪ್ರಧಾನಿಗೆ ದೂರು**

ನವದೆಹಲಿ, ಮೇ 14– ಮೈಸೂರು ರಾಜ್ಯದ ಸುಮಾರು ಎಂಟು ಮಂದಿ ಭಿನ್ನಮತೀಯ ಕಾಂಗ್ರೆಸ್ ಶಾಸಕರು ಇಂದು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ದೇವರಾಜ ಅರಸು ಅವರ ಸಂಪುಟದ ವಿರುದ್ಧ ವಿವಿಧ ಆಪಾದನೆಗಳನ್ನೊಳಗೊಂಡ ದೂರು ಪತ್ರವನ್ನು ಸಲ್ಲಿಸಿದರು.

ರಾಜ್ಯದಲ್ಲಿನ ತೀವ್ರ ಅಭಾವ ಪರಿಸ್ಥಿತಿ ಹಾಗೂ ಅದನ್ನೆದುರಿಸಲು ಭಾರಿ ಪ್ರಮಾಣದಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದರಲ್ಲಿ ರಾಜ್ಯದ ಕಾಂಗ್ರೆಸ್ ನಾಯಕತ್ವ ವಿಫಲಗೊಂಡಿರುವುದನ್ನು ತಾವುಗಳು ಇಂದಿರಾ ಗಾಂಧಿಯವರಿಗೆ ವಿವರಿಸಿದ್ದಾಗಿ ಎಂಟು ಮಂದಿಯ ಪೈಕಿ ಒಬ್ಬರು ತಿಳಿಸಿದರು.

ಸಂಗತ

ಕುಟುಂಬ ಮತ್ತು 'ಯಾಂತ್ರಿಕ' ಸಂಬಂಧ

ಕೌಟುಂಬಿಕ ನೆಮ್ಮದಿ, ಗಟ್ಟಿಯಾದ ಸಂಬಂಧ ನಾವು ಬಹುವಾಗಿ ಬೆಲೆ ನೀಡಬೇಕಾದ ಅಂಶಗಳು ಎಂಬುದನ್ನು ಅಧ್ಯಯನಗಳು ಒತ್ತಿ ಹೇಳುತ್ತವೆ

• ಡಾ. ಕೆ.ಎಸ್.ಪವಿತ್ರ

ಆಧುನಿಕ ಕುಟುಂಬ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳು ಪ್ರತಿನಿತ್ಯ ಬದಲಾಗುತ್ತಿವೆ. ಪರಿಹಾರ ಕಂಡುಕೊಳ್ಳುವಷ್ಟರಲ್ಲಿ ಹೊಸ ಸ್ವರೂಪ ಪಡೆಯುತ್ತಿವೆ. 'ಎಲ್ಲಕ್ಕೂ ಒಂದೇ ಪರಿಹಾರ. ಹಿಂದಿನದನ್ನು ಪಾಲಿಸೋಣ, ಎಲ್ಲವೂ ಸರಿ ಹೋಗುತ್ತವೆ' ಎಂಬ 'ಮಾಂತ್ರಿಕ' ಸಲಹೆಯನ್ನು ಹಲವರು ಸೂಚಿಸಬಹುದು. ಆದರೆ ಅದನ್ನು ಪ್ರಾಯೋಗಿಕವಾಗಿ ಪಾಲಿಸುವುದು ಸುಲಭವಲ್ಲ. ಹೀಗೆ ಹಿಂದಿನದನ್ನೇ ಯಥಾವತ್ ಪಾಲಿಸದೆ ಆಧುನಿಕವಾಗಿ ಬದಲಾಗಿರುವ ದೂಷಣೆಗೆ ಬಹುಬಾರಿ ಗುರಿಯಾಗುವುದು ಕುಟುಂಬದ ಮಹಿಳೆಯಷ್ಟೇ! 'ಅಂತರರಾಷ್ಟ್ರೀಯ ಕುಟುಂಬ ದಿನಾಚರಣೆ'ಯ (ಮೇ 15) ಈ ಹೊತ್ತಿನಲ್ಲಿ, ಬದಲಾದ ಇಂದಿನ ಕುಟುಂಬ ವ್ಯವಸ್ಥೆಯಲ್ಲಿನ ಸಂಬಂಧ ಹಾಗೂ ಭಾವನೆಗಳನ್ನು ಗಮನಿಸಬೇಕಾಗಿದೆ.

ಮಾನವರ ನಡುವಿನ ಸಂಬಂಧಗಳಲ್ಲಿ ಇಂದು ಯಂತ್ರಗಳ ಪಾತ್ರ ಬಲು ಹಿರಿದು. 'ಛೇ ಛೇ ಇಲ್ಲ' ಎಂದು ಯಾರೂ ತಲೆ ಆಡಿಸುವಂತೆಯೇ ಇಲ್ಲ. ಸಂಬಂಧಗಳನ್ನು ಬೆಳೆಸುವುದಕ್ಕೂ ವ್ಯಕ್ತಿಗಳನ್ನು ಬೇರ್ಪಡಿಸುವುದಕ್ಕೂ ಇಂದು ಯಂತ್ರಗಳು ಕಾರಣವಾಗಿವೆ. ಸ್ಮಾರ್ಟ್ ಮೊಬೈಲ್ ಫೋನ್‌ಗಳು, ಮಕ್ಕಳೊಡನೆ ಆಟವಾಡಿ ಪ್ರತಿಕ್ರಿಯಿಸುವ, ಕಥೆ ಹೇಳುವ, ಹಾಡು ಹಾಕುವ ಸಾಧನಗಳು, ಮನುಷ್ಯರ ಗೊಡವೆಯೇ ಇಲ್ಲದೆ ಸ್ವತಃ ಕೆಲಸ ಮಾಡಿ ಮುಗಿಸುವ ಯಂತ್ರಗಳು... ಹೀಗೆ ಕುಟುಂಬ ವ್ಯವಸ್ಥೆಯು 'ಯಾಂತ್ರಿಕ'ವಾಗಿದೆ!

ಕೌಟುಂಬಿಕ ನೆಮ್ಮದಿ, ಗಟ್ಟಿಯಾದ ಸಂಬಂಧ ನಾವು ಬಹುವಾಗಿ ಬೆಲೆ ನೀಡಬೇಕಾದ ಅಂಶಗಳು ಎಂಬುದನ್ನು ಅಧ್ಯಯನಗಳು ಒತ್ತಿ ಹೇಳುತ್ತವೆ. ಈ ಅಂಶಗಳನ್ನು ನಾವೆಲ್ಲರೂ ಸುಲಭವಾಗಿ ಒಪ್ಪಿ 'ಹೌದು, ಹೌದು' ಎಂದು ತಲೆಯಾಡಿಸುತ್ತೇವೆ. ಆದರೆ ಪಾಲಿಸುವುದು ಸುಲಭವೇ? ಒಂದೇ ಕುಟುಂಬದ ಇಬ್ಬರು ವ್ಯಕ್ತಿಗಳ ನಡುವೆ ಸಂಬಂಧ ಗಟ್ಟಿಯಾಗುವುದು ಹೇಗೆ? ಮಾತು, ಬೆರೆಯುವಿಕೆ, ಒಟ್ಟಿಗೆ ಕೆಲಸ ಮಾಡುವಂತಹ ಚಟುವಟಿಕೆಗಳ ಮೂಲಕ. ಇವುಗಳನ್ನು ಒಟ್ಟಿಗೆ ಮಾಡಲು ಯಾರಿಗೆ ಸಮಯವಿದೆ? ಒಂದೊಮ್ಮೆ, ಒಟ್ಟಿಗೇ ಕಳೆಯುವ ಸಮಯವನ್ನು ಹಟದಿಂದ ನಿರ್ದಿಷ್ಟವಾಗಿ ಪಾಲಿಸುತ್ತೇವೆ ಎಂದರೂ, ಮತ್ತೊಬ್ಬರ ಮಾತನ್ನು ಕೇಳುವ ಸಹನೆ ಯಾರಿಗಿದೆ?

ಪತಿ, ಪತ್ನಿ ನಡುವೆ ಪರಸ್ಪರ ನೋವು, ನಲಿವು ಹಂಚಿಕೊಳ್ಳುವ ಮಾತುಕತೆ ಸಾಮಾನ್ಯವಾಗಿ ದಾರಿ ಮಾಡುವುದು ಕಲಹಗಳಿಗೆ. ಓದು, ಬರಹ, ಏನನ್ನಾದರೂ ಸಾಧಿಸುವುದು, ಹಾಗೆ ಮಾಡಬೇಡ, ಹೀಗೆ ಮಾಡು ಎನ್ನುವಂತಹ ಮಾತುಗಳನ್ನು ಬಿಟ್ಟು ಮಕ್ಕಳೊಡನೆ ಬೇರೆ ಮಾತುಗಳನ್ನಾಡಲು ಅಪ್ಪ ಅಮ್ಮಂದಿರಿಗೆ ಗೊತ್ತೇ ಇಲ್ಲ! ತಮ್ಮ ಕೈಯ್ಯಲ್ಲಿರುವ ಸಾಧನಗಳನ್ನು ಬಿಟ್ಟು ಅಪ್ಪ ಅಮ್ಮಂದಿರತ್ತ ತಿರುಗಲು ಮಕ್ಕಳಿಗೆ ಪುರಸತ್ತೂ ಇಲ್ಲ. ಸಹಜವಾಗಿ ನಮ್ಮ ಮನಸ್ಸಿನಲ್ಲಿ ಬೇರೂರಿರುವ ಕುಟುಂಬ ವ್ಯವಸ್ಥೆಯ ಚಿತ್ರಣ, ನಿಜವಾಗಿ ನೋಡಿದರೆ ಇತಿಹಾಸವಷ್ಟೇ ಆಗಿ, ಕ್ರಮೇಣ ಶಿಥಿಲಗೊಳ್ಳುತ್ತಾ ಸಾಗಿ, ಮಾನವ 'ಸಂಘಜೀವಿ' ಹೌದೇ ಎಂದು ಅನುಮಾನ ಮೂಡಿಸುತ್ತದೆ.

ಕೃತಕ ಬುದ್ಧಿಮತ್ತೆ (ಎಐ) ಆವರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ, ಸಂಬಂಧಗಳಲ್ಲಿ ಎಐ ಚಾಟ್‌ಬಾಟ್ ಸಂಗಾತಿಗಳು ಗಟ್ಟಿಯಾಗಿ ಹೆಜ್ಜೆಯೂರುತ್ತಿದ್ದಾರೆ. 'ರೆಪ್ಲಿಕಾ' ಎನ್ನುವಂತಹ ಎಐ ಚಾಟ್‌ಬಾಟ್‌ನ ಉದ್ದೇಶದ ಬಗೆಗಿನ ಜಾಹೀರಾತು ಹೇಳುವುದೇನು ಗೊತ್ತೇ? 'ನಿಮ್ಮ ಬಗ್ಗೆ ಕಾಳಜಿ ವಹಿಸುವ ಸಂಗಾತಿ, ನೀವು ಹೇಳುವುದನ್ನು ಕೇಳುವ ಮತ್ತು ನಿಮ್ಮೊಂದಿಗೆ ಮಾತನಾಡುವ, ಎಂದಿಗೂ ನಿಮ್ಮ ಜೊತೆಯೇ ಇರುವ ಸಂಗಾತಿ'. ನಮ್ಮಲ್ಲಿ ಪ್ರತಿಯೊಬ್ಬರೂ ಬಯಸುವ ಭಾವನಾತ್ಮಕ ಸಾಂಗತ್ಯವಲ್ಲವೇ ಇದು?!



ಮುಂದಿನ 10 ವರ್ಷಗಳಲ್ಲಿ, ಚಾಟ್‌ಜಿಪಿಟಿ 4.0 ಕ್ಕಿಂತ ನೂರಾರು ಪಟ್ಟು ಬಲಯುತವಾದಂತಹ ಎಐ ಸಾಧನಗಳನ್ನು ವಿಜ್ಞಾನ ಜಗತ್ತು ಹೊರತರಲಿದೆ. ನಮ್ಮ ಭಾವನೆ, ನಡವಳಿಕೆಯನ್ನೂ ಅನುಕರಿಸಲು ಸಮರ್ಥವಾಗಿರುವಂತಹ ಸಾಧನಗಳು ಇವು. ನಾವೇನು ಹೇಳಿದರೂ ನೆನಪಿಡುವಂತಹ, ನಮ್ಮನ್ನು ವಿರೋಧಿಸದಂತಹ, ಹಾಸ್ಯಪ್ರಜ್ಞೆ ಇರುವ, ನಮ್ಮ ನಂಬಿಕೆ, ಆಸೆಗಳನ್ನೆಲ್ಲ ಅರ್ಥ ಮಾಡಿಕೊಳ್ಳುವ ಆದರ್ಶ ಅಪ್ಪ, ಅಮ್ಮ, ಮಗ, ಮಗಳು, ಸಂಗಾತಿಯಂತಹ ಸಾಧನಗಳು!

ಮನೋವೈದ್ಯ ಡ್ಯಾನಿಯಲ್ ಸೀಗಲ್ ಅವರ ಒಂದು ಪುಸ್ತಕವಿದೆ - 'ಮೈಂಡ್‌ಸೈಟ್: ದಿ ನ್ಯೂ ಸೈನ್ಸ್ ಆಫ್ ಪರ್ಸನಲ್ ಟ್ರಾನ್ಸ್‌ಫರ್ಮೇಷನ್'. ಭಾವನೆಗಳನ್ನು ಅರಿಯಬೇಕಾದ ಅಗತ್ಯವನ್ನು ಈ ಪುಸ್ತಕ ಪ್ರತಿಪಾದಿಸುತ್ತದೆ. ಅಂದರೆ, ಇನ್ನೊಬ್ಬರಿಗೆ ನಮ್ಮ ಭಾವನೆಯ ಅರಿವಾಗಿದೆ ಎಂದು ನಮಗನ್ನಿಸಿದಾಗ ನಮಗೆ ಸಿಕ್ಕುವ ಒಂದು ತೃಪ್ತ ಭಾವ ಅದು. ಕೃತಕ ಬುದ್ಧಿಮತ್ತೆಯ ಸಾಧನಗಳು ನಮ್ಮ ಸುತ್ತಮುತ್ತಲಿರುವ ಮನುಷ್ಯರಿಗಿಂತ ತುಂಬ ಪರಿಣಾಮಕಾರಿಯಾಗಿ ಈ ಭಾವವನ್ನು ನಮ್ಮಲ್ಲಿ ಉಂಟು ಮಾಡಿಬಿಡಬಹುದು!

ಕಥೆ, ಗಣಿತ, ತರ್ಕ, ಸಂಗೀತದಂತಹ ಎಲ್ಲ ಕೆಲಸಗಳನ್ನೂ ಮನುಷ್ಯರಿಗಿಂತ ಉತ್ತಮವಾಗಿ ಮಾಡುವ ಸಾಮರ್ಥ್ಯವಿರುವ ಎಐ, ಇತರ ಮನುಷ್ಯರೊಂದಿಗೆ ಸಂಬಂಧವನ್ನು ಕಟ್ಟಿಕೊಳ್ಳುವುದು, ಕಾಯ್ದುಕೊಳ್ಳುವಂತಹ ಕೆಲಸಗಳನ್ನೂ ಮನುಷ್ಯರಿಗಿಂತ ಉತ್ತಮವಾಗಿ ಮಾಡುವ ಎಲ್ಲ ಸಾಧ್ಯತೆಗಳನ್ನೂ ಈ ಹೊತ್ತು ತೋರಿಸುತ್ತಿದೆ. ಅಂದರೆ ಕುಟುಂಬದಲ್ಲಿ 'ಯಂತ್ರ'ವಾಗಿ ಕುಳಿತಿರುವ ಸಾಧನ ತಾನೇ ಕುಟುಂಬದ ಸದಸ್ಯನೂ ಆಗಿಬಿಡುವ ಹೊತ್ತು! ಇದು ಬೇಕೋ ಬೇಡವೋ ಎಂಬ ಸಂದಿಗ್ಧ ನಮ್ಮನ್ನು ಕಾಡುವುದು ನಿಶ್ಚಿತ. ಆಧುನಿಕ ಜಗತ್ತಿನಲ್ಲಿ ನಮಗೆ ಆಯ್ಕೆಯಿಲ್ಲ ಎನ್ನುವ ರೀತಿಯಲ್ಲಿ ನಾವು ಮುಂದೆ ಸಾಗುತ್ತಿದ್ದೇವೆ!

ಇರುವುದೊಂದೇ ಪರಿಹಾರ- ಎಷ್ಟು ಬೇಕು, ಎಷ್ಟು ಬೇಡ ಎಂಬುದನ್ನು ವಿವೇಚನೆಯಿಂದ ನಿರ್ಧರಿಸಿ, ಎಚ್ಚೆತ್ತುಕೊಂಡು, ನಮ್ಮಲ್ಲಿರುವ 'ಮಾನವೀಯತೆ'ಯನ್ನು ಕೇಂದ್ರವಾಗಿ ಇರಿಸಿಕೊಂಡು, 'ಯಾಂತ್ರಿಕತೆ'ಯನ್ನು ನಿಯಂತ್ರಿಸುವುದು, ಕುಟುಂಬ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಯಂತ್ರಗಳನ್ನು ಬಳಸುವುದು!

ವಾಚಕರ ವಾಣಿ

ಬೇಡ ಬಣ ರಾಜಕೀಯ

ಕರ್ನಾಟಕದ ಪಾಲಿಗೆ ಅತ್ಯಂತ ಸಂತೋಷದ ವಿಷಯವೆಂದರೆ, ಮತದಾರ ಪ್ರಭು ಒಂದೇ ಪಕ್ಷಕ್ಕೆ ಪೂರ್ಣ ಬಹುಮತ ನೀಡಿದ್ದು. ಒಂದುವೇಳೆ ಅತಂತ್ರ ವಿಧಾನಸಭೆ ನಿರ್ಮಾಣವಾಗಿದ್ದರೆ, ಜನಸೇವೆಯೊಂದನ್ನು ಬಿಟ್ಟು ಸರ್ಕಾರ ರಚನೆಗಾಗಿ ಬೇರೆಲ್ಲ ಕಸರತ್ತುಗಳು ಗರಿಗೆದರುತ್ತಿದ್ದವು. ಆಗ ಜನಕಲ್ಯಾಣ ನಗಣ್ಯವಾಗುತ್ತಿತ್ತು.

ಬಹುಮತ ಪಡೆದಿರುವ ಕಾಂಗ್ರೆಸ್ ಪಕ್ಷ ಈಗ ಅಧಿಕಾರಕ್ಕಾಗಿ ಬಣಗಳಾಗಿ ಕಿತ್ತಾಡದೆ, ತಾನು ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗಾಗಿ ಘೋಷಿಸಿರುವ 'ಗ್ಯಾರಂಟಿ' ಆಶ್ವಾಸನೆಗಳನ್ನು ಆದಷ್ಟು ಬೇಗ ಈಡೇರಿಸಲು ಮುಂದಾಗ ಬೇಕು. ಜೊತೆಗೆ ಭ್ರಷ್ಟಾಚಾರಮುಕ್ತ ಆಡಳಿತ ನೀಡಬೇಕು. ದುರಾಡಳಿತದಿಂದ ಬೇಸತ್ತಿರುವ ಜನರಿಗೆ ಆಶಾಕಿರಣವಾಗಿ ಹೊರಹೊಮ್ಮಿದರೆ ಮಾತ್ರ ಜನರ ನಂಬಿಕೆಯನ್ನು ಉಳಿಸಿಕೊಳ್ಳುತ್ತೀರಿ, ಇಲ್ಲದಿದ್ದಲ್ಲಿ ನೀವು ಕೂಡ ಹತ್ತರಲ್ಲಿ ಹನ್ನೊಂದು ಎಂಬಂತಾಗುತ್ತೀರಿ.

ಅಶೋಕ ಪ. ಹೊನಕೇರಿ, ಧಾರವಾಡ

ಮರಗಳಿಗೆ ಮುಳುವಾಗದಿರಲಿ ಗೆದ್ದಲು

ಹುನಗುಂದ ತಾಲ್ಲೂಕಿನ ಚಿತ್ತವಾಡಗಿ ಗ್ರಾಮದ ದೇವಸ್ಥಾನವೊಂದರ ಆವರಣದಲ್ಲಿನ ಬೇವಿನ ಮರವು ಬುಡಸಮೇತ ಬಿದ್ದು ಕ್ಯಾಂಟರ್ ವಾಹನ ಜಖಂಗೊಂಡಿರುವುದು ವರದಿಯಾಗಿದೆ (ಪ್ರ.ವಾ., ಮೇ 12). ಪತ್ರಿಕೆಯಲ್ಲಿ ಪ್ರಕಟವಾಗಿರುವ ಚಿತ್ರವನ್ನು ಗಮನಿಸಿದರೆ, ಕಾಂಡದ ಬುಡವು ಗೆದ್ದಲು ಹುಳುಗಳಿಂದ ಹಾನಿಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಗೆದ್ದಲು ಗೂಡುಗಳು ಭೂಮಿಯೊಳಗೆ ಮತ್ತು ಹುತ್ತಗಳ ರೂಪದಲ್ಲಿ ತಮ್ಮ ಗೂಡಿಗೆ ಆಹಾರವನ್ನು ತರುವ ಉದ್ದೇಶದಿಂದ ಮರದ ಬೇರನ್ನು ತಲುಪಿ, ಅಲ್ಲಿರುವ ಸೆಲ್ಯುಲೋಸ್ ಎಂಬ ವಸ್ತುವನ್ನು ಆಹಾರವಾಗಿ ತಿನ್ನುತ್ತವೆ. ಇದರಿಂದ ಮರ ಒಣಗಲು ಶುರುವಾಗುತ್ತದೆ. ನಂತರ ಬುಡದ ಭಾಗ ಹಾಗೂ ಪೂರ್ಣ ಬೇರನ್ನು ಕೂಡ ಅವು ತಿನ್ನುವುದರಿಂದ ಮರಗಳು ಸಂಪೂರ್ಣವಾಗಿ ಒಣಗಿ, ಮಳೆ ಗಾಳಿಯ ರಭಸಕ್ಕೆ ಸುಲಭವಾಗಿ ಕೆಳಗೆ ಬೀಳುತ್ತವೆ.

ಸಂಬಂಧಪಟ್ಟ ಇಲಾಖೆಯು ಮುಂಜಾಗ್ರತಾ ಕ್ರಮವಾಗಿ, ಮರಗಳ ಸಮೀಪದಲ್ಲಿ ಗೆದ್ದಲಿನ ಗೂಡುಗಳು ಇರುವುದನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಇದರಿಂದ ಮರಗಳಿಗೆ ರಕ್ಷಣೆ ಒದಗಿಸಬಹುದು ಹಾಗೂ ಸಾರ್ವಜನಿಕರಿಗೆ ಆಗುವ ಅಪಾಯವನ್ನು ತಡೆಯಬಹುದು.

ಡಾ. ಡಿ.ರಾಜಗೋಪಾಲ್, ಬೆಂಗಳೂರು

ಎಂಜಿನ್, ಬೋಗಿ ಸಂಬಂಧವೆಂದರೆ...

'ಡಬಲ್ ಎಂಜಿನ್' ಸರ್ಕಾರದ ಪ್ರತಿಪಾದನೆಯನ್ನು ಕರ್ನಾಟಕದ ಮತದಾರರು ತಿರಸ್ಕರಿಸಿರುವ ಈ ಸಂದರ್ಭದಲ್ಲಿ, ಪಕ್ಷ ಹಾಗೂ ಶಾಸಕರ ನಡುವೆ ಎಂಜಿನ್, ಬೋಗಿ ಸಂಬಂಧ ಇರಬೇಕೇ ಎಂಬ ಪ್ರಶ್ನೆಯನ್ನೂ ಪರಿಶೀಲಿಸಬೇಕಾಗಿದೆ. ಜಗದೀಶ ಶೆಟ್ಟರ್ ಅವರ ಸೋಲು ಕೂಡ ಉಮೇದುವಾರನೊಬ್ಬ ಸ್ವಂತ ವಿಚಾರ, ಬಲ, ಸಾಧನೆ ಇಟ್ಟುಕೊಂಡರೆ ಗೆಲ್ಲಲು ಅಷ್ಟೇ ಸಾಕಾಗದು ಎಂಬುದನ್ನು ತೋರಿಸುತ್ತದೆ. 2004ರಲ್ಲಿ ಬಂಗಾರಪ್ಪನವರು 'ನಾನು ಯಾವತ್ತೂ ಎಂಜಿನ್ನೇ ಹೊರತು ಬೋಗಿ ಅಲ್ಲ. ಕೆಲವು ಸಲ ಎಂಜಿನ್ ನಿಂತಿರಬಹುದು, ಇಂದಿರಾ ಗಾಂಧಿಯವರಿಗೇ 1977ರಲ್ಲಿ ಹಾಗಾಗಿತ್ತಲ್ಲ' ಎಂದಿದ್ದುದು ನೆನಪಾಗುತ್ತದೆ. ಟಿಕೆಟ್ ನಿರಾಕರಿಸಿದ ನಾಯಕರಿಗೆ ಸಡ್ಡು ಹೊಡೆದ ಲಕ್ಷ್ಮಣ ಸವದಿ ಗೆದ್ದಿದ್ದಾರೆ. ಅವರೂ ಪಕ್ಷ ಬದಲಿಸಿದ್ದರು. ಯಾವ ಪಕ್ಷ ಸೇರಿದರೂ ಗೆಲ್ಲಬೇಕಾದರೆ ಅವರು ಸ್ವಂತ ಎಂಜಿನ್ ಆಗಿರಬೇಕೇನೊ. ಹಾಗಾದರೆ ಶೆಟ್ಟರ್ ಬರೀ ಬೋಗಿಯೇ? ಕಾಂಗ್ರೆಸ್ ಎಂಜಿನ್ ಓಡಿದರೂ, ಈ ಬೋಗಿ ನಿಂತಿತಲ್ಲಾ!

ಸಿದ್ಧಾಂತದ ಪ್ರಶ್ನೆಯನ್ನೂ ಶೆಟ್ಟರ್ ಅವರು ಎದುರಿಸಬೇಕಾಯಿತು. ಬಂಗಾರಪ್ಪನವರು 'ಸಂಘ ಪರಿವಾರದ ಚಿಂತನೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ ನಂತರವೇ ಬಿಜೆಪಿ ಸೇರಿದ್ದೇನೆ' ಎಂದಿದ್ದರು. ವಿರುದ್ಧ ದಿಕ್ಕಿನಲ್ಲಿ ಪಕ್ಷಾಂತರ ಮಾಡಿರುವ ಶೆಟ್ಟರ್ ಅವರು ಕಾಂಗ್ರೆಸ್ ಚಿಂತನೆಗಳ ಬಗೆಗೆ ಹಾಗೆ ಹೇಳಬಲ್ಲರೇ? ಇಂಗ್ಲಿಷ್‌ನಲ್ಲಿ ಇನ್ನೊಂದು 'ಬೋಗಿ' ಇದೆ. ಇದು ಕನ್ನಡದಲ್ಲಿ ಗುಮ್ಮ, ಬೆದರುಬೊಂಬೆ ಎಂದಾಗುತ್ತದೆ. ಪ್ರಧಾನಿ ನರೇಂದ್ರ ಮೋದಿಯವರು ಡಬಲ್ ಎಂಜಿನ್ ವಿಚಾರವನ್ನು ಹಾಗೂ ಬಳಸಿದರು. ಆದರೆ, ನಡೆಯಲಿಲ್ಲ. ಮುಂದೆ ಪ್ರಚಾರದಲ್ಲಿ ಈ ಮಂತ್ರವನ್ನು ಬಳಸುವ ಎಲ್ಲರಿಗೂ ಈ ಫಲಿತಾಂಶ ಎಚ್ಚರಿಕೆಯ ಸಂದೇಶವಾಗಲಿ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಭರವಸೆಯ ಬೆಳಕಾಗಿ...

ರಾಜ್ಯದ ಜನತೆ ನೀಡಿರುವ ತೀರ್ಪಿನಲ್ಲಿ
ಅಭಿಮಾನಕ್ಕಿಂತ ಹೆಚ್ಚಾಗಿ
ಈ ಹಿಂದೆ ಬೇಸ್ತು ಬಿದ್ದಿದ್ದ ಭಯವಿದೆ!
ಮುಂದಿನ ದಾರಿಗೆ ಬೆಳಕು
ತೋರುವರೆಂಬ ಭರವಸೆಯಿದೆ
ದಯಮಾಡಿ ನೆಪ ಹೇಳಬೇಡಿ
ವೃಥಾ ಆರೋಪದಿ ಕಾಲಕಳೆಯಬೇಡಿ
ಆಕಾಶವನ್ನು ಕೆಳಗಿಳಿಸದಿದ್ದರೂ ಪರವಾಗಿಲ್ಲ
ಹತಾಶೆಯಲಿ ಆಕಾಶ ನೋಡುವಂತೆ
ಮಾತ್ರ ಆಳಬೇಡಿ...

ಜೆ.ಬಿ.ಮಂಜುನಾಥ, ಪಾಂಡವಪುರ

ಮತದಾರರ ಗೆಲುವು ಗೌರವಿಸಿ

ರಾಜ್ಯದಲ್ಲಿ ಕಾಂಗ್ರೆಸ್ ಬಹುಮತದಿಂದ ಜಯಭೇರಿ ಬಾರಿಸಿದ ಮೇಲೆ ನಡೆದ ಮುಖ್ಯಮಂತ್ರಿ ಆಯ್ಕೆಯ ಕಸರತ್ತನ್ನು ಮತದಾರರು ಗಮನಿಸಿದ್ದಾರೆ. ಗೆಲುವಿಗೆ ಕಾರಣ ಯಾವುದೇ ಜಾತಿ, ಧರ್ಮಕ್ಕೆ ಸೇರಿದ ಮಠ, ಮಂದಿರ ಸ್ವಾಮೀಜಿಗಳಲ್ಲ ಅಥವಾ ಪೂಜೆ ಪುನಸ್ಕಾರ ಜಪತಪಗಳಲ್ಲ. ಕಾಂಗ್ರೆಸ್ ಗೆಲುವು ಮತದಾರರ ಗೆಲುವು. ಈ ಗೆಲುವಿನ ಹಿಂದೆ ವೈಚಾರಿಕ ಪ್ರಜ್ಞೆಯುಳ್ಳ ಅನೇಕ ಜಾತ್ಯತೀತ ಮನಸ್ಸುಗಳೂ ಇವೆ.

ಶಾಸಕಾಂಗದ ಮುಂದೆ ತೆರೆದ ಸಂವಿಧಾನ ಇರುವಾಗ, ಮಠಗಳಲ್ಲಿ ಸಮಾಲೋಚನೆ ಮಾಡಿ ಸ್ವಾಮೀಜಿಗಳಿಗೆ ಮೊರೆ ಹೋಗುವ ಅಗತ್ಯ ಇದೆಯೇ? 2024ರಲ್ಲಿ ಬರಲಿರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು, ಒಳ್ಳೆಯ ಆಡಳಿತ ಕೊಡುವತ್ತ ಸರ್ಕಾರ ಪ್ರಯತ್ನ ನಡೆಸಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪುನರಾಯ್ಕೆ ಇಲ್ಲದ ಪ್ರವೃತ್ತಿಗಿಲ್ಲ ಕೊನೆ

ಕರ್ನಾಟಕ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ. ಫಲಿತಾಂಶವು ಹಲವು ಅಚ್ಚರಿಗಳನ್ನು ಬಿಚ್ಚಿಟ್ಟಿದೆ. ಜನರು ಯಾವ ರೀತಿಯಲ್ಲಿ ಮತದಾನ ಮಾಡಿದ್ದಾರೆ, ನಿರ್ಧಾರ ಕೈಗೊಳ್ಳುವಲ್ಲಿ ಮತದಾರರ ಮೇಲೆ ಪ್ರಭಾವ ಬೀರಿದ ಅಂಶಗಳು ಯಾವುವು, ರಾಜ್ಯದಲ್ಲಿ ಮತದಾನದ ಪ್ರವೃತ್ತಿ ಹೇಗಿತ್ತು ಮುಂತಾದ ವಿಚಾರಗಳನ್ನು ಲೋಕನೀತಿ-ಸಿಎಸ್‌ಡಿಎಸ್ ಮತದಾನೋತ್ತರ ಸಮೀಕ್ಷೆಯಲ್ಲಿ ಕಂಡುಕೊಳ್ಳಲಾಗಿದೆ.

• ಸಂದೀಪ್ ಶಾಸ್ತ್ರಿ, ಸುಹಾಸ್ ಪಲ್ಶೀಕರ್, ಸಂಜಯ್ ಕುಮಾರ್

ಯಾರಿಗೆ ಮತ: ಪ್ರಚಾರ ಆರಂಭಕ್ಕೆ ಮುನ್ನವೇ ನಿರ್ಧಾರ

ಕರ್ನಾಟಕದಲ್ಲಿ 1985ರಿಂದ ಈವರೆಗೆ ಆಡಳಿತ ಪಕ್ಷ ಪುನರಾಯ್ಕೆಗೊಂಡ ನಿದರ್ಶನ ಇಲ್ಲ. ಅದೇ ಪ್ರವೃತ್ತಿ 2023ರಲ್ಲಿಯೂ ಮುಂದುವರಿದಿದೆ. ಯಾವ ಪಕ್ಷಕ್ಕೂ ಬಹುಮತ ಸಿಗುವುದಿಲ್ಲ ಎಂಬ ಹಲವು ಸಮೀಕ್ಷೆಗಳನ್ನು ಹುಸಿಯಾಗಿಸಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತ ಪಡೆದಿದೆ. 135 ಕ್ಷೇತ್ರಗಳಲ್ಲಿ ಗೆದ್ದಿದೆ ಮತ್ತು ತನ್ನ ಮತ ಪ್ರಮಾಣವನ್ನು ಹತ್ತಿರ ಹತ್ತಿರ ಶೇ 5ರಷ್ಟು ಏರಿಸಿಕೊಂಡಿದೆ. ಬಿಜೆಪಿ ತನ್ನ ಮತ ಪ್ರಮಾಣವನ್ನು ಹೆಚ್ಚು ಕಡಿಮೆ ಉಳಿಸಿಕೊಂಡಿದೆ. ಆದರೆ, ಸ್ಥಾನಗಳಲ್ಲಿ ಮಾತ್ರ ಮೂರನೇ ಒಂದರಷ್ಟನ್ನು ಕಳೆದುಕೊಂಡಿದೆ. ಜನತಾ ದಳದ ಮತಪ್ರಮಾಣ ಶೇ 5ರಷ್ಟು ಕಡಿಮೆಯಾಗಿದೆ. ಗೆದ್ದುಕೊಂಡ ಸ್ಥಾನಗಳ ಸಂಖ್ಯೆ ಅರ್ಧದಷ್ಟು ಇಳಿಕೆಯಾಗಿದೆ. ಬಿಜೆಪಿಯ ಮತಪ್ರಮಾಣದಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ ಮತ್ತು ಜನತಾ ದಳ ಕಳೆದುಕೊಂಡ ಮತಗಳು ಕಾಂಗ್ರೆಸ್ ಪಾಲಾಗಿವೆ ಎಂದು ವಾದಿಸಬಹುದು. ಆದರೆ, ಇನ್ನೂ ಸೂಕ್ಷ್ಮವಾದ ವಿಶ್ಲೇಷಣೆಯು ಇನ್ನಷ್ಟು ಸಂಕೀರ್ಣವಾದ ಚಿತ್ರಣವನ್ನು ಕೊಡುತ್ತದೆ.

ಅತ್ಯಂತ ಜಿದ್ದಾಜಿದ್ದಿನಿಂದ ಚುನಾವಣೆ ನಡೆದಿದೆ. ಕಾಂಗ್ರೆಸ್ ಮತ್ತು ಬಿಜೆಪಿ, ಚುನಾವಣೆ ಗೆಲ್ಲುವುದಕ್ಕಾಗಿ ತಮ್ಮ ಸಮಯ ಮತ್ತು ಶ್ರಮವನ್ನು ಅತಿ ಹೆಚ್ಚು ವಿನಿಯೋಗಿಸಿವೆ. ದಕ್ಷಿಣದಲ್ಲಿ ತನಗೆ ಇದ್ದ ನೆಲೆಯನ್ನು ಉಳಿಸಿಕೊಳ್ಳಲು ಬಿಜೆಪಿ ಶತಾಯ ಗತಾಯ ಪ್ರಯತ್ನಿಸಿದೆ. ಸರ್ಕಾರಕ್ಕೆ ಜನಪ್ರಿಯತೆ ಇರಲಿಲ್ಲ ಎಂಬುದು ಈಗ ಸಾಬೀತಾಗಿದೆ ಮತ್ತು ಆ ಅವಕಾಶವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನಿಸಿದೆ. ಯಾರಿಗೆ ಮತ ಹಾಕಬೇಕು ಎಂಬ ನಿರ್ಧಾರವನ್ನು ಮತದಾರರು ಯಾವಾಗ ತೆಗೆದುಕೊಂಡರು ಎಂಬುದನ್ನು ಲೋಕನೀತಿ-ಸಿಎಸ್‌ಡಿಎಸ್ ಮತದಾನೋತ್ತರ ಸಮೀಕ್ಷೆಯು ಸ್ಪಷ್ಟವಾಗಿ ತಿಳಿಸಿಕೊಟ್ಟಿದೆ. ಯಾರಿಗೆ ಮತ ಹಾಕಬೇಕು ಎಂಬುದನ್ನು ಹತ್ತರಲ್ಲಿ ನಾಲ್ಕು ಮತದಾರರು ಚುನಾವಣಾ ಪ್ರಚಾರ ಆರಂಭಕ್ಕೆ ಮುನ್ನವೇ ನಿರ್ಧರಿಸಿದ್ದರು (ಶೇ 39).

2023ರ ಚುನಾವಣೆಯಲ್ಲಿ ಪಕ್ಷಗಳ ಸಾಧನೆ





ಅಭ್ಯರ್ಥಿಗಳ ಆಯ್ಕೆ ಮತ್ತು ಪ್ರಚಾರದ ಸ್ವರೂಪವು ಬಿಜೆಪಿ ಬೆಂಬಲಿಗರಿಗಿಂತ ಕಾಂಗ್ರೆಸ್ ಮತ್ತು ಜೆಡಿಎಸ್ ಬೆಂಬಲಿಗರ ಮೇಲೆ ಹೆಚ್ಚು ಪರಿಣಾಮ ಬೀರಿದೆ. ಸ್ಥಳೀಯ ವಿಚಾರಗಳ ಮೇಲೆಯೇ ಗಮನ ಕೇಂದ್ರೀಕರಿಸಿದ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಪ್ರಜ್ಞಾಪೂರ್ವಕ ಪ್ರಯತ್ನವು ಬಲವಾದ ಪರಿಣಾಮ ಉಂಟು ಮಾಡಿದೆ.

ಕಾಂಗ್ರೆಸ್ (ಶೇ 37) ಮತ್ತು ಜೆಡಿಎಸ್‌ಗೆ (ಶೇ 34) ಹೋಲಿಸಿದರೆ ಬಿಜೆಪಿಗೆ ಮತ ಹಾಕಿದವರಲ್ಲಿ ಈ ಪ್ರಮಾಣ ಇನ್ನೂ ಹೆಚ್ಚು ಇದೆ (ಶೇ 47). ಅಭ್ಯರ್ಥಿಗಳ ಘೋಷಣೆ ಮತ್ತು ಪ್ರಚಾರದ ಪ್ರಭಾವದಿಂದ ನಿರ್ಧಾರ ಕೈಗೊಂಡವರ ಪ್ರಮಾಣವು ಶೇ 29ರಷ್ಟಿದೆ. ಈ ಹಂತದಲ್ಲಿಯೇ ನಿರ್ಧಾರ ಕೈಗೊಂಡೆವು ಎಂದು ಹೇಳಿದವರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಮತ ಹಾಕಿದವರ ಪ್ರಮಾಣ ಹೆಚ್ಚು. ಕೊನೆ ಕ್ಷಣದಲ್ಲಿ ನಿರ್ಧಾರ ಕೈಗೊಂಡೆವು ಎಂದು ಹೇಳಿದವರ ಪ್ರಮಾಣವು ಶೇ 28ರಷ್ಟಿದೆ. ಕಾಂಗ್ರೆಸ್‌ಗೆ ಮತ ಹಾಕಿದವರಲ್ಲಿ ಶೇ 32ರಷ್ಟು, ಜೆಡಿಎಸ್‌ಗೆ ಮತ ಹಾಕಿದವರಲ್ಲಿ ಶೇ 31ರಷ್ಟು ಮತದಾರರು ಕೊನೆಯ ಕ್ಷಣದಲ್ಲಿ ನಿರ್ಧಾರ ಕೈಗೊಂಡೆವು ಎಂದಿದ್ದಾರೆ. ಬಿಜೆಪಿಗೆ ಮತ ಹಾಕಿದವರಲ್ಲಿ ಶೇ 23ರಷ್ಟು ಮತದಾರರು ಕೊನೆಯ ಕ್ಷಣದಲ್ಲಿ ನಿರ್ಧಾರ ಕೊಂಡೆವು ಎಂದು ಹೇಳಿದ್ದಾರೆ. ಹಾಗಾಗಿಯೇ,

ಲೋಕನೀತಿ-ಸಿಎಸ್‌ಡಿಎಸ್, ಚುನಾವಣಾ ಪ್ರಚಾರದ ಸಂದರ್ಭದಲ್ಲಿಯೂ ಸಮೀಕ್ಷೆಯೊಂದನ್ನು ನಡೆಸಿತ್ತು. ಅಭ್ಯರ್ಥಿಯ ಆಯ್ಕೆಯಲ್ಲಿ ಪಕ್ಷವೇ ನಿರ್ಣಾಯಕ ಎಂದು ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಶೇ 56ರಷ್ಟು ಮತದಾರರು ಹೇಳಿದ್ದರು. ಶೇ 38ರಷ್ಟು ಮತದಾರರು ಅಭ್ಯರ್ಥಿಗಳೇ ಮುಖ್ಯ ಎಂದಿದ್ದರು.

• ಮತ ಯಾರಿಗೆ ಎಂಬುದನ್ನು ನಿರ್ಣಯಿಸಿದ್ದು ಯಾವಾಗ? | • ಮತ ನಿರ್ಣಯದ ವೇಳೆ ಪಕ್ಷ ಮುಖ್ಯವೇ?

ಮತದಾರರು	ಕೊನೆಯ ಕ್ಷಣದಲ್ಲಿ	ಪ್ರಚಾರದ ವೇಳೆ	ಅಭ್ಯರ್ಥಿ ಘೋಷಣೆ ನಂತರ	ಪ್ರಚಾರಕ್ಕೂ ಮುನ್ನ	ಪ್ರತಿಕ್ರಿಯೆ ನೀಡದವರು	ಪಕ್ಷ ಮುಖ್ಯ ಎಂದವರು	ಅಭ್ಯರ್ಥಿ ಮುಖ್ಯ ಎಂದವರು	ಪಕ್ಷದ ನಾಯಕ ಮುಖ್ಯ ಎಂದವರು	ಪ್ರತಿಕ್ರಿಯೆ ನೀಡದವರು
ಕಾಂಗ್ರೆಸ್ ಮತದಾರರು	32%	16%	13%	37%	2%	66%	30%	3%	1%
ಬಿಜೆಪಿ ಮತದಾರರು	23%	11%	14%	47%	5%	49%	47%	2%	2%
ಜೆಡಿಎಸ್ ಮತದಾರರು	31%	22%	13%	34%	--	54%	36%	6%	4%
ಇತರೆ ಪಕ್ಷಗಳ ಮತದಾರರು	25%	10%	18%	22%	25%	38%	38%	5%	19%
ಒಟ್ಟು ಸರಾಸರಿ	28%	15%	14%	39%	4%	56%	38%	3%	3%

ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಮತದಾನದ ಸ್ವರೂಪ



ನಾಯಕರೇ ಮುಖ್ಯ ಎಂದವರು ಕೆಲವೇ ಕೆಲವರು ಮಾತ್ರ. ಕಾಂಗ್ರೆಸ್ ಪರವಾಗಿದ್ದವರಲ್ಲಿ ಹೆಚ್ಚಿನವರು ಪಕ್ಷವೇ ಮುಖ್ಯ ಎಂದಿದ್ದರೆ, ಬಿಜೆಪಿ ಬೆಂಬಲಿಗರು ಪಕ್ಷ ಮತ್ತು ಅಭ್ಯರ್ಥಿ ಎರಡೂ ಮುಖ್ಯ ಎಂದಿದ್ದರು. ಜನತಾ ದಳದ ಬೆಂಬಲಿಗರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಅಭ್ಯರ್ಥಿಯೇ ಮುಖ್ಯ ಎಂದಿದ್ದರು. ಕರ್ನಾಟಕದಲ್ಲಿ ನಾಯಕರು ಪಕ್ಷ ಬದಲಿಸುವುದು ಸಹಜ ವಿದ್ಯಮಾನವೇ ಆಗಿರುವುದರಿಂದ ವಿವಿಧ ಪಕ್ಷಗಳ ಬೆಂಬಲಿಗರಲ್ಲಿ ಈ ಕುರಿತು ಇರುವ ಗ್ರಹಿಕೆ ಮಹತ್ವ ಪಡೆದುಕೊಳ್ಳುತ್ತದೆ.

ವಿವಿಧ ವಯೋಮಾನ ಮತ್ತು ವರ್ಗದ ಜನರು ಪಕ್ಷವನ್ನು ಆಯ್ಕೆ ಮಾಡುವಲ್ಲಿ ವ್ಯತ್ಯಾಸ ಇದೆ ಎಂಬುದು ಸ್ಪಷ್ಟ. ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ಎಲ್ಲ ವಯೋಮಾನದ ಮತದಾರರಲ್ಲಿಯೂ ಏಕರೂಪದ ಬೆಂಬಲ ಇದೆ. ಆದರೆ, ಬಿಜೆಪಿಗೆ ಯುವ ಮತದಾರರ ಬೆಂಬಲ ಹೆಚ್ಚು. ಹತ್ತನೇ ತರಗತಿಗಿಂತ ಕಡಿಮೆ ಶಿಕ್ಷಣ ಪಡೆದವರಲ್ಲಿ ಕಾಂಗ್ರೆಸ್ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಪದವಿ ಶಿಕ್ಷಣ ಪಡೆದವರಲ್ಲಿ ಬಿಜೆಪಿಗೆ ಬೆಂಬಲ ನೀಡಿದವರು ಹೆಚ್ಚಾಗಿದ್ದಾರೆ. ಕಾಂಗ್ರೆಸ್‌ಗೆ ಮತ ಹಾಕಿದವರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದವರು ಸಮಾನವಾಗಿದ್ದರೆ, ಬಿಜೆಪಿಗೆ ನಗರ ಪ್ರದೇಶದಲ್ಲಿ ಬೆಂಬಲ ಹೆಚ್ಚು. ಪ್ರಬಲ ಜಾತಿಗಳ ಬೆಂಬಲ ಕಾಂಗ್ರೆಸ್ ಮತ್ತು ಬಿಜೆಪಿಗೆ ಸಿಕ್ಕಿದೆ. ಆದರೆ, ಕೆಳ ವರ್ಗಗಳ ಬೆಂಬಲದಲ್ಲಿ ಭಾರಿ ವ್ಯತ್ಯಾಸ ಇದೆ. ಈ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಶೇ 9ರಷ್ಟು ವ್ಯತ್ಯಾಸ ಕಂಡು ಬಂದಿದೆ. ಕೆಳ ವರ್ಗಗಳಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಬೆಂಬಲ ಇದೆ. ಒಕ್ಕಲಿಗ, ಕುರುಬ, ದಲಿತ ಮತ್ತು ಮುಸ್ಲಿಮರನ್ನು ಒಳಗೊಂಡ ಜಾತಿ ಸಮೀಕರಣವೊಂದನ್ನು ಕಟ್ಟಿಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಬಿಜೆಪಿಗೆ ಹೋಲಿಸಿದರೆ ಪರಿಶಿಷ್ಟ ಪಂಗಡದ ಮತದಾರರ ಬೆಂಬಲ ಕಾಂಗ್ರೆಸ್‌ಗೆ ಹೆಚ್ಚು ಇದೆ. ಲಿಂಗಾಯತ ಸಮುದಾಯದಲ್ಲಿ ಬಿಜೆಪಿಗೆ ಬೆಂಬಲ ಹೆಚ್ಚು ಇದೆ. ಆದರೆ, ಈ ಬಾರಿ ಹತ್ತರಲ್ಲಿ ಮೂವರು ಲಿಂಗಾಯತರು ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಕಾಂಗ್ರೆಸ್ ಕಟ್ಟಿಕೊಂಡ ಅಹಿಂದ ಜಾತಿ ಸಮೀಕರಣವು ಬಿಜೆಪಿ ಕಟ್ಟಿಕೊಂಡ ಜಾತಿ ಸಮೀಕರಣಕ್ಕಿಂತ ಹೆಚ್ಚು ಸಮಗ್ರವಾಗಿತ್ತು ಎಂಬುದು ಸ್ಪಷ್ಟ.

ಹೀಗಾಗಿ, ಆಡಳಿತ ವಿರೋಧಿ ಅಲೆ, ಹೆಚ್ಚು ವಿಸ್ತೃತವಾದ ಜಾತಿ ಸಮೀಕರಣವೇ ರಾಜ್ಯದ ವಿವಿಧ ಭಾಗಗಳಲ್ಲಿ ಕಾಂಗ್ರೆಸ್‌ನ ನಿರಾಯಾಸ ಗೆಲುವಿಗೆ ನೆರವಾಗಿದೆ.

ಲೇಖಕರು: ಡಾ. ಸಂದೀಪ್ ಶಾಸ್ತ್ರಿ ಅವರು ನಾಲ್ಕು ದಶಕಗಳಿಂದ ಕರ್ನಾಟಕ ರಾಜಕೀಯದ ಅಧ್ಯಯನ ನಡೆಸುತ್ತಿದ್ದಾರೆ, ಲೋಕನೀತಿ ನೆಟ್‌ವರ್ಕ್‌ನ ರಾಷ್ಟ್ರೀಯ ಸಂಚಾಲಕ, ಸುಹಾಸ್ ಪಲ್ಶೀಕರ್ ಅವರು ರಾಜಕೀಯ ವಿಜ್ಞಾನದ ಪ್ರಾಧ್ಯಾಪಕ ಮತ್ತು 'ಸ್ಟಡೀಸ್ ಇನ್ ಇಂಡಿಯನ್ ಪಾಲಿಟಿಕ್ಸ್'ನ ಮುಖ್ಯ ಸಂಪಾದಕ, ಸಂಜಯ್ ಕುಮಾರ್ ಅವರು ಪ್ರಾಧ್ಯಾಪಕ ಮತ್ತು ಲೋಕನೀತಿ-ಸಿಎಸ್‌ಡಿಎಸ್‌ನ ಸಹ ನಿರ್ದೇಶಕ

ಪರಿಣಾಮ ಬೀರದ ರಾಷ್ಟ್ರೀಯ ನಾಯಕರ ಮಾತು

• ವೀಣಾ ದೇವಿ, ಡಾ. ನಾಗೇಶ್ ಕೆ.ಎಲ್.

ಕರ್ನಾಟಕ ವಿಧಾನಸಭಾ ಚುನಾವಣೆಗೂ ಮುನ್ನ ರಾಷ್ಟ್ರೀಯ ಪಕ್ಷಗಳ ನಾಯಕರು ಸರಣಿ ರ್‍ಯಾಲಿಗಳಲ್ಲಿ ಭಾಗವಹಿಸಿ ಭಾಷಣ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾಷಣಗಳು ಮತದಾರರ ಮೇಲೆ ಎಷ್ಟು ಪರಿಣಾಮ ಬೀರಿವೆ ಎಂಬುದನ್ನು ಅರಿಯುವ ಯತ್ನ ಮಾಡಲಾಗಿದೆ.

ಮೋದಿ ಅವರು ಭಾಗವಹಿಸಿದ್ದ ರ್‍ಯಾಲಿಗಳಲ್ಲಿ ಮಾಡಿದ ಭಾಷಣವು ತಮ್ಮ ಮೇಲೆ ಪರಿಣಾಮ ಬೀರಿಲ್ಲ ಎಂದು ಶೇ 63ರಷ್ಟು ಜನರು ಹೇಳಿದ್ದಾರೆ. ಆದರೆ ಬಿಜೆಪಿ ಪರವಾಗಿ ಮತ ಚಲಾಯಿಸಿದವರ ಪ್ರಕಾರ, ಮೋದಿ ಅವರ ಮಾತುಗಳು ಪರಿಣಾಮಕಾರಿಯೇ ಆಗಿವೆ. 10ರಲ್ಲಿ 6 ಜನರು (ಶೇ 61) ಮೋದಿ ಭಾಷಣ ಪ್ರಭಾವ ಬೀರಿತ್ತು ಎಂದು ಹೇಳಿದ್ದಾರೆ. ಆದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಪರವಾಗಿ ಮತ ಚಲಾಯಿಸಿದ ಜನರು, ಮೋದಿ ಮಾತುಗಳು ಅಷ್ಟಾಗಿ ಪ್ರಭಾವ ಬೀರಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ರ್‍ಯಾಲಿಗಳಲ್ಲಿ ರಾಹುಲ್ ಗಾಂಧಿ ಅವರು ಮಾಡಿದ ಭಾಷಣವು ತಮ್ಮ ಮೇಲೆ ಪರಿಣಾಮ ಬೀರಿಲ್ಲ ಎಂದು ಶೇ 69ರಷ್ಟು ಜನರು ಸಮೀಕ್ಷೆಯಲ್ಲಿ ಹೇಳಿದ್ದಾರೆ. 10ರಲ್ಲಿ ಏಳು ಜನರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಕಾಂಗ್ರೆಸ್ ಪರವಾಗಿ ಮತದಾನ ಮಾಡಿದ 10ರಲ್ಲಿ ಆರು ಜನರೂ (ಶೇ 59) ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದರರ್ಥ, ರಾಷ್ಟ್ರೀಯ ನಾಯಕರ ಪೈಕಿ ರಾಹುಲ್ ಗಾಂಧಿ ಅವರ ಭಾಷಣವು ಕಾಂಗ್ರೆಸ್ ಮತದಾರರ ಮೇಲೆ ಬೀರಿದ ಪ್ರಭಾವಕ್ಕೆ ಹೋಲಿಸಿದರೆ, ನರೇಂದ್ರ ಮೋದಿ ಅವರ ಭಾಣಷವು ಬಿಜೆಪಿ ಮತದಾರರ ಮೇಲೆ ಬೀರಿದ ಪ್ರಭಾವ ಹೆಚ್ಚು. ಬಿಜೆಪಿಯು ರಾಷ್ಟ್ರೀಯ ನಾಯಕರನ್ನು ಹೆಚ್ಚು ನೆಚ್ಚಿಕೊಂಡಿದ್ದರೆ, ಕಾಂಗ್ರೆಸ್ ಪಕ್ಷವು ಸ್ಥಳೀಯ ನಾಯಕತ್ವದ ಮೇಲೆ ಹೆಚ್ಚು ಗಮನ ನೀಡಿತ್ತು ಎಂದು ಇದನ್ನು ಅರ್ಥೈಸಬಹುದು.

ಲೇಖಕರು: ವೀಣಾ ದೇವಿ ಅವರು ಬೆಂಗಳೂರು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ. ಡಾ. ನಾಗೇಶ್ ಕೆ.ಎಲ್. ಅವರು ಉಪನ್ಯಾಸಕ



ರಾಷ್ಟ್ರೀಯ ನಾಯಕರ ಚುನಾವಣಾ ರ್‍ಯಾಲಿಗಳಿಗೆ ಬಾರದ ಜನ

ಲೋಕಸಭೆ ಚುನಾವಣೆಯೇ ಆಗಲಿ, ವಿಧಾನಸಭೆ ಚುನಾವಣೆಯೇ ಆಗಲಿ, ಫಲಿತಾಂಶದ ಮೇಲೆ ನಾಯಕತ್ವ ಪರಿಣಾಮ ಉಂಟುಮಾಡುತ್ತದೆ. ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ನಾಯಕರು ಭರ್ಜರಿ ರ್‍ಯಾಲಿ, ಸಮಾವೇಶ ನಡೆಸಿದ್ದಾರೆ. ರಾಷ್ಟ್ರೀಯ ನಾಯಕರು ಭಾಗಿಯಾಗಿದ್ದ ರ್‍ಯಾಲಿಗಳಿಗೆ ನಾಲ್ಕನೇ ಮೂರರಷ್ಟು ಜನರು ಹೋಗಿಲ್ಲ ಎಂದು ಸಮೀಕ್ಷೆ ತಿಳಿಸಿದೆ. ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರಲ್ಲಿ ಶೇ 75ರಷ್ಟು ಜನರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ರ್‍ಯಾಲಿಗಳಿಗೆ ಹೋಗಿಲ್ಲ.



ಪ್ರಜಾವಾಣಿ ಗ್ರಾಫಿಕ್ಸ್: ಶಶಿಕಿರಣ್ ದೇಸಾಯಿ ಬಿ. | ಮೂಲ: ಲೋಕನೀತಿ-ಸಿಎಸ್‌ಡಿಎಸ್ ಸಮೀಕ್ಷಾ ವರದಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬುರ್ಖಾಧಾರಿ ವ್ಯಕ್ತಿಯೊಬ್ಬರನ್ನು ಪೊಲೀಸರು ಬಂಧಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬುರ್ಖಾ ತೆಗೆಯುವಂತೆ ಬಂಧಿತ ವ್ಯಕ್ತಿಗೆ ಪೊಲೀಸರು ಸೂಚಿಸುತ್ತಾರೆ. ಬಳಿಕ, ಬುರ್ಖಾ ಧರಿಸಿದ್ದ ವ್ಯಕ್ತಿ ಪುರುಷ ಎಂಬುದು ಗೊತ್ತಾಗುತ್ತದೆ. 'ಈ ವ್ಯಕ್ತಿಯನ್ನು ಕರ್ನಾಟಕ ಪೊಲೀಸರು ಬಂಧಿಸಿದ್ದಾರೆ. ಕಲ್ಲು ತೂರಾಟ ನಡೆಸಿದ ಹಾಗೂ ಮುಸ್ಲಿಮರ ಹೆಸರಿಗೆ ಮಸಿ ಬಳಿಯಲು ಯತ್ನಿಸಿದ ಆರೋಪದ ಮೇಲೆ ಬಂಧಿಸಲಾಗಿದೆ' ಎಂದು ವಿಡಿಯೊ ಹಂಚಿಕೊಂಡವರು ಹೇಳಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

ಅಕ್ರಮವಾಗಿ ಮದ್ಯ ಸಾಗಣೆ ಮಾಡುತ್ತಿದ್ದ ಆರೋಪಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಬುರ್ಖಾ ಧರಿಸಿದ್ದ ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಇದು 2020ರ ವಿಡಿಯೊ. ಈ ಘಟನೆ ನಡೆದಿದ್ದು ಕರ್ನಾಟಕದಲ್ಲಿ ಅಲ್ಲ, ಆಂಧ್ರಪ್ರದೇಶದ ಕರ್ನೂಲಿನಲ್ಲಿ. ಆಂಧ್ರಪ್ರದೇಶಕ್ಕಿಂತ ತೆಲಂಗಾಣದಲ್ಲಿ ಕಡಿಮೆ ಬೆಲೆಗೆ ಮದ್ಯ ಸಿಗುತ್ತದೆ. ಹೀಗಾಗಿ ಮದ್ಯವನ್ನು ಆಂಧ್ರಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತದೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಕಳ್ಳರು ಹೀಗೆ ಹಲವು ದಾರಿ ಹುಡುಕುತ್ತಾರೆ. ವಿಡಿಯೊ ಜೊತೆ ಮಾಡಲಾಗಿರುವ ಆರೋಪ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ಸ್ಪಷ್ಟಪಡಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 15, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಏಕಾದಶಿ ಗಂ. 25-04 ನಕ್ಷತ್ರ: ಪೂರ್ವಾಭಾದ್ರ ಗಂ. 09-08, ಯೋಗ: ವಿಷ್ಕಂಭ ಗಂ. 25-29 ಕರಣ: ಬವ ಗಂ. 13-53, ಮೇಷ ಮಾಸದ 31 ನೇ ದಿನ, ಮಳೆನಕ್ಷತ್ರ: ಕೃತ್ತಿಕ 2. ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-08 ಸೂರ್ಯಾಸ್ತ : 06-45, ಮುಸ್ಲಿಂ ದಿನಾಂಕ : 24 ಶವ್ವಾಲ್, ದಿನ ವಿಶೇಷ : ಅಪರ ಏಕಾದಶಿ, ಭದ್ರಕಾಳಿ ಏಕಾದಶಿ (ಪಂಜಾಬ್)
ಅದೃಷ್ಟ ಸಂಖ್ಯೆ : 8, 10

ಮೇಷ: ಬದಲಾದ ದಿನಚರಿಗೆ ಹೊಂದಿಕೊಳ್ಳುವುದು ಕಷ್ಟದ ಕೆಲಸವಾಗಿ ಪರಿಣಮಿಸಬಹುದು. ಗುರು ಹಿರಿಯರಲ್ಲಿ ಅಗೌರವ ತೋರದಿರಿ. ಮಳಿಗೆ ಖರೀದಿಸುವಾಗ ವ್ಯವಹಾರಿಕವಾಗಿ ಜಾಗ ಎಷ್ಟು ಸೂಕ್ತ ಎನ್ನುವುದರ ಮೇಲೆ ಗಮನವಿಡಿ.

ವೃಷಭ: ಪರಪೀಡನೆಯನ್ನೇ ತನ್ನ ವೃತ್ತಿ ಎಂದು ತಿಳಿಯುವ ವ್ಯಕ್ತಿಗಳ ಜೊತೆ ನೀವು ಎಷ್ಟು ಸಂಭಾಷಣೆಯನ್ನು ನಡೆಸಿದರೂ ಅದು ಫಲಕಾರಿಯಾಗಿ ಕಾಣುವುದಿಲ್ಲ. ಮುಜುಗರದ ಹೆಸರಿನಲ್ಲಿ ಉತ್ತಮವಾದ ಅವಕಾಶ ಬಿಡುವಿರಿ.

ಮಿಥುನ: ಹರಿತವಾದ ವಸ್ತುಗಳ ಮೇಲೆ ಎಷ್ಟು ಕಾಳಜಿ ಇದ್ದರೂ ಕಡಿಮೆ ಎಂದೇ ಆಗುತ್ತದೆ. ನೀವು ಮಾಡಿದ ಕೆಲಸದಲ್ಲಿ ಗುಣಮಟ್ಟದ ಕೊರತೆಯಿಂದಾಗಿ ಸಮಾಧಾನ ಇಲ್ಲದಂತೆ ಆಗುತ್ತದೆ. ಉದ್ರೇಕಕ್ಕೆ ಒಳಗಾಗದೆ ಕೆಲಸವನ್ನು ಮಾಡಿ.

ಕರ್ಕಾಟಕ: ರಂಗಿನ ಲೋಕದ ಕನಸನ್ನು ನನಸು ಮಾಡಿಕೊಳ್ಳುವ ಭರದಲ್ಲಿ ನಿಮ್ಮ ಹಣವನ್ನು ಹಾಳು ಮಾಡಿಕೊಳ್ಳದಿರಿ. ನಿಂತು ಹೋಗಿರುವ ನಿಮ್ಮ ವ್ಯವಸಾಯದಲ್ಲಿಯೇ ಹೆಚ್ಚು ಆದಾಯ ಎಂಬುದನ್ನು ಕಂಡುಕೊಳ್ಳುವಿರಿ.

ಸಿಂಹ: ತಂತಿವಾದಕರ ಹೊಸ ರೀತಿಯ ಪ್ರಯೋಗವು ಸಂಗೀತ ರಸಿಕರ ಮನಸೂರೆಗೊಳಿಸುತ್ತದೆ. ಕಾದಂಬರಿಪ್ರಿಯರಿಗೆ ಸರಿ ಯಾಗುವ ತರಹದ ಸ್ನೇಹಿತರು ದೊರೆಯುವರು. ಮಧುರ ಖಾದ್ಯಗಳಿಂದ ದೂರವಿರಿ.

ಕನ್ಯಾ: ಮನೆಯಲ್ಲಿ ನಡೆದ ಕಾರ್ಯಕ್ರಮದ ಫಲವಾಗಿ ದೈನಂದಿನ ವೇಳಾಪಟ್ಟಿ ಬದಲಾವಣೆಯಾಗಲಿದೆ. ಹಿಂದಿನ ದಿನದ ನಿದ್ರಾಹೀನತೆಯಿಂದಾಗಿ ಇಂದಿನ ಕೆಲಸಗಳಲ್ಲಿ ನಷ್ಟ ಸಂಭವಿಸಬಹುದು, ತಪ್ಪಾಗುವ ಸಾಧ್ಯತೆಗಳಿವೆ.

ತುಲಾ: ನಿರೀಕ್ಷೆಯ ಫಲಿತಾಂಶ ವೃತ್ತಿ ಜೀವನದಲ್ಲಿ ದೊರೆಯಲು ಹರಸಹಾಸ ಪಡಬೇಕಾದ ಸಂದರ್ಭ ಬರುತ್ತದೆ. ನವವಿವಾಹಿತೆಗೆ ಮುಖ್ಯವಾದ ವ್ಯಕ್ತಿಗಳ ಮರೆವು ಬಹಳವಾಗಿ ಕಾಡಿಸುತ್ತದೆ. ಅಸಮರ್ಪಕ ನಿರ್ಧಾರ ಕೈಗೊಳ್ಳದಿರಿ.

ವೃಶ್ಚಿಕ: ವೇದ ಪಾರಾಯಣದ ಸಂಕಲ್ಪವನ್ನು ಹೊಂದಿದವರಿಗೆ ದೇವರ ಅನುಗ್ರಹದಿಂದ ಜನ ಹಾಗು ಧನ ಸಹಾಯವು ಹೆಚ್ಚಿನ ಮಟ್ಟದಲ್ಲಿ ದೊರೆಯುವುದು. ಹಪ್ಪಳ ಹಾಗೂ ಸಂಡಿಗೆ ತಯಾರಕರಿಗೆ ಸಂಪಾದನೆ ಆಗುತ್ತದೆ

ಧನು: ವಿದ್ಯಾರ್ಜನೆ ಎಂಬ ಹೆಸರಿನಲ್ಲಿ ಕುಟುಂಬಕ್ಕೆ ಹೊರೆಯಾಗುವ ರೀತಿಯಲ್ಲಿ ನಡೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಪರಾಮರ್ಶಿಸಿ. ದಿನದ ಉತ್ತರಾರ್ಧದಲ್ಲಿ ಸುಖಮಯ ಜೀವನ ನಡೆಸಲು ಶ್ರಮಿಸಬೇಕು.

ಮಕರ: ಮಕ್ಕಳಿಗಾಗಿ ನಿಮ್ಮ ಎಷ್ಟೋ ಇಷ್ಟದ ವಿಚಾರಗನ್ನು ತ್ಯಾಗ ಮಾಡಬೇಕಾಗಿ ಬರುತ್ತದೆ. ಸುತ್ತಮುತ್ತದ ವಾತಾವರಣವು ಶಾಂತಿ ಕೆಡಿಸುವ ಕೆಲಸ ಮಾಡುವುದು. ತಂಗಿಯ ದುಃಖಕ್ಕೆ ಹೆಗಲಾಗಿ ನಿಲ್ಲುವಿರಿ.

ಕುಂಭ: ಇತರರನ್ನು ಸಂತೋಷ ಪಡಿಸುವ ಭರದಲ್ಲಿ ನಿಮ್ಮ ಶಕ್ತಿಯನ್ನು ವ್ಯಯಿಸದಿರಿ. ಸಣ್ಣ ವಿದ್ಯುತ್ ಉಪಕರಣಗಳ ಮಾರಾಟ ಲಾಭದಾಯಕವಾಗಿರುತ್ತದೆ. ನೈಸರ್ಗಿಕ ಶಕ್ತಿ ಸಂಪನ್ಮೂಲ ಹೆಚ್ಚಾಗಿ ಬಳಸುವ ಯೋಚನೆ ನಡೆಸುವಿರಿ.

ಮೀನ: ಈ ಕ್ಷಣದಲ್ಲಿ ಹಣವು ಸಮೃದ್ಧವಾಗಿದೆ ಎಂದು ಖರ್ಚು ಮಾಡುವ ಪ್ರವೃತ್ತಿ ಬೇಡ. ಪುಸ್ತಕ ಜೋಡಿಸುವ ವಿಚಾರದಲ್ಲಿ ಬೇಕಾಬಿಟ್ಟಿಯಾಗಿ ಇರುವುದರಿಂದ ವಿದ್ಯಾಧಿದೇವತೆಗೆ ಅವಮಾನವಾಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹಿತದ ಸೂತ್ರಗಳು

ಕಾಯಕಿಂತಾತ್ಮ ಪಿರಿದೆಂದು ಜನವರಿತಂದು |
ಸ್ವೀಯೇಚ್ಛೆಯಿಂ ಸಮಾಧಾನ ಕೆಡದಂದು ||
ದಾಯ ಸಮ ಸಂಸೃಷ್ಟಿ ಭೂಭಾಗ್ಯವಾದಂದು |
ಶ್ರೇಯ ನೆರೆವುದು ಜಗಕೆ – ಮಂಕುತಿಮ್ಮ | 883 ||

ಪದ-ಅರ್ಥ: ಕಾಯಕಿಂತಾತ್ಮ = ಕಾಯಕಿಂತ(-ದೇಹಕಿಂತ) + ಆತ್ಮ, ಪಿರಿದೆಂದು + ಹಿರಿದೆಂದು, ಜನವರಿತಂದು = ಜನವು + ಅರಿತಂದು, ಸ್ವೀಯೇಚ್ಛೆ = ಸ್ವಂತದ ಇಚ್ಛೆ,ದಾಯಸಮಸಂಸೃಷ್ಟಿ- = ಆದದ್ದರಲ್ಲಿ ಸಮಪಾಲು, ಭೂಭಾಗ್ಯವಾದಂದು- = ಭೂಮಿಗೆ ಭಾಗ್ಯವಾದಾಗ, ಶ್ರೇಯ = ಶಾಶ್ವತವಾದ ಫಲ, ನೆರೆವುದು = ದೊರೆಯುವುದು.

ವಾಚ್ಯಾರ್ಥ: ದೇಹಕ್ಕಿಂತ ಆತ್ಮ ದೊಡ್ಡದು ಎಂಬುದನ್ನು ಜನರು ತಿಳಿದಾಗ, ಸ್ವಂತದ ಇಚ್ಛೆ ಪ್ರಪಂಚದ ಸಮಧಾನವನ್ನು ಕೆಡಿಸದಿರುವಾಗ, ದೊರೆತ ಎಲ್ಲವನ್ನು ಎಲ್ಲರೊಡನೆ ಸಮನಾಗಿ ಹಂಚಿಕೊಳ್ಳುವುದು ಈ ಭೂಮಿಯ ಭಾಗ್ಯವಾದಾಗ, ಜಗತ್ತಿಗೆ ಶಾಶ್ವತವಾದ ಸುಖ ದೊರೆತೀತು.

ವಿವರಣೆ: ಎಲ್ಲರಿಗೂ ಸುಖ ಬೇಕು. ಅದನ್ನು ಹೇಗಾದರೂ ಪಡೆಯಬೇಕೆಂದಾಗ ಆತಂಕ ನಿರ್ಮಾಣವಾಗುತ್ತದೆ. ಅದರ ಪರಿಹಾರಕ್ಕೆ ಮತ್ತೆ ಪ್ರಯತ್ನ. ಹೀಗೆ ಪ್ರಪಂಚದ ಎಲ್ಲರೂ ಸುಖಕ್ಕಾಗಿ ಒದ್ದಾಡುತ್ತಾರೆ. ಈ ಕಗ್ಗ ವೈಯಕ್ತಿಕ ಸುಖದ ಬಗ್ಗೆ ಮಾತನಾಡುವುದಿಲ್ಲ. ಇಡೀ ಪ್ರಪಂಚದ ಸುಖದ ಬಗ್ಗೆ ಚಿಂತಿಸುತ್ತದೆ. ಕಗ್ಗ ಪ್ರಪಂಚದ ಸುಖ, ಸಂತೋಷಕ್ಕೆ ಮೂರು ಪ್ರಮುಖ ಸೂತ್ರಗಳನ್ನು ನೀಡುತ್ತದೆ. ಮೊದಲನೆಯದು, ಜನರು ತಮ್ಮ ದೇಹಕ್ಕಿಂತ ಆತ್ಮ ದೊಡ್ಡದೆಂಬುದನ್ನು ತಿಳಿಯಬೇಕು. ನಮ್ಮ ಬಹಳಷ್ಟು ಸಮಸ್ಯೆಗಳು ದೇಹಮೂಲವಾದವುಗಳು. ಅದನ್ನು ಆಳುವ ಆತ್ಮವೊಂದಿದೆ ಎನ್ನುವುದು ಕಲ್ಪನೆಗೇ ಬರುವುದಿಲ್ಲ. ಒಬ್ಬ ಶ್ರೀಮಂತ ಝೆನ್ ಗುರುವಿನ ಬಳಿಗೆ ಬಂದ. ಗುರುಗಳು ಖ್ಯಾತ ಚಿತ್ರ ಕಲಾವಿದರು. ಶಿಷ್ಯ ಕೇಳಿದ, "ಗುರುಗಳೇ, ನನಗೊಂದು ಚಿತ್ರ ಬರೆದು ಕೊಡಿ. ಅದನ್ನು ನೋಡಿದ ಕೂಡಲೆ ನನಗೆ ನಿರ್ವಾಣದ ಅಪೇಕ್ಷೆಯಾಗಬೇಕು". ಗುರುಗಳು ನಾಲ್ಕು ಚಿತ್ರಗಳನ್ನು ಬರೆದು ತಂದರು. ಒಂದರಲ್ಲಿ ದೇಹದ ಅಂಗಾಂಗಗಳನ್ನು ಬೇರೆ ಬೇರೆಯಾಗಿ ಬರೆದಿತ್ತು. ಎರಡನೆಯದರಲ್ಲಿ, ದೇಹದ ಆಂತರಿಕ ಅವಯವಗಳು, ರಕ್ತ, ಮಾಂಸ, ಎಲುಬು, ಮಲ, ಮೂತ್ರಗಳ ಚಿತ್ರಣ, ಮೂರನೆಯದರಲ್ಲಿ ಮಣ್ಣು, ನೀರು, ಗಾಳಿ, ಆಕಾಶ ಮತ್ತು ಬೆಂಕಿಯ ಚಿತ್ರಣ. ನಾಲ್ಕನೆಯದು ಖಾಲಿಯಾಗಿತ್ತು. ಆದರೆ ಮಧ್ಯದಲ್ಲಿ ಕಣ್ಣು ಕೋರೈಸುವ ಬೆಳಕಿತ್ತು. ಗುರುಗಳು ಹೇಳಿದರು, "ಒಂದು, ಎರಡನೆ ಚಿತ್ರಗಳು ದೇಹದ ಒಳ- ಹೊರಗುಗಳು, ಮೂರನೆಯದು ಅವುಗಳನ್ನು ಮಾಡಿದ ಅಂಶಗಳು. ನಾಲ್ಕನೆಯದು ಮಾತ್ರ ಉಳಿಯುವುದು. ದೇಹನಾಶವಾದರೂ ಉಳಿಯುವುದು ಆತ್ಮ ಮಾತ್ರ". ಶಿಷ್ಯ ನಿರ್ವಾಣವನ್ನು ಪಡೆದ. ಕಗ್ಗ ಹೇಳುತ್ತದೆ, ಎಂದು ಜನ ದೇಹಕ್ಕಿಂತ ಆತ್ಮ ದೊಡ್ಡದೆಂದು ಭಾವಿಸುತ್ತಾರೋ, ಎಂದು ತನ್ನ ಸ್ವಂತದ ಇಚ್ಛೆ ಪರರ ಸಮಾಧಾನವನ್ನು ಕೆಡಿಸದಂತೆ ನಡೆಯುತ್ತಾರೋ, ಎಂದು ದೊರೆತದ್ದನ್ನೆಲ್ಲ ಸಮನಾಗಿ ಹಂಚಿಕೊಂಡು ಸಂತೋಷದಿಂದ ಬದುಕುತ್ತಾರೋ, ಅಂದೇ ಈ ಪ್ರಪಂಚಕ್ಕೆ ಶಾಶ್ವತವಾದ ಸುಖ ದೊರಕುತ್ತದೆ. ಈ ಮೂರು ಸೂತ್ರಗಳು ಪ್ರಪಂಚಕ್ಕೆ ಹಿತ ನೀಡುವಂಥವುಗಳು.

ಪದಬಂಧ 5319

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
4.ಕಾದಾಡುವುದಕ್ಕೊಂದು ಪರ್ಯಾಯ ಪದ (3)
6.ರಸದಿಂದ ತುಂಬಿರುವುದು (4)
8.ಋಷಿಗಳು ಬಳಸುವ ನೀರಿನ ಪಾತ್ರೆ (4)
10.ಇದು ಹೊಸತು (3)
13.ಬಣ್ಣದ ದಾರದಿಂದ ಬಟ್ಟೆ ಮೇಲೆಹೆಣೆದ ಅಲಂಕಾರ (3)
15.ಇದಿನ್ನೂ ಎಳೆ ಮಗು (4)
19.ಕೊಬ್ಬಿದ ಆನೆಯಿದು (4)
21.ಓಬ್ಬವ್ವನ ಆಯುಧ (3)
22.ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ
1.ಈಕೆ ಧೂರ್ತ ಹೆಂಗಸು (3)
2.ಮದುವೆ ಗಂಡಿನ ಆದಾಯ (4)
3.ಪಶ್ಚಿಮದ ವಿರುದ್ಧ ದಿಕ್ಕಿಲ್ಲಿ ಉಲ್ಟಾ ಕಾಣುತ್ತಿದೆ (2)
5.ಹದ್ದಿನ ಜಾತಿಗೆ ಸೇರಿದ ಒಂದು ಪಕ್ಷಿ (3)
7.ಕಿವಿಯಿಲ್ಲಿ ಉಲ್ಟಾ ಕಾಣುತ್ತಿದೆ (2)
9.ತಿರುಗಿದಾಗ ಕಾಣಿಸಿದ ಹೊಳೆ (3)
11.ಪಾಪಿಗಳ ಲೋಕವಿದು (3)
12.ಪ್ರೇಮಿಗಳ ಅಗಲಿಕೆಯ ನೋವು (3)
14.ಎಳ್ಳು ನೀರು ಬಿಡುವಿಕೆ (4)
16.ಒಳ್ಳೆಯ ದಿನವಿದು (3)
17.ಸುಗಮವಾಗಿ ಕಿತ್ತ ಹೂ (2)
18.ಇದೊಂದು ಬಗೆಯ ಮೆಟ್ಟು (3)
20.ಸೊಂಟಕ್ಕೆ ಸುತ್ತುವ ಪಂಜೆ (2)



5318ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಷಯಗ್ರಹಣ
.ಹರತಾಳ 5.ರಸನ
7.ಕನಕ 9.ಪುಕಾರು
12.ಕಮರಿ 13.ಬಾಲರವಿ
15.ಪ್ರಮಾಣವಚನ

ಮೇಲಿಂದ ಕೆಳಕ್ಕೆ:
1.ವಿತರಕ 2.ಣಹ
3.ಬಳಗ 6.ನರುಗಂಪು
7.ಕರಾರು 8.ಕರಣಿಕ
10.ಪರಿಜ್ಞಾನ 11.ಕುಂಬಾರ
14.ವಿಪ್ರ

ಸುಡೊಕು 5705

		7		6				2
	8		5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5704 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಅಲಯನ್ಸ್ ಏರ್‌ಗೆ ಕೇಂದ್ರದಿಂದ ₹300 ಕೋಟಿ?

ನವದೆಹಲಿ (ಪಿಟಿಐ): ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಅಲಯನ್ಸ್ ಏರ್ ವಿಮಾನಯಾನ ಕಂಪನಿಗೆ ಕೇಂದ್ರ ಸರ್ಕಾರವು ಈಕ್ವಿಟಿ ರೂಪದಲ್ಲಿ ₹300 ಕೋಟಿ ಹೂಡಿಕೆ ಮಾಡಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇದಕ್ಕೆ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆದರೆ ಈ ಕುರಿತು ನಿರ್ದಿಷ್ಟ ಮಾಹಿತಿ ತಕ್ಷಣಕ್ಕೆ ಲಭ್ಯವಾಗಿಲ್ಲ.

ಕೋವಿಡ್ ಸಾಂಕ್ರಾಮಿಕ ಆರಂಭ ಆಗುವುದಕ್ಕೂ ಮುಂಚೆ ಇದ್ದ ಮಟ್ಟಕ್ಕೆ ವೇತನವನ್ನು ಪರಿಷ್ಕರಣೆ ಮಾಡದೇ ಇರುವುದು ಮತ್ತು ಭತ್ಯೆ ನೀಡದಿರುವುದಕ್ಕೆ ವಿರೋಧ ವ್ಯಕ್ತಪಡಿಸಿ ಈಚಿನ ತಿಂಗಳುಗಳಲ್ಲಿ ಪೈಲಟ್‌ಗಳು ಮುಷ್ಕರವನ್ನೂ ನಡೆಸಿದ್ದಾರೆ.

ಅಲಯನ್ಸ್ ಏರ್ ಕಂಪನಿಯು ಈ ಮೊದಲು ಏರ್ ಇಂಡಿಯಾದ ಭಾಗವಾಗಿತ್ತು. ಸದ್ಯ ಎಐ ಅಸೆಟ್ ಹೋಲ್ಡಿಂಗ್ ಲಿಮಿಟೆಡ್ (ಎಐಎಎಚ್‌ಎಲ್) ಒಡೆತನದಲ್ಲಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಗೃಹ ಸಾಲದ ಹೊರೆ ಇಳಿಸಲು 4 ಮಾರ್ಗ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಕಳೆದ ಒಂದು ವರ್ಷದಲ್ಲಿ ಬ್ಯಾಂಕುಗಳು ಗೃಹ ಸಾಲದ ಮೇಲಿನ ಬಡ್ಡಿ ದರವನ್ನು ಗಣನೀಯವಾಗಿ ಹೆಚ್ಚಳ ಮಾಡಿವೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ, ಅಂದರೆ ಬ್ಯಾಂಕುಗಳಿಗೆ ಕೊಡುವ ಸಾಲದ ಮೇಲಿನ ಬಡ್ಡಿ ದರವನ್ನು, ಶೇಕಡ 6.5ಕ್ಕೆ ಹೆಚ್ಚಳ ಮಾಡುವುದರಿಂದ ಬ್ಯಾಂಕ್ ಸಾಲಗಳ ಬಡ್ಡಿ ಕೂಡ ತುಟ್ಟಿಯಾಗಿದೆ. ಬ್ಯಾಂಕ್ ಸಾಲಗಳ ಬಡ್ಡಿ ಹೆಚ್ಚಳದಿಂದ ಮಾಸಿಕ ಮರುಪಾವತಿ ಕಂತು (ಇಎಂಐ) ಜಾಸ್ತಿಯಾಗಿದೆ. ಕೆಲವು ಸಾಲಗಳ ಮರುಪಾವತಿ ಅವಧಿ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಗೃಹ ಸಾಲದ ಹೊರೆ ಇಳಿಸಿಕೊಳ್ಳುವುದು ಹೇಗೆ?

1. ಡೌನ್ ಪೇಮೆಂಟ್ ಜಾಸ್ತಿ ಮಾಡುವುದು: ಬ್ಯಾಂಕುಗಳು ಸಾಮಾನ್ಯವಾಗಿ ಮನೆಯ ಮೌಲ್ಯದ ಆಧಾರದಲ್ಲಿ ಶೇ 80ರಿಂದ ಶೇ 90ರಷ್ಟು ಸಾಲ ಕೊಡಲು ತಯಾರಿರುತ್ತವೆ. ಆದರೆ ನೀವು ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಮೊತ್ತವನ್ನು ಡೌನ್‌ಪೇಮೆಂಟ್ ಮಾಡುವುದು ಒಳಿತು. ಹೀಗೆ ಮಾಡಿದಾಗ ಬ್ಯಾಂಕಿನಿಂದ ಪಡೆದುಕೊಳ್ಳುವ ಸಾಲದ ಮೊತ್ತ ತಗ್ಗುತ್ತದೆ. ಕಡಿಮೆ ಮೊತ್ತದ ಸಾಲ ಪಡೆದಾಗ ಮಾಸಿಕ ಕಂತಿನ (ಇಎಂಐ) ಮೊತ್ತ ಕಡಿಮೆಯಾಗುತ್ತದೆ. ದೀರ್ಘಾವಧಿಯಲ್ಲಿ ಬಡ್ಡಿ ರೂಪದಲ್ಲಿ ಬ್ಯಾಂಕಿಗೆ ಪಾವತಿಸುವ ದೊಡ್ಡ ಮೊತ್ತದ ಹಣ ಉಳಿತಾಯವಾಗುತ್ತದೆ. ಡೌನ್‌ಪೇಮೆಂಟ್ ಹೆಚ್ಚಿಗೆ ಮಾಡುವುದರಿಂದ ಪಡೆದುಕೊಳ್ಳುವ ಸಾಲಕ್ಕೆ ಬದ್ಧರಾಗಿರುತ್ತೀರಿ ಎಂದು ಬ್ಯಾಂಕಿನವರಿಗೆ ವಿಶ್ವಾಸ ಮೂಡುತ್ತದೆ.

ಅದ್ದರಿಂದ ಅವರು ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಸಾಲ ಕೊಡುವ ಸಾಧ್ಯತೆ ಹೆಚ್ಚಾಗುತ್ತದೆ.

2. ಅವಧಿಗೆ ಮುನ್ನ ಮರುಪಾವತಿ ಮಾಡಿ: ಗೃಹ ಸಾಲವನ್ನು ಅವಧಿಗೆ ಮೊದಲೇ ತೀರಿಸಲು ಯತ್ನಿಸಿ. ಅಂದರೆ, ಸಾಲದ ಅಸಲಿನ ಮೊತ್ತಕ್ಕೆ ಮಾಸಿಕ ಕಂತು (ಇಎಂಐ) ಹೊರತುಪಡಿಸಿ ಹೆಚ್ಚುವರಿ ಮೊತ್ತವನ್ನು ಪಾವತಿ ಮಾಡಿ. ಸರಳವಾಗಿ ಹೇಳುವುದಾದರೆ ಸಾಲದ ಕಂತಿನ ಜೊತೆ ಎಷ್ಟು ಸಾಧ್ಯವೋ ಅಷ್ಟು ಹೆಚ್ಚುವರಿ ಮೊತ್ತವನ್ನ ಸಾಲಕ್ಕೆ ಪಾವತಿ ಮಾಡುತ್ತಾ ಹೋಗಿ. ಬ್ಯಾಂಕಿನವರು ಗೃಹ ಸಾಲದ ಅಸಲಿನ ಮೊತ್ತ ಎಷ್ಟು ಬಾಕಿ ಇದೆ ಎನ್ನುವುದನ್ನು ಆಧರಿಸಿ ಬಡ್ಡಿಯ ಮೊತ್ತ ಲೆಕ್ಕ ಹಾಕುವ ಕಾರಣ, ಎಷ್ಟು ಬೇಗ ಅಸಲು ತೀರಿಸುತ್ತೀರೋ ಅಷ್ಟು ಅನುಕೂಲ ನಿಮಗಾಗುತ್ತದೆ. ಉದಾಹರಣೆಗೆ ನೀವು 20 ವರ್ಷಗಳ ಅವಧಿಗೆ ಶೇ 8ರ ಬಡ್ಡಿ ದರದಲ್ಲಿ ₹50 ಲಕ್ಷ ಸಾಲ ಪಡೆದಿದ್ದರೆ ಮಾಸಿಕ ಕಂತು (ಇಎಂಐ) ₹43 ಸಾವಿರ ಆಗುತ್ತದೆ. ನೀವು ₹5 ಲಕ್ಷವನ್ನು ಮೊದಲೇ ತೀರಿಸಿದರೆ, ಮಾಸಿಕ ಕಂತಿನ ಮೊತ್ತ ₹38,500 ಆಗುತ್ತದೆ.

ಫ್ಲೋಟಿಂಗ್ ಬಡ್ಡಿ ದರದಲ್ಲಿ ಸಾಲ ಪಡೆದಿದ್ದರೆ ಬಹುತೇಕ ಬ್ಯಾಂಕುಗಳು ಯಾವುದೇ ದಂಡ ವಿಧಿಸದೆ, ಗೃಹ ಸಾಲ ಪಡೆದ 6 ತಿಂಗಳ ಬಳಿಕ ಪ್ರೀಪೇಮೆಂಟ್‌ಗೆ ಅವಕಾಶ ಕಲ್ಪಿಸುತ್ತವೆ.

ಒಂದೊಮ್ಮೆ ನಿಶ್ಚಿತ ಬಡ್ಡಿ ದರದಲ್ಲಿ ಸಾಲ ಪಡೆದಿದ್ದರೆ ಕೆಲವು ಬ್ಯಾಂಕುಗಳು ಪ್ರೀಪೇಮೆಂಟ್ ಶುಲ್ಕ ಹಾಕುತ್ತವೆ. ಸಾಲ ಪಡೆಯುವಾಗ ಪ್ರೀಪೇಮೆಂಟ್ ನಿಬಂಧನೆಗಳು ಏನಿವೆ ಎಂದು ಅರಿತು ಮುನ್ನಡೆಯುವುದು ಮುಖ್ಯ.

3. ಫ್ಲೋಟಿಂಗ್ ಬಡ್ಡಿ ಆಯ್ಕೆ ಮಾಡಿಕೊಳ್ಳಿ: ಫಿಕ್ಸ್‌ಡ್ ಬಡ್ಡಿ ದರದಲ್ಲಿ ಸಾಲ ಪಡೆಯುವುದಕ್ಕಿಂತ ಫ್ಲೋಟಿಂಗ್ ಬಡ್ಡಿ ದರದಲ್ಲಿ ಗೃಹ ಸಾಲ ಪಡೆದರೆ ಹೆಚ್ಚು ಅನುಕೂಲ. ಫ್ಲೋಟಿಂಗ್ ಬಡ್ಡಿ ದರದಲ್ಲಿ ಗೃಹ ಸಾಲ ಪಡೆದಾಗ ಬಡ್ಡಿ ದರ ಒಂದೇ ರೀತಿಯಾಗಿ ನಿಗದಿಯಾಗಿರುವುದಿಲ್ಲ, ಮಾರುಕಟ್ಟೆಯಲ್ಲಿರುವ ಬಡ್ಡಿ ದರಕ್ಕೆ ಅನುಗುಣವಾಗಿ ಏರಿಳಿಕೆ ಕಾಣುತ್ತಿರುತ್ತದೆ.

ಫ್ಲೋಟಿಂಗ್ ಸಾಲದ ಮೇಲಿನ ಬಡ್ಡಿ ದರಗಳು ಮಾರುಕಟ್ಟೆಯಲ್ಲಿ ಕಡಿಮೆ ಆದಾಗ ಅದರ ಲಾಭ ನಿಮಗೂ ಸಿಗುತ್ತದೆ. ನಿಮ್ಮ ಮಾಸಿಕ ಕಂತಿನ ಮೊತ್ತ ಕಡಿಮೆ ಆಗುತ್ತದೆ. ಉದಾಹರಣೆಗೆ ಶೇ 8.5ರ ಬಡ್ಡಿ ದರದಲ್ಲಿ 20 ವರ್ಷಗಳ ಅವಧಿಗೆ ₹50 ಲಕ್ಷ ಸಾಲ ಪಡೆದಿದ್ದೀರಿ ಎಂದಿಟ್ಟುಕೊಳ್ಳಿ. ಇಂತಹ ಸನ್ನಿವೇಶದಲ್ಲಿ ಮಾಸಿಕ ₹43,391 ಇಎಂಐ ಪಾವತಿಸಬೇಕಾಗುತ್ತದೆ. ಬಡ್ಡಿ ದರ ಶೇ 7.5ಕ್ಕೆ ಇಳಿದರೆ ಮಾಸಿಕ ಕಂತು ₹40,881 ಆಗುತ್ತದೆ. ಈ ರೀತಿ ಫ್ಲೋಟಿಂಗ್ ಬಡ್ಡಿ ದರದಿಂದ ಸಹಾಯವಾಗುತ್ತದೆ. ಆದರೆ ಫ್ಲೋಟಿಂಗ್ ಬಡ್ಡಿ ದರದಲ್ಲಿ ಬಡ್ಡಿ ದರ ಹೆಚ್ಚಳವಾಗುವ ಸಾಧ್ಯತೆಯೂ ಇರುತ್ತದೆ. ಅದನ್ನು ಅರಿತು ಮುನ್ನ-ಡೆಯಬೇಕಾಗುತ್ತದೆ.

4. ಹೋಮ್ ಲೋನ್ ಸ್ವಿಚ್: ನೀವು ₹50 ಲಕ್ಷ ಸಾಲ ಪಡೆದಿದ್ದು ಸದ್ಯ ಬ್ಯಾಂಕಿನಲ್ಲಿ ಶೇ 9.5ರಷ್ಟು ಬಡ್ಡಿ ನಿಗದಿ ಮಾಡಿದ್ದಾರೆ ಎಂದು ಭಾವಿಸೋಣ. ಮತ್ತೊಂದು ಬ್ಯಾಂಕಿನಲ್ಲಿ ನಿಮಗೆ ಶೇ 8.5ರ ಬಡ್ಡಿ ದರದಲ್ಲಿ ಸಾಲ ಸಿಕ್ಕರೆ ಹೋಮ್ ಲೋನ್ ಸ್ವಿಚ್ ಮಾಡಿಕೊಂಡು ಆ ಸಾಲವನ್ನು ಅದೇ ಬ್ಯಾಂಕಿಗೆ ವರ್ಗಾವಣೆ ಮಾಡಿಕೊಳ್ಳಬಹುದು. ಹೀಗೆ ಸಾಲ ವರ್ಗಾವಣೆ ಮಾಡಲು ಮುಂದಾಗುವಾಗ ನಿಮಗೆ ಯಾವ ಬ್ಯಾಂಕಿನಿಂದ ಹೆಚ್ಚು ಅನುಕೂಲ ಸಿಗುತ್ತದೆ ಎಂದು ಮನಗಂಡು ಮುಂದುವರಿಯಬೇಕು. ಹೆಚ್ಚು ಶುಲ್ಕ ವಿಧಿಸದ, ಪ್ರೀಪೇಮೆಂಟ್ ನಿಬಂಧನೆಗಳನ್ನು ಹೇರದ ಬ್ಯಾಂಕಿಗೆ ಗೃಹ ಸಾಲ ವರ್ಗಾವಣೆ ಮಾಡಿಕೊಂಡರೆ ಹೆಚ್ಚು ಅನುಕೂಲ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

5 ತಿಂಗಳ ಗರಿಷ್ಠ ಮಟ್ಟಕ್ಕೆ ಸೆನ್ಸೆಕ್ಸ್

ಷೇರುಪೇಟೆ

ಮೇ 12ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 62,027 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.59ರಷ್ಟು ಜಿಗಿದಿದೆ. 18,314 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.36ರಷ್ಟು ಹೆಚ್ಚಳ ದಾಖಲಿಸಿದೆ. ಸೆನ್ಸೆಕ್ಸ್ 5 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದು, ಈ ಹಿಂದೆ ಡಿಸೆಂಬರ್ 2022ರಲ್ಲಿ 62,000 ಅಂಶಗಳ ಗಡಿ ದಾಟಿತ್ತು.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ವಾಹನ ಸೂಚ್ಯಂಕ ಶೇ 4.2ರಷ್ಟು, ಬ್ಯಾಂಕ್ ಸೂಚ್ಯಂಕ ಶೇ 2.7ರಷ್ಟು, ರಿಯಲ್ ಎಸ್ಟೇಟ್ ವಲಯ ಶೇ 1.8ರಷ್ಟು, ಎಫ್‌ಎಂಸಿಜಿ ವಿಭಾಗ ಶೇ 1.6ರಷ್ಟು, ನಿಫ್ಟಿ ಮಿಡ್ ಕ್ಯಾಪ್ 100 ಶೇ 1ರಷ್ಟು, ನಿಫ್ಟಿ ಸ್ಮಾಲ್ ಕ್ಯಾಪ್ 100 ಶೇ 0.8ರಷ್ಟು ಮತ್ತು ನಿಫ್ಟಿ ಐಟಿ ಶೇ 0.2ರಷ್ಟು ಹೆಚ್ಚಳ ದಾಖಲಿಸಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4.3ರಷ್ಟು, ನಿಫ್ಟಿ ಲೋಹ ಶೇ 2ರಷ್ಟು, ನಿಫ್ಟಿ ಫಾರ್ಮಾ ಶೇ 1ರಷ್ಟು ಮತ್ತು ನಿಫ್ಟಿ ಮಾಧ್ಯಮ ಶೇ 0.4ರಷ್ಟು ಕುಸಿದಿವೆ.

ಏರಿಕೆ – ಇಳಿಕೆ: ಸೆನ್ಸೆಕ್ಸ್‌ನಲ್ಲಿ ಟಾಟಾ ಮೋಟರ್ಸ್ ಡಿವಿಆರ್ ಶೇ 8.23ರಷ್ಟು, ಟಾಟಾ ಮೋಟರ್ಸ್ ಶೇ 7.26ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 6.60ರಷ್ಟು, ಮಾರುತಿ ಸುಜುಕಿ ಶೇ 5.60ರಷ್ಟು, ಎಕ್ಸಿಸ್ ಬ್ಯಾಂಕ್ ಶೇ 5.20ರಷ್ಟು, ಬಜಾಜ್ ಫೈನಾನ್ಸ್ ಶೇ 5.05ರಷ್ಟು, ಏಷಿಯನ್ ಪೇಂಟ್ ಶೇ 4.99ರಷ್ಟು, ಹಿಂದುಸ್ತಾನ್ ಯೂನಿಲಿವರ್ ಶೇ 4.69ರಷ್ಟು ಮತ್ತು ಹೀರೊ ಮೋಟೊಕಾರ್ಪ್ ಶೇ 3.64ರಷ್ಟು ಹೆಚ್ಚಳ ಕಂಡಿವೆ.

ಎಲ್ ಆ್ಯಂಡ್ ಟಿ ಶೇ 5.74ರಷ್ಟು, ಟಾಟಾ ಸ್ಟೀಲ್ ಶೇ 3.87ರಷ್ಟು, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 3.45ರಷ್ಟು, ಎಚ್‌ಡಿಎಫ್‌ಸಿ ಶೇ 3ರಷ್ಟು, ಇನ್ಫೊಸಿಸ್ ಶೇ 2.20ರಷ್ಟು, ಸನ್ ಫಾರ್ಮಾ ಶೇ 1.84ರಷ್ಟು, ವೇದಾಂತ ಶೇ 1.08ರಷ್ಟು, ಕೋಲ್ ಇಂಡಿಯಾ ಶೇ 1.05ರಷ್ಟು ಮತ್ತು ಐಟಿಸಿ ಶೇ 0.95ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಸೆಂಚುರಿ ಪ್ಲೈ, ನೀಲ್ ಕಮಲ್, ಪವರ್ ಗ್ರಿಡ್, ಅಬೋಟ್ ಇಂಡಿಯಾ, ಇಂಡಿಯನ್ ಆಯಿಲ್, ಜೆಕೆ ಟೈರ್, ಐಟಿಸಿ, ಟಿಸಿಐ, ಆಲ್ ಕೆಮ್, ವರ್ಲ್‌ಪೂಲ್, ಉಜ್ಜೀವನ್ ಬ್ಯಾಂಕ್, ಬಂಧನ್ ಬ್ಯಾಂಕ್, ಗೋದ್ರೇಜ್ ಇಂಡಸ್ಟ್ರೀಸ್, ಕ್ರಾಂಪ್ಟನ್, ಜೆಎಸ್‌ಡಬ್ಲ್ಯು ಸ್ಟೀಲ್, ಎನ್‌ಟಿಪಿಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಜನ್ಮಶತಮಾನೋತ್ಸವ



1923ರ ಮೇ 15ರಂದು ಕಡುಬಡತನದ, ಸಾಮಾಜಿಕ ಕೆಳಸ್ತರದ, ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿಯ ಒಂದು ಗ್ರಾಮೀಣ ಕುಟುಂಬದಲ್ಲಿ ಜನಿಸಿದ **ದಿವಂಗತ ಡಾಕ್ಟರ್ ಜಿ.ಎಂ. ತಿಪ್ಪೇಸ್ವಾಮಿ** ಯವರು ತಮ್ಮ ಸ್ವಸಾಮರ್ಥ್ಯದಿಂದ ಅತ್ಯಂತ ಜನಪ್ರಿಯ ಕಣ್ಣಿನ ತಜ್ಞರಾಗಿ, ದಾವಣಗೆರೆಯ ಬಾಪೂಜಿ ಮೆಡಿಕಲ್ ಕಾಲೇಜಿನ ಕಣ್ಣಿನ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದವರು. 1983–85ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ತದನಂತರ ಚಿತ್ರದುರ್ಗದ ಭರಮಸಾಗರ ಕ್ಷೇತ್ರದಿಂದ 1985ರಲ್ಲಿ ರಾಜ್ಯದ ವಿಧಾನಸಭೆಗೆ ಆಯ್ಕೆಯಾಗಿ ಚಿರಸ್ಮರಣೀಯ ಸೇವೆಯನ್ನು ಸಲ್ಲಿಸಿದವರು. ಸರಳ, ಸಜ್ಜನಿಕೆ, ದಿಟ್ಟ ನಿಲುವು ಇದ್ದ ವಂಚಿತರಿಗಾಗಿ ಸದಾ ಮಿಡಿದು ದುಡಿದ ಜೀವ. ಇವರು ತಳಸಮುದಾಯಗಳು ಎದೆಯಲ್ಲಿಟ್ಟುಕೊಂಡು ಹೆಮ್ಮೆಪಡಬೇಕಾದ ನಾಯಕ, ಬುದ್ಧಿ, ವಿಚಾರ ಮತ್ತು ಭಾವನೆಗಳು ಮೇಳೈಸಿದ್ದ ಅಪಾರ ದೂರದರ್ಶಿತ್ವವಿದ್ದ ಮಾನವತಾವಾದಿ ಆಗಿದ್ದ **ಡಾ॥ ಜಿ.ಎಂ. ತಿಪ್ಪೇಸ್ವಾಮಿ** ಇವರ ಜನ್ಮಶತಮಾನೋತ್ಸವ ಇಂದು.
ಸದಾ ಇವರ ಸ್ಮರಣೆಯಲ್ಲಿ ಕುಟುಂಬ ಮತ್ತು ಬಂಧುಮಿತ್ರರು.
ಮೊ.: 9886977335

ಹತ್ತನೇ ವರ್ಷದ ಪುಣ್ಯಸ್ಮರಣೆ



ಎಂ.ವಿ.ಪುಟ್ಟಪ್ಪ ಹೆಗ್ಗಡೆ ಯವರು
ಜನನ:31-12-1931 ನಿಧನ:15-05-2013
ನೀವು ನಮ್ಮನ್ನಗಲಿ ಹತ್ತು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಶಿವಮೊಗ್ಗ.
ಫೋನ್: 9481320229 / 9480204505
9845027001 / 9480086310

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚಂದಾದಾರಿಕೆ ಆರಂಭಿಸಿದ ಜಿಯೊಸಿನಿಮಾ

ನವದೆಹಲಿ (ರಾಯಿಟರ್ಸ್): ಚಂದಾದಾರಿಕೆ ಆಧಾರದಲ್ಲಿ ಮನರಂಜನಾ ಕಾರ್ಯಕ್ರಮ ಒದಗಿಸಲು ಜಿಯೊ ಸಿನಿಮಾ ಆರಂಭಿಸಿದೆ. ಪ್ರೀಮಿಯಂ ಕಾರ್ಯ-ಕ್ರಮಗಳ ಚಂದಾದಾರಿಕೆ ವರ್ಷಕ್ಕೆ ₹999 ಆಗಿರಲಿದೆ.

ಮನರಂಜನಾ ಕಾರ್ಯಕ್ರಮಗ-ಳನ್ನು ಉಚಿತವಾಗಿ ನೀಡುವುದನ್ನು ನಿಲ್ಲಿಸುವ ಮೊದಲ ಹೆಜ್ಜೆ ಇದು. ಜಿಯೊ ಸಿನಿಮಾ ಈಗ ಐಪಿಎಲ್ ಸರಣಿಯನ್ನು ಉಚಿತವಾಗಿ ನೇರ ಪ್ರಸಾರ ಮಾಡುವ ಮೂಲಕ ಜನಪ್ರಿಯತೆ ಹೆಚ್ಚಿಸಿಕೊಂಡಿದೆ.

ಈಗ ಚಂದಾದಾರಿಕೆ ಇರುವುದು ಪ್ರೀಮಿಯಂ ಕಾರ್ಯಕ್ರಮಗಳಿಗೆ ಮಾತ್ರ. ಐಪಿಎಲ್ ವೀಕ್ಷಣೆಗೆ ಹಣ ಕೊಡಬೇಕಾಗಿಲ್ಲ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಮೊಬೈಲ್ ಪತ್ತೆಗೆ ಸಿಇಐಆರ್: 17ರಿಂದ ದೇಶವ್ಯಾಪಿ ಬಳಕೆಗೆ?

ನವದೆಹಲಿ (ಪಿಟಿಐ): ಕಳೆದುಹೋದ ಅಥವಾ ಕಳುವಾದ ಮೊಬೈಲ್ ಫೋನ್‌ಗಳನ್ನು ಬ್ಲಾಕ್ ಮಾಡುವ ಮತ್ತು ಪತ್ತೆ ಮಾಡುವ ವ್ಯವಸ್ಥೆಯು ಇದೇ 17ರಿಂದ ದೇಶದಾದ್ಯಂತ ಬಳಕೆಗೆ ಲಭ್ಯವಾಗಲಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದುಹೋದ ಫೋನ್ ಪತ್ತೆ ಮಾಡಲು ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಟೆಲಿಮ್ಯಾಟಿಕ್ಸ್ (ಸಿ-ಡಾಟ್) ಅಭಿವೃದ್ಧಿಪಡಿಸಿರುವ ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಜಾಲತಾಣವು ಸದ್ಯ ಕರ್ನಾಟಕ, ದೆಹಲಿ, ಮಹಾರಾಷ್ಟ್ರ ಮತ್ತು ಈಶಾನ್ಯ ಭಾಗಗಳಲ್ಲಿ ಪ್ರಾಯೋಗಿಕವಾಗಿ ಬಳಕೆಯಲ್ಲಿದೆ ಎಂದು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಅವರು ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಕೇಳಿದಾಗ, 'ದೇಶದಾದ್ಯಂತ ಬಳಕೆ ಮಾಡಲು ತಂತ್ರಜ್ಞಾನವು ಸಿದ್ಧವಾಗಿದೆ' ಎಂದಷ್ಟೇ ಸಿ-ಡಾಟ್‌ನ ಯೋಜನಾ ಮಂಡಳಿ ಅಧ್ಯಕ್ಷ ಮತ್ತು ಸಿಇಒ ರಾಜ್‌ಕುಮಾರ್ ಉಪಾಧ್ಯಾಯ ಹೇಳಿದ್ದಾರೆ. ಆದರೆ, ದೇಶದಾದ್ಯಂತ ಇದನ್ನು ಜಾರಿಗೊಳಿಸುವ ದಿನಾಂಕವನ್ನು ಅವರು ಖಚಿತಪಡಿಸಿಲ್ಲ.

ಕರ್ನಾಟಕ ಪೊಲೀಸರು ಕಳೆದುಹೋಗಿದ್ದ 2,500 ಮೊಬೈಲ್ ಫೋನ್‌ಗಳನ್ನು ಸಿಇಐಆರ್ ವ್ಯವಸ್ಥೆಯ ಬಳಸಿ ಈಚೆಗಷ್ಟೇ ಪತ್ತೆ ಮಾಡಿ ಸಂಬಂಧಪ-ಟ್ಟವರಿಗೆ ನೀಡಿದ್ದಾರೆ. ಆ್ಯಪಲ್ ಫೋನ್ ಕಳುವಾದರೆ ಅದನ್ನು ಪತ್ತೆ ಮಾಡಲು ಆ್ಯಪಲ್ ಐಡಿ ನೆರವಾಗುತ್ತದೆ. ಆದರೆ, ಹೆಚ್ಚಿನ ಸಮಸ್ಯೆ ಇರುವುದು ಆಂಡ್ರಾಯ್ಡ್ ಫೋನ್‌ಗಳಲ್ಲಿ.

ಫೋನ್‌ಗಳ ಕಳ್ಳಸಾಗಣೆಯನ್ನೂ ಪತ್ತೆ ಮಾಡುವ ವ್ಯವಸ್ಥೆಯು ಇದರಲ್ಲಿದೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ವರಮಾನ ನಷ್ಟ ಆಗುವುದು ತಪ್ಪಲಿದೆ ಎಂದು ಉಪಾಧ್ಯಾಯ ಹೇಳಿದ್ದಾರೆ.

ಜೆಆರ್‌ಟಿಯಿಂದ ಮದುವೆಗೆ ಹೊಸ ಸಂಗ್ರಹ

ಬೆಂಗಳೂರು: ಜೆಆರ್‌ಟಿ ಜುವೆಲರ್ಸ್ ಕಂಪನಿಯು ಮದುವೆ ಮತ್ತು ಸಂಭ್ರ-ಮಾಚರಣೆಗೆ ಹೊಂದುವಂತಹ ಆಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಈ ಸಂಗ್ರಹವು ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿಯ ವಿಶೇಷ ವಿನ್ಯಾಸವನ್ನು ಒಳಗೊಂಡಿದೆ.

'ಮದುವೆ ಸಂದರ್ಭದಲ್ಲಿ ಆಭರಣಗಳು ಯಾವಾಗಲೂ ಪ್ರಮುಖ ಪಾತ್ರ ವಹಿಸುತ್ತವೆ. ಮದುಮಕ್ಕಳು ಮತ್ತು ಅವರ ಕುಟುಂಬದವರಿಗೆ ಆಭರಣದ ಅಗತ್ಯವನ್ನು ನಾವು ಅರ್ಥಮಾಡಿ-ಕೊಂಡಿದ್ದೇವೆ. ಈ ಹೊಸ ಸಂಗ್ರಹವು ಮದುವೆ ಸಂದರ್ಭಕ್ಕೆ ಇನ್ನಷ್ಟು ಮೆರುಗು ನೀಡುವ ವಿಶ್ವಾಸವಿದೆ' ಎಂದು ಜೆಆರ್‌ಟಿ ಜುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. 'ಆನಂದ್' ಅನಂತಪದ್ಮನಾಭನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಾಜಕತೆ ಸೃಷ್ಟಿಗೆ ಯತ್ನ: ಮಾಜಿ ಪ್ರಧಾನಿ ಇಮ್ರಾನ್ ಖಾನ್ ತಪರಾಕಿ

'ಪಾಕ್ ಸೇನೆಯದ್ದು ಲಜ್ಜೆಗೇಡಿತನ'

ಲಾಹೋರ್ (ಪಿಟಿಐ): 'ದೇಶದ ರಾಜ-ಕಾರಣದಲ್ಲಿ ಮೂಗು ತೂರಿಸುವ ಪಾಕ್ ಸೇನೆಯ ಧೋರಣೆ ಲಜ್ಜೆಗೇಡಿತನಕ್ಕೆ ಸಾಕ್ಷಿಯಾಗಿದೆ. ಇದರ ಬದಲು ಸೇನೆಯೇ ಸ್ವಂತ ಪಕ್ಷ ಸ್ಥಾಪಿಸಿ ರಾಜಕೀಯ ಪ್ರವೇಶಿಸುವುದು ಒಳಿತು' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಸೇನೆಗೆ ತಪರಾಕಿ ನೀಡಿದ್ದಾರೆ.

ಇಮ್ರಾನ್

ಅಲ್ ಖಾದಿರ್ ಟ್ರಸ್ಟ್‌ನ ಭ್ರಷ್ಟಾಚಾರ ಪ್ರಕರಣ ಸಂಬಂಧ ಇಸ್ಲಾಮಾಬಾದ್ ಹೈಕೋರ್ಟ್‌ನಿಂದ ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ಶನಿವಾರ ಇಲ್ಲಿನ ತಮ್ಮ ಜಮಾನ್ ಪಾರ್ಕ್ ನಿವಾಸದಲ್ಲಿ ದೇಶದ ಜನರನ್ನು ಉದ್ದೇಶಿಸಿ ಒಂದು ಗಂಟೆಕಾಲ ಅವರು ಮಾತನಾಡಿದರು.

ಪಾಕಿಸ್ತಾನ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಪಕ್ಷ ಹತ್ತಿಕ್ಕಲು ಸೇನೆ ಕೈಗೊಂಡಿರುವ ಕ್ರಮಗಳ ವಿರುದ್ಧವೂ ಅವರು ಹರಿಹಾಯ್ದರು. ತಮ್ಮನ್ನು 'ಕಪಟಿ' ಹಾಗೂ 'ಸೇನಾ ವಿರೋಧಿ' ಎಂದು ಕರೆದಿರುವ ಸೇನೆಯ ಸಾರ್ವಜನಿಕ ಸಂಬಂಧಗಳ ಆಂತರಿಕ ವಿಭಾಗದ (ಐಎಸ್‌ಪಿಆರ್) ಡೈರೆಕ್ಟರ್ ಜನರಲ್ ಅಹ್ಮದ್ ಷರೀಫ್ ಚೌಧರಿ ಹೇಳಿಕೆಗೆ ತಿರುಗೇಟು ನೀಡಿದರು.

'ನಾನು ವಿಶ್ವದಾದ್ಯಂತ ಪಾಕಿಸ್ತಾನವನ್ನು ಪ್ರತಿನಿಧಿಸಿ ದೇಶಕ್ಕೆ ಗೌರವ ತಂದುಕೊಡುವಾಗ ನೀನು ಇನ್ನೂ ಹುಟ್ಟಿಯೇ ಇರಲಿಲ್ಲ. ನನ್ನನ್ನು ಟೀಕಿಸಲು ನಿನಗೆ ನಾಚಿಕೆಯಾಗುವುದಿಲ್ಲ' ಎಂದು ಹರಿಹಾಯ್ದರು.

ಪಾಕ್ ಸೇನಾ ಮುಖ್ಯಸ್ಥರ ವಿರುದ್ಧವೂ ವಾಗ್ದಾಳಿ ನಡೆಸಿದ ಅವರು, 'ನ್ಯಾಯಾಲಯ ನನಗೆ ಜಾಮೀನು ನೀಡಿದ ಬಳಿಕ ಮುಖ್ಯಸ್ಥರು ಅಪಹರಣಗೊಂಡಿದ್ದಾರೆ' ಎಂದು ವ್ಯಂಗ್ಯವಾಡಿದರು.

'ನೀವು (ಸೇನೆ) ನನ್ನ ಮಾತು ಕೇಳುವುದಿಲ್ಲ. ಅದು ನನಗೆ ಚೆನ್ನಾಗಿ ಗೊತ್ತು. ನಿಮ್ಮ ಧೋರಣೆಗಳಿಂದ ದೇಶ ಎತ್ತ ಸಾಗುತ್ತಿದೆ ಎಂಬ ಬಗ್ಗೆ ನೀವು ಚಿಂತಿಸಬೇಕಿದೆ. ನನ್ನ ಬಂಧನಕ್ಕೆ ನಿರ್ದೇಶನ ನೀಡಿದವರು ಯಾರು, ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದ್ದು ಯಾರು? ಎಂಬ ಬಗ್ಗೆ ಮುಖ್ಯ ನ್ಯಾಯಮೂರ್ತಿ ನೇತೃತ್ವದಡಿ ಸ್ವತಂತ್ರ ಸಮಿತಿ ಮೂಲಕ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ದೇಶದಲ್ಲಿ ಅಜರಾಕತೆ ಸೃಷ್ಟಿಸಿ ಪರಿಸ್ಥಿತಿಯ ಲಾಭ ಪಡೆಯಲು ಯಾರು(ಸೇನೆ) ಹೊರಟಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿದೆ. ಪಾಕ್ ಪ್ರಜೆಗಳಿಗೆ ನ್ಯಾಯಾಂಗ ವ್ಯವಸ್ಥೆ ಮಾತ್ರವೇ ಭರವಸೆಯಾಗಿ ಉಳಿದಿದೆ' ಎಂದು ಅಭಿಪ್ರಾಯಪಟ್ಟರು.

'ನಮ್ಮ ಪಕ್ಷ ಹಮ್ಮಿಕೊಂಡಿದ್ದ ಪ್ರ-ತಿಭಟನೆಯಲ್ಲಿ ಸೇನೆಯ ಸಿಬ್ಬಂದಿಯು ಸಮವಸ್ತ್ರ ಇಲ್ಲದೆ ಪಾಲ್ಗೊಂಡಿದ್ದರು. ಹಿಂಸಾಚಾರ ಉಲ್ಬಣಕ್ಕೆ ಸೇನೆಯೇ ಕುಮ್ಮಕ್ಕು ನೀಡಿದೆ' ಎಂಬುದನ್ನು ತೋರಿಸುವ ವಿಡಿಯೊ ತುಣುಕನ್ನು ಪ್ರದರ್ಶಿಸಿದರು.

ಸರ್ಕಾರಿ ಪ್ರತಿನಿಧಿಗಳು ಚುನಾವಣೆಗಳನ್ನು ಅಪೇಕ್ಷಿಸುವುದಿಲ್ಲ. ಅದರಲ್ಲಿ ಭಾಗಿಯಾದರೆ ನಾವು ನಾಶವಾಗುತ್ತೇವೆ ಎಂಬ ಅರಿವು ಅವರಿಗಿದೆ. ಚುನಾವಣೆ ಎಂದರೆ ಓಡಿಹೋಗುವ ಸೇನೆಯು ಇಂತಹ ಪಿತೂರಿಯಲ್ಲಿ ತೊಡಗಿದೆ ಎಂದು ಟೀಕಿಸಿದರು.

'ಕಾಣದ ಕೈಗಳು ಮಾಧ್ಯಮಗ-ಳನ್ನೂ ನಿಯಂತ್ರಿಸುತ್ತಿವೆ. ಸಾಮಾಜಿಕ ಮಾಧ್ಯಮಗಳಲ್ಲಿ ಮುಕ್ತವಾಗಿ ಮಾತನಾಡಲು ನಿರ್ಬಂಧ ಹೇರಿವೆ. ಪತ್ರಕರ್ತರು ಸೇನೆಯ ಧೋರಣೆಗೆ ಭಯಪಡಬಾರದು. ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಪಕ್ಷದ 3,500ಕ್ಕೂ ಹೆಚ್ಚು ಕಾರ್ಯಕರ್ತರನ್ನು ಸೇನೆ ಬಂಧಿಸಿದೆ. ಆ ಮೂಲಕ ಇಡೀ ಪಕ್ಷವನ್ನು ಜೈಲಿನಲ್ಲಿಡಲು ಪ್ರಯತ್ನಿಸಿದೆ' ಎಂದರು.

ಪಾಕಿಸ್ತಾನದ ಇತಿಹಾಸದಲ್ಲಿ ಮೊದಲ ಬಾರಿಗೆ ರಾವಲ್ಪಿಂಡಿಯಲ್ಲಿರುವ ಸೇನೆಯ ಕೇಂದ್ರ ಕಚೇರಿ ಮುಂಭಾಗ ಪಿಟಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಸೇನಾ ಕಮಾಂಡರ್ ಮನೆಯನ್ನೂ ಧ್ವಂಸಗೊಳಿಸಿದ್ದರು. ಹಿಂಸಾಚಾರದಿಂದ 10 ಜನರು ಮೃತ-ಪಟ್ಟಿದ್ದಾರೆ ಎಂದು ಸೇನೆ ಹೇಳಿದ್ದರೆ, 40 ನಾಗರಿಕರು ಅಸುನೀಗಿದ್ದಾರೆ ಎಂದು ಇಮ್ರಾನ್ ಖಾನ್ ಅವರ ಪಕ್ಷ ಹೇಳಿದೆ.

ರೋಹಿಂಗ್ಯಾ ನಿರಾಶ್ರಿತರ ಶಿಬಿರದಲ್ಲಿ 'ಮೋಕಾ' ಆತಂಕ

ಢಾಕಾ (ರಾಯಿಟರ್ಸ್/ಪಿಟಿಐ): ಮೋಕಾ ಚಂಡಮಾರುತವು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಮ್ಯಾನ್ಮಾರ್–ಬಾಂಗ್ಲಾದೇಶ ಕರಾವಳಿಗೆ ಭಾನುವಾರ ಅಪ್ಪಳಿಸಿದೆ. ಇನ್ನೊಂದೆಡೆ ಮ್ಯಾನ್ಮಾರ್‌ನ ಕರಾವಳಿಯಲ್ಲಿರುವ ಕಾಕ್ಸ್ ಬಜಾರ್ ನಗರದಲ್ಲಿರುವ ರೋಹಿಂಗ್ಯಾ ನಿರಾಶ್ರಿತರ ಶಿಬಿರಗಳಿಗೆ ಈ ಚಂಡಮಾರುತವು ತೀವ್ರ ಹಾನಿ ಉಂಟು ಮಾಡುವ ಸಾಧ್ಯತೆ ಇದೆ.

'ಬಿದಿರು ಹಾಗೂ ಟಾರ್ಪಲ್‌ನಿಂದ ನಾವು ಮನೆ ಕಟ್ಟಿಕೊಂಡಿದ್ದೇವೆ. ಗಾಳಿಯು ಶಕ್ತಿಯುತವಾಗುತ್ತಲೇ ಇದೆ. ನಾವು ಮನೆಯೊಳಗೆ ಬಂದಿಯಾಗಿದ್ದೇವೆ. ನಮ್ಮನ್ನು ರಕ್ಷಿಸುವಂತೆ ಭಗವಂತನಲ್ಲಿ ಕೇಳಿಕೊ-ಳ್ಳುತ್ತಿದ್ದೇವೆ' ಎನ್ನುತ್ತಾರೆ 21 ವರ್ಷದ ಮೊಹಮ್ಮದ್ ಅಜೀಜ್.

ಕಾಕ್ಸ್ ಬಜಾರ್‌ನಲ್ಲಿರುವ ಈ ನಿರಾಶ್ರಿತ ಕೇಂದ್ರವು ಜಗತ್ತಿನ ಅತಿದೊಡ್ಡ ನಿರಾಶ್ರಿತರ ಕೇಂದ್ರವಾಗಿದೆ.

ಐಸಿಎಸ್‌ಇ: ಬೆಂಗಳೂರಿನ ಅನನ್ಯಗೆ ಅಗ್ರ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್‌ನ (ಸಿಐಎಸ್‌ಸಿಇ) ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಐಸಿಎಸ್‌ಇಯ 10ನೇ ತರಗತಿಯಲ್ಲಿ ನಗರದ ಹೆಬ್ಬಾಳದ ವಿದ್ಯಾನಿಕೇತನ ಶಾಲೆಯ ಅನನ್ಯ ಕಾರ್ತಿಕ್ ಶೇ 99.80 ಅಂಕ ಪಡೆದು ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ್ದಾಳೆ. ರಾಷ್ಟ್ರದಲ್ಲಿ ಇತರೆ ವಿದ್ಯಾರ್ಥಿಗಳೊಂದಿಗೆ ಅನನ್ಯ ಮೊದಲ ಸ್ಥಾನ ಹಂಚಿಕೊಂಡಿದ್ದಾಳೆ.

10ನೇ ತರಗತಿಯಲ್ಲಿ ವರ್ತೂರಿನ ವಿಬ್‌ಗಯಾರ್ ಶಾಲೆಯ ಅಕ್ಷಯ ಸುತ್ರವೆ, ಗ್ರೀನ್‌ವುಡ್ ಹೈಸ್ಕೂಲ್ ಆನಂದಿ ಶಹಾ ಶೇ 99.60 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಶೇ 99.40 ಅಂಕ ಪಡೆದಿರುವ ಬೆಂಗಳೂರಿನ 23 ವಿದ್ಯಾರ್ಥಿಗಳು 3ನೇ ಸ್ಥಾನ ಪಡೆದಿದ್ದಾರೆ.

ಐಎಸ್‌ಸಿಯ 12ನೇ ತರಗತಿಯಲ್ಲಿ ಬೆಂಗಳೂರಿನ ಮೂವರು ವಿದ್ಯಾರ್ಥಿಗಳು ಶೇ 99.25 ಅಂಕ ಪಡೆದಿದ್ದಾರೆ. ಮಲ್ಯ ಅದಿತಿ ಇಂಟರ್ ನ್ಯಾಷನಲ್ ಶಾಲೆಯ ಆನಂದಿತಾ ಡೇವಿಡ್, ಗ್ರೀನ್‌ವುಡ್ ಸೇಬಂತಿ, ಕ್ರೈಸ್ಟ್ ಅಕಾಡೆಮಿಯ ದಿರಿಸಿನಾಲಾ ಶ್ರೀಸಾಯಿ ಅಕ್ಷಯ್ ರಾಜ್ಯದಲ್ಲಿ ಮೊದಲ ಸ್ಥಾನ ಹಂಚಿಕೊಂಡಿದ್ದಾರೆ.

ಎರಡು ತರಗತಿಯಲ್ಲೂ ರಾಜ್ಯಕ್ಕೆ ಈ ಬಾರಿ ಉತ್ತಮ ಫಲಿತಾಂಶ ಲಭಿಸಿದೆ. 10ನೇ ತರಗತಿಯಲ್ಲಿ ಶೇ 99.60 ಹಾಗೂ 12ನೇ ತರಗತಿಯಲ್ಲಿ 98.58 ಫಲಿತಾಂಶ ಬಂದಿದೆ. 399 ಶಾಲೆಗಳ 25,646 ವಿದ್ಯಾರ್ಥಿಗಳು ಐಸಿಎಸ್‌ಇ ಪರೀಕ್ಷೆ ಬರೆದಿದ್ದರು. 46 ಐಎಸ್‌ಸಿ ಶಾಲೆಯ 2,250 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಈ ಬಾರಿಯೂ ರಾಜ್ಯದಲ್ಲಿ ಬಾಲಕಿಯರೇ ಫಲಿತಾಂಶದಲ್ಲಿ ಮೇಲುಗೈ ಸಾಧಿಸಿದ್ದಾರೆ.

26ನೇ ಬಾರಿ ಎವರೆಸ್ಟ್ ಏರಿದ ಶೆರ್ಪಾ ಗೈಡ್

ಕಠ್ಮಂಡು (ಎಪಿ): ನೇಪಾಳಿ ಶೆರ್ಪಾ ಮಾರ್ಗದರ್ಶಕರೊಬ್ಬರು 26ನೇ ಬಾರಿಗೆ ಜಗತ್ತಿನ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಏರುವ ಮೂಲಕ ತಮ್ಮ ಒಡನಾಡಿ ಕಾಮಿ ರೀಟಾ ಶೆರ್ಪಾ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.

ಪಸಂಗ್ ದವಾ ಶೆರ್ಪಾ ಈ ದಾಖಲೆ ಸರಿಗಟ್ಟಿದ ಕೀರ್ತಿಗೆ ಭಾಜನರಾಗಿದ್ದಾರೆ. ಅವರು, ಹಂಗೇರಿಯ ಪರ್ವತಾರೋ-ಹಿಯೊಂದಿಗೆ ಭಾನುವಾರ ಎವರೆಸ್ಟ್‌ನ ತುತ್ತತುದಿ ತಲುಪಿದ್ದಾರೆ ಎಂದು ಆಯೋಜಕ ಸಂಸ್ಥೆ ಇಮ್ಯಾಜಿನ್ ನೇಪಾಳ ಟ್ರೆಕ್ಸ್ ತಿಳಿಸಿದೆ.

ಪಸಂಗ್ ಮೊದಲ ಬಾರಿಗೆ ಎವರೆಸ್ಟ್ ಏರಿದ್ದು 1998ರಲ್ಲಿ. ನೇಪಾಳಿ ಪರ್ವತಾರೋಹಿ ಕಳೆದ ವರ್ಷ 26ನೇ ಬಾರಿಗೆ ಎವರೆಸ್ಟ್ ತುದಿ ಏರಿ ದಾಖಲೆ ನಿರ್ಮಿಸಿದ್ದರು. 1953ರಲ್ಲಿ ಮೊದಲ ಬಾರಿಗೆ ನ್ಯೂಜಿಲೆಂಡ್‌ನ ಪರ್ವತರೋಹಿ ಎಡ್ಮಂಡ್ ಹಿಲರಿ ಹಾಗೂ ಮಾರ್ಗದರ್ಶಕ ಶೆರ್ಪಾ ತೇನ್‌ಸಿಂಗ್ ನೋರ್ಗೆ ಎವರೆಸ್ಟ್ ಏರಿದ್ದರು. ಈ ಸಂಭ್ರಮಕ್ಕೆ ಈಗ 70 ವರ್ಷಗಳು ತುಂಬಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 15.06.2023 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ (ಅಮರಕಂಟಕ,ಮಯ್ಯಾರ್ ಸಹಿತ).20.06.2023 8ದಿನಗಳು ಕಾಶಿ ನೈಮಿಷಾರಣ್ಯ ಪ್ರಯಾಗ,ಗಯಾ,ಅಯೋಧ್ಯೆ ಇತರೆ.,10.07.2023 12ದಿನಗಳು ಅಮರನಾಥಯಾತ್ರಾ ಲೇ,ಲಡಾಖ್.,23.07.2023 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.20.06.2023 11ದಿನಗಳು ಚಂಡೀಗಡ್ ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ,ದೆಹಲಿ. 8073824856, 6366322639, 9206979202

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ AC ಬಸ್ಸು/ AC ರೂಮ್ 01.06.2023 8 ದಿನಗಳ ಕಾಶಿ,ಬುದ್ಧಗಯಾ ಅಲಹಾಬಾದ್. 08.06.2023 ಚಾರ್‌ಧಾಮ್ ಸಮೇತ ಪ್ರವಾಸ. 10.06.2023 ನೇಪಾಳ ಮುಕ್ತಿನಾಥ,ಪೋಕ್ರಾ. 23.06.2023 ಸೋಮನಾಥ ನಿಷ್ಕಳಂಕಮಹದೇವ ಓಂಕಾರೇಶ್ವರ್ ಮಂಹಾಕಾಳೇಶ್ವರ್. 05.07.2023 14.07.2023 ಅಮರನಾಥ ವೈಷ್ಣೋದೇವಿ,ಕಾಶ್ಮೀರ್ ಗುಲ್ಮಾರ್ಗ್ ಸಂಪರ್ಕಿಸಿ: ವಿಷ್ಣನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 9448508708 9686708171

ಕಾಶಿ ಗಯಾ ಪ್ರಗಯಾ ಪುರಿ,ಕೊನಾರ್ಕ್,ಭುವನೇಶ್ವರ್ 22.05.2023 ರಿಂದ 10 ದಿನಗಳು. ಕಾಶ್ಮೀರ್ ಗುಲ್ ಮಾರ್ಗ್,ಪೆಲ್‌ಗಾಂವ್ ವೈಷ್ಣೋದೇವಿ. 08.06.2023 15.06.2023 ರಿಂದ 9 ದಿನಗಳು. ನೇಪಾಳ,ಮುಕ್ತಿನಾಥ್,ಕಾಶಿ 23.06.2023 ರಿಂದ 10 ದಿನಗಳು. ಸ್ವಯಂಭೂ ಅಮರನಾಥ ಕಾಶ್ಮೀರ್,ವೈಷ್ಣೋದೇವಿ. 05.07.2023 12.07.2023 ರಿಂದ 9 ದಿನಗಳು. ಸಂಪರ್ಕಿಸಿ; 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

10/7/2023 13/17ದಿನಗಳು ರೈಲು/ವಿಮಾನದಲ್ಲಿ ದೆಹಲಿ ಆಗ್ರ ಅಮೃತಸರ ವೈಷ್ಣವದೇವಿ ಅಮರನಾಥ್ ಕಾಶ್ಮೀರ ಕುರುಕ್ಷೇತ್ರ ಇತ್ಯಾದಿ24000/34000/ (ಕೆಲವೇ ಸೀಟುಗಳಿವೆ)'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

19.06.2023 13/16 ದಿನಗಳು ಕಾಶಿ,ನೇಪಾಳ,ಮುಕ್ತಿನಾಥ ಪ್ರವಾಸ.,15.08.2023 14/10 ದಿನಗಳು ಗುಜರಾತ್ ಉಜ್ಜೈನ್ ಒಂಕಾರ್ ಪ್ರವಾಸ., ಆರ್.ಗಾಂಧಿ ಟೂರ್ಸ್(ರಿ) 9945445809/ 9902433500

25/05/2023 ಮತ್ತು 01/06/2023ರಿಂದ ಚಾರುಧಾಮ್,ಹರಿದ್ವಾರ, ಮಸ್ಸೂರಿ-12ದಿನ.ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯೆ ಜನಕಪುರಿ,ಕಾಶಿ,ಪೋಕ್ರಾ-16ದಿನ. 30/06/2023ರಿಂದ ಅಮರ ನಾಥ್ ಯಾತ್ರೆ-9/12ದಿನ. ವಿಮಾನ/AC ಬಸ್ಸಿನಲ್ಲಿ ವಿಷ್ಣನ್ ಟ್ರಾವೆಲ್ ಲೈನ್ಸ್, 8105657052/ 9480182865

EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸ್ (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎಸ್‌ಸಿ, ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ: ಪೊಲೀಸ್ ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

‘ಪ್ರಕರಣ ದಾಖಲಿಸುವಾಗ ಎಚ್ಚರಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಕಠಿಣವಾಗಿದ್ದು, ಆರೋಪಿ ಮೇಲೆ ಗಂಭೀರ ಪರಿಣಾಮ ಬೀರುವಂಥದ್ದಾಗಿದೆ. ಹೀಗಾಗಿ, ಯಾವುದೇ ದೂರಿಗೆ ಸಂಬಂಧಿಸಿ ವಾಸ್ತವಾಂಶಗಳನ್ನು ಪರ್ಯಾಲೋಚಿಸದೇ ಯಾಂತ್ರಿಕವಾಗಿ ಈ ಕಾಯ್ದೆಯಡಿ ಪ್ರಕರಣ ದಾಖಲಿಸಬಾರದು ಎಂದು ಸುಪ್ರೀಂಕೋರ್ಟ್ ಪೊಲೀಸರಿಗೆ ಸೂಚಿಸಿದೆ.

ಅರ್ಜಿಯೊಂದರ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ನ್ಯಾಯಪೀಠ, ‘ತಮ್ಮ ಮುಂದಿರುವ ಪ್ರಕರಣಕ್ಕೆ ಕಾಯ್ದೆಯ ನಿಬಂಧನೆಗಳು ಮೇಲ್ನೋಟಕ್ಕೆ ಅನ್ವಯವಾಗುತ್ತವೆ ಎಂಬುದು ಸಂಬಂಧಪಟ್ಟ ಅಧಿಕಾರಿಗೆ ಮನದಟ್ಟಾಗಬೇಕು’ ಎಂದು ಹೇಳಿದೆ.

ಜಿ.ಎಂ. ಇನ್‌ಫನೈಟ್ ಡ್ವೆಲ್ಲಿಂಗ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಗುಲಾಮ್ ಮುಸ್ತಫಾ ಎಂಬವರ ವಿರುದ್ಧ ಬೆಂಗಳೂರು ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಅನ್ನು ವಜಾಗೊಳಿಸಿದ ನ್ಯಾಯಪೀಠ, ಅವರ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸಿದೆ.

ಯಾವುದೇ ದೂರಿನ ಆಧಾರದ ಮೇಲೆ ವ್ಯಕ್ತಿಯೊಬ್ಬರ ವಿರುದ್ಧ ಎಸ್‌ಸಿ. ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಂತಹ ಕಠಿಣ ಕಾಯ್ದೆಗಳಡಿ ಎಫ್‌ಐಆರ್ ದಾಖಲಿಸುವ ಮುನ್ನ ಎಚ್ಚರಿಕೆಯಿಂದ ಇರಬೇಕಾದ್ದು ಅಧಿಕಾರಿಗಳ ಕರ್ತವ್ಯ’ ಎಂದು ನ್ಯಾಯಪೀಠ ಹೇಳಿದೆ.

‘ಈ ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯ ವ್ಯಕ್ತಪಡಿಸುವ ಅಭಿಪ್ರಾಯಗಳು ಯಾವುದೇ ವಿಶೇಷ/ಕಠಿಣ ಕಾಯ್ದೆ ಅನ್ವಯಿಸುವಿಕೆಯನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇವೆ. ಯಾಂತ್ರಿಕವಾಗಿ ಇಂಥ ಕಾನೂನುಗಳಡಿ ಪ್ರಕರಣ ದಾಖಲಿಸಬಾರದು ಎಂಬುದನ್ನು ಪೊಲೀಸರಿಗೆ ಜ್ಞಾಪಿಸುತ್ತಿದ್ದೇವೆ’ ಎಂದು ನ್ಯಾಯಮೂರ್ತಿಗಳು ಹೇಳಿದರು.

ಬೆಂಗಳೂರು ನಗರದಲ್ಲಿ ಜಮೀನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿ ವೆಂಕಟೇಶ್ ಎಂಬವರೊಂದಿಗೆ ಕಂಪನಿಯು ಒಪ್ಪಂದ ಮಾಡಿಕೊಂಡಿತ್ತು. ಒಪ್ಪಂದದಂತೆ ತಮಗೆ ಪರಿಹಾರ ಸಿಗಲಿಲ್ಲ ಎಂದು ದೂರಿ ವೆಂಕಟೇಶ್ ಅವರು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮುಸ್ತಫಾ ವಿರುದ್ಧ ಸಿವಿಲ್ ದೂರು ದಾಖಲಿಸಿದ್ದರು.

ನಂತರ, ಮುಸ್ತಫಾ ಮೇಲೆ ವಂಚನೆ, ಫೋರ್ಜರಿ ಹಾಗೂ ಎಸ್‌ಸಿ, ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಿದ್ದರು. ಈ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮುಸ್ತಫಾ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

‘ರಾಷ್ಟ್ರಪತಿ ಅಂಕಿತ ಹಾಕಿದ ರಾಜ್ಯದ ಕಾನೂನನ್ನು ಅಸಿಂಧುಗೊಳಿಸುವಂತಿಲ್ಲ’

ನವದೆಹಲಿ: ಒಂದು ವಿಷಯಕ್ಕೆ ಸಂಬಂಧಿಸಿ ರಾಜ್ಯವೊಂದು ರೂಪಿಸುವ ಕಾಯ್ದೆಗೆ ರಾಷ್ಟ್ರಪತಿ ಅಂಕಿತ ಹಾಕಿದ ನಂತರ, ತಾರತಮ್ಯದಿಂದ ಕೂಡಿದೆ ಹಾಗೂ ಗೊತ್ತುಗುರಿಯಿಲ್ಲದ್ದು ಎಂಬ ಆಧಾರದಲ್ಲಿ ಕಾಯ್ದೆಯನ್ನು ಅಸಿಂಧುಗೊಳಿಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಒಂದು ವೇಳೆ, ರಾಜ್ಯದ ಕಾಯ್ದೆಯು ಕೇಂದ್ರದ ಕಾನೂನಿಗೆ ವಿರುದ್ಧವಾಗಿದ್ದರೂ ಕೂಡ ಅದನ್ನು ಅಸಿಂಧುಗೊಳಿಸುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಹಾಗೂ ಸಂಜಯ್ ಕುಮಾರ್ ಅವರಿದ್ದ ನ್ಯಾಯಪೀಠ ಹೇಳಿದೆ. ‘ತಮಿಳುನಾಡು ಹೆದ್ದಾರಿಗಳ ಕಾಯ್ದೆ–2001’ರ ನಿಬಂಧನೆಗಳು, ಕೇಂದ್ರ ಸರ್ಕಾರ ಜಾರಿಗೊಳಿಸಿರುವ ‘ನ್ಯಾಯಯುತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣದಲ್ಲಿ ಪಾರದರ್ಶಕತೆ ಕಾಯ್ದೆ’ಗೆ ವಿರುದ್ಧವಾಗಿದೆ ಎಂದು ದೂರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ನ್ಯಾಯಪೀಠ ತಳ್ಳಿ ಹಾಕಿದೆ.

ಪಟ್ಟಕ್ಕೆ ಪಟ್ಟು: ಆಯ್ಕೆ ಕಗ್ಗಂಟು

ಒಂದನೇ ಪುಟದಿಂದ...

ಕಾಂಗ್ರೆಸ್ ಪಾಳಯದಲ್ಲಿ ಭಾನುವಾರ ಇಡೀ ದಿನ ಸರ್ಕಾರ ರಚನೆಗೆ ಕಸರತ್ತು ನಡೆಯಿತು. ಮುಖ್ಯಮಂತ್ರಿ ಗಾದಿಗೆ ಪೈಪೋಟಿಯಲ್ಲಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಶಿವಕುಮಾರ್ ಅವರ ನಿವಾಸಗಳು ರಾಜಕೀಯ ಚಟುವಟಿಕೆಗಳ ಕೇಂದ್ರಗಳಾದವು.

ಶಾಸಕಾಂಗ ಪಕ್ಷದ ಸಭೆಗೂ ಮೊದಲೇ, ಭಾನುವಾರ ಮಧ್ಯಾಹ್ನ ದೆಹಲಿಗೆ ತೆರಳಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಲ್ಲಿಗೆ ತಲುಪುತ್ತಿದ್ದಂತೆ ಸಿಎಲ್‌ಪಿ ನಾಯಕನ ಆಯ್ಕೆಗೆ ಮೂವರು ವೀಕ್ಷಕರನ್ನು ನಿಯೋಜಿಸಿದ್ದರು. ಚುನಾವಣೆಗೂ ಮೊದಲೇ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಮುಖ್ಯಮಂತ್ರಿ ಹುದ್ದೆಗೆ ಭಾರಿ ಪೈಪೋಟಿ ನಡೆದಿತ್ತು. ಇಬ್ಬರನ್ನು ಸಮಾಧಾನಪಡಿಸಿದ್ದ ಕಾಂಗ್ರೆಸ್ ವರಿಷ್ಠರು, ಒಗ್ಗಟ್ಟಿನಿಂದ ಚುನಾವಣೆ ಎದುರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು.

ಡಿಕೆಶಿ, ಸಿದ್ದರಾಮಯ್ಯ ಪರ ಘೋಷಣೆ: ಸಭೆಗೆ ಹಾಜರಾಗಲು ಶಾಂಗ್ರಿ–ಲಾ ಹೋಟೆಲ್‌ಗೆ ವೀಕ್ಷಕರು ಬರುತ್ತಿದ್ದಂತೆ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬೆಂಬಲಿಗರು, ಅಭಿಮಾನಿಗಳು ತಮ್ಮ ನಾಯಕರ ಪರ ಶಕ್ತಿ ಪ್ರದರ್ಶನ ಮಾಡಿದರು. ಅಲ್ಲದೆ, ಭಾವಚಿತ್ರ ಹಿಡಿದು ಮುಖ್ಯಮಂತ್ರಿ ಮಾಡುವಂತೆ ಘೋಷಣೆ ಕೂಗಿದರು.

ಪ್ರತ್ಯೇಕ ಸಭೆ: ಶಾಸಕಾಂಗ ಸಭೆಗೂ ಮೊದಲು ಸಿದ್ದರಾಮಯ್ಯ ಮತ್ತು ಶಿವಕುಮಾರ್ ತಮ್ಮ ಆಪ್ತ ಶಾಸಕರ ಜೊತೆ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದರು. ಶಾಸಕರಾದ ಎಂ.ಬಿ. ಪಾಟೀಲ, ಕೆ.ಜೆ. ಜಾರ್ಜ್, ಆರ್‌.ವಿ. ದೇಶಪಾಂಡೆ, ಬೈರತಿ ಸುರೇಶ್ ಮುಂತಾದವರ ಜೊತೆ ಸಿದ್ದರಾಮಯ್ಯ ಚರ್ಚೆ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಅಕೋಲಾ: ಎರಡು ಸಮುದಾಯಗಳ ಮಧ್ಯೆ ಘರ್ಷಣೆ

ಅಕೋಲಾ (ಮಹಾರಾಷ್ಟ್ರ) (ಪಿಟಿಐ): ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದ ಪೋಸ್ಟ್ ವಿಚಾರವಾಗಿ ನಗರದಲ್ಲಿ ಎರಡು ಸಮುದಾಯಗಳ ನಡುವೆ ಉಂಟಾದ ಘರ್ಷಣೆಯಲ್ಲಿ ಒಬ್ಬ ಮೃತಪಟ್ಟು, ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್ ಸೇರಿ ಇತರ ಎಂಟು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ನಗರದ ಹಳೆ ಪ್ರದೇಶದಲ್ಲಿ ಶನಿವಾರ ರಾತ್ರಿ ಘರ್ಷಣೆ ನಡೆದಿದ್ದು, ಘಟನೆಗೆ ಸಂಬಂಧಿಸಿ 26 ಜನರನ್ನು ವಶಕ್ಕೆ ಪಡೆಯಲಾಗಿದೆ. ನಾಲ್ಕು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ನೀಮಾ ಅರೋರಾ ಆದೇಶಿಸಿದ್ದಾರೆ.

ಧಾರ್ಮಿಕ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ಎರಡು ಸಮುದಾಯಗಳ ನಡುವಣ ಘರ್ಷಣೆಯು ಹಿಂಸಾಚಾರಕ್ಕೆ ತಿರುಗಿತು. ಗಲಭೆಕೋರರು ಕಲ್ಲು ತೂರಾಟ ನಡೆಸಿದ ವೇಳೆ ಇಬ್ಬರು ಪೊಲೀಸರು ಸೇರಿ ಎಂಟು ಮಂದಿಗೆ ಗಾಯಗಳಾದವು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂದೀಪ್ ಘುಗೆ ಹೇಳಿದ್ದಾರೆ.

ಹಲವು ವಾಹನಗಳಿಗೆ ಹಾನಿಯಾಗಿದೆ. ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ ಉದ್ರಿಕ್ತ ಗುಂಪನ್ನು ಚದುರಿಸಿ, ಪರಿಸ್ಥಿತಿಯನ್ನು ಹತೋಟಿಗೆ ತಂದರು. ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಹಾಕಲಾಗಿದೆ ಎಂದು ಎಎಸ್‌ಪಿ ಮೋನಿಕಾ ರಾವುತ್ ಹೇಳಿದ್ದಾರೆ.

ಆಟೊಗೆ ಬಸ್ ಡಿಕ್ಕಿ; 7 ಮಹಿಳೆಯರ ಸಾವು

ರಾಜಮಹೇಂದ್ರವರ (ಆಂಧ್ರಪ್ರದೇಶ) (ಪಿಟಿಐ): ‘ವೇಗವಾಗಿ ಬಂದ ಖಾಸಗಿ ಬಸ್ಸೊಂದು ಆಟೊರಿಕ್ಷಾಗೆ ಡಿಕ್ಕಿ ಹೊಡೆದಿದ್ದರಿಂದಾಗಿ ಅದರಲ್ಲಿದ್ದ ಏಳು ಮಂದಿ ಮಹಿಳೆಯರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ಭಾನುವಾರ ಮಧ್ಯಾಹ್ನ 3.30ರ ಸುಮಾರಿಗೆ ಘಟನೆ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ತಲ್ಲರೇವು ಬೈಪಾಸ್ ರಸ್ತೆಯಲ್ಲಿ ಈ ದುರಂತ ಸಂಭವಿಸಿದೆ. ಮೃತರೆಲ್ಲರೂ ಹತ್ತಿರದ ಸೀಗಡಿ ಸಾಕಾಣೆ ಕೇಂದ್ರದಲ್ಲಿ ಕೂಲಿ ಕಾರ್ಮಿಕರಾಗಿದ್ದರು. ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಆಟೊ ಚಾಲಕ ಪರಾರಿಯಾಗಿದ್ದಾನೆ’ ಎಂದು ಹೇಳಿದ್ದಾರೆ.

ಉತ್ತರ ಪ್ರದೇಶ: 3,130 ಪಕ್ಷೇತರ ಅಭ್ಯರ್ಥಿಗಳ ಗೆಲುವು

ಲಖನೌ (ಪಿಟಿಐ): ಉತ್ತರ ಪ್ರದೇಶದ ನಗರಸಭೆಗಳ 5,327 ವಾರ್ಡ್‌ಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 3,130 ಪಕ್ಷೇತರ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಬಿಜೆಪಿ 1,360 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿರುವ ಸಮಾಜವಾದಿ ಪಕ್ಷ– 425, ಬಿಎಸ್‌ಪಿ–191, ಕಾಂಗ್ರೆಸ್–91, ಆರ್‌ಎಲ್‌ಡಿ–40, ಎಐಎಂಐಎ–33 ಹಾಗೂ ಎಎಪಿ 30 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿವೆ.

ಪಟ್ಟಣಪಂಚಾಯಿತಿಗಳ 544 ಅಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕೂಡ ಪಕ್ಷೇತರರು ಉತ್ತಮ ಸಾಧನೆ ದಾಖಲಿಸಿದ್ದು, 195 ಸ್ಥಾನಗಳಲ್ಲಿ ಗೆದ್ದಿದ್ದಾರೆ. 191 ಸ್ಥಾನಗಳು ಬಿಜೆಪಿ ಪಾಲಾಗಿವೆ. ಸಮಾಜವಾದಿ ಪಕ್ಷ– 78, ಬಿಎಸ್‌ಪಿ–37 ಹಾಗೂ ಕಾಂಗ್ರೆಸ್ 14 ಸ್ಥಾನಗಳಲ್ಲಿ ಗೆದ್ದಿದೆ.

ಗೆಲುವು: ‘ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷವು 395 ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಈ ಪೈಕಿ 40 ಅಭ್ಯರ್ಥಿಗಳು ಗೆದ್ದಿದ್ದಾರೆ’ ಎಂದು ಬಿಜೆಪಿಯ ರಾಜ್ಯ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಕುಂವರ್ ಬಾಸಿತ್ ಅಲಿ ಹೇಳಿದ್ದಾರೆ.

ತಮಿಳುನಾಡು: ಕಳ್ಳಬಟ್ಟಿ ಮದ್ಯ ಕುಡಿದು ಐವರ ಸಾವು

ವಿಲ್ಲುಪುರ (ತಮಿಳುನಾಡು) (ಪಿಟಿಐ): ‘ರಾಜ್ಯದ ಮರಕ್ಕನಂ ತಾಲ್ಲೂಕಿನ ಇಕ್ಕಿಯಾಕುಪ್ಪಂನಲ್ಲಿ ಶನಿವಾರ ರಾತ್ರಿ ಕಳ್ಳಬಟ್ಟಿ ಮದ್ಯ ಕುಡಿದು ಮಹಿಳೆ ಸಹಿತ ಐವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಭಾನುವಾರ ತಿಳಿಸಿದರು.

‘ಈ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ’ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಪೈಲಟ್ ಪಾದಯಾತ್ರೆಗೆ ಭಾರಿ ಜನ ಬೆಂಬಲ

ಜೈಪುರ (ಪಿಟಿಐ): ಭ್ರಷ್ಟಾಚಾರ ಹಾಗೂ ರಾಜಸ್ಥಾನದಲ್ಲಿನ ತಮ್ಮದೇ ಸರ್ಕಾರದ ಅವಧಿಯಲ್ಲಿ ನಡೆದಿರುವ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ನಡೆಸುತ್ತಿರುವ ‘ಜನ ಸಂಘರ್ಷ ಯಾತ್ರೆಗೆ’ ನಾಲ್ಕನೇ ದಿನವೂ ಭಾರಿ ಜನ ಬೆಂಬಲ ದೊರೆತಿದೆ.

ಕಾರ್ಯಕರ್ತರು ಸಚಿನ್ ಪೈಲಟ್ ಅವರನ್ನು ಭುಜದ ಮೇಲೆ ಹೊತ್ತು ಸಂಭ್ರಮಿಸಿದರು –ಟ್ವಿಟರ್ ಚಿತ್ರ

ಪೈಲಟ್ ಅವರು ಭಾನುವಾರ ಒಟ್ಟು 25 ಕಿ.ಮೀ ಪಾದಯಾತ್ರೆ ನಡೆಸಿದ್ದಾರೆ. ಜೈಪುರ ಜಿಲ್ಲೆಯ ಮೆಹಲಾ ನಗರದಿಂದ ಆರಂಭವಾಗಿ ಮಹಾಪುರದತ್ತ ಸಾಗಿದ ಕಾಲ್ನಡಿಗೆಯಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. ಯಾತ್ರೆ ಹಾದು ಹೋದ ಮಾರ್ಗದಲ್ಲೆಲ್ಲಾ ಕಾಂಗ್ರೆಸ್ ಪಕ್ಷದ ಬಾವುಟಗಳು ರಾರಾಜಿಸಿದವು.

ಸೋಮವಾರ ಯಾತ್ರೆ ಅಂತ್ಯಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ಕಮಲಾ ನೆಹರೂ ನಗರದ ಸಮೀಪ ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಸಭೆಯನ್ನು ಉದ್ದೇಶಿಸಿ ಪೈಲಟ್ ಮಾತನಾಡಲಿದ್ದಾರೆ.

‘ಯಾತ್ರೆಗೆ ನಾಗರಿಕರಿಂದ ಭಾರಿ ಬೆಂಬಲ ವ್ಯಕ್ತವಾಗುತ್ತಿದೆ. ಯುವಕರು, ಹಿರಿಯರು ಹೀಗೆ ಎಲ್ಲರೂ ನನ್ನೊಂದಿಗೆ ಹೆಜ್ಜೆ ಹಾಕುತ್ತಿದ್ದಾರೆ’ ಎಂದು ಪೈಲಟ್ ಹೇಳಿದ್ದಾರೆ.

ಆರೋಪ ತಳ್ಳಿ ಹಾಕಿದ ಗೆಹಲೋತ್: ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಜೊತೆ ತಾವು ಒಳ ಒಪ್ಪಂದ ಮಾಡಿಕೊಂಡಿರುವ ಕುರಿತು ಕೇಳಿಬಂದಿರುವ ಆರೋಪವನ್ನು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ತಳ್ಳಿ ಹಾಕಿದ್ದಾರೆ.

ಈ ಸಂಬಂಧ ಶನಿವಾರ ಮಾತನಾಡಿರುವ ಅವರು, ‘ರಾಜೆ ಅವರೊಂದಿಗೆ 15 ವರ್ಷಗಳಲ್ಲಿ ಹೆಚ್ಚೆಂದರೆ 15 ಬಾರಿಯಷ್ಟೇ ಮಾತನಾಡಿದ್ದೇನೆ’ ಎಂದಿದ್ದಾರೆ.

‘ಸಚಿನ್ ಪೈಲಟ್ ಸೇರಿದಂತೆ ಪಕ್ಷದ ಇತರೆ ಶಾಸಕರು ನನ್ನ ನಾಯಕತ್ವದ ವಿರುದ್ಧ ಬಂಡಾಯ ಸಾರಿದ್ದಾಗ ಬಿಜೆಪಿ ನಾಯಕಿ ವಸುಂಧರಾ ಹಾಗೂ ಆ ಪಕ್ಷದ ನಾಯಕ ಕೈಲಾಶ್ ಮೇಘವಾಲ್ ಅವರು ನನ್ನ ನೇತೃತ್ವದ ಕಾಂಗ್ರೆಸ್ ಸರ್ಕಾರ ಉಳಿಸಲು ನೆರವಾಗಿದ್ದಾಗಿ ಧೋಲಾಪುರದಲ್ಲಿ ನಡೆದಿದ್ದ ಸಭೆಯ ವೇಳೆ ನುಡಿದಿದ್ದೆ. ನನ್ನ ಈ ಹೇಳಿಕೆಯನ್ನು ಜನರು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ವಸುಂಧರಾ ಅವರು ನನ್ನ ಬಳಿ ಬಂದು ನಿಮ್ಮ ಬೆಂಬಲಕ್ಕೆ ನಿಲ್ಲುವುದಾಗಿ ಯಾವತ್ತೂ ಹೇಳಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

> ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಅದಕ್ಕೆ ಆಸ್ಪದವನ್ನೂ ನೀಡುವುದಿಲ್ಲ
> **ಅಶೋಕ್ ಗೆಹಲೋತ್,** ರಾಜಸ್ಥಾನ ಮುಖ್ಯಮಂತ್ರಿ

> ರಾಜಸ್ಥಾನ ಸರ್ಕಾರ ಭ್ರಷ್ಟರ ವಿರುದ್ಧ ಕೈಗೊಂಡ ಕ್ರಮವು ಸಚಿನ್ ಪೈಲಟ್ ಹೊರತುಪಡಿಸಿ ಎಲ್ಲರಿಗೂ ಗೋಚರಿಸುತ್ತದೆ
> **ಲೋಕೇಶ್ ಶರ್ಮಾ,** ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯ ಅಧಿಕಾರಿ

ಬ್ರಹ್ಮೋಸ್ ಕ್ಷಿಪಣಿ ಪರೀಕ್ಷಾರ್ಥ ಉಡಾವಣೆ ಯಶಸ್ವಿ

ನವದೆಹಲಿ (ಪಿಟಿಐ): ‘ಭಾರತೀಯ ನೌಕಾಪಡೆ ನಡೆಸಿದ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆಯು ಯಶಸ್ವಿಯಾಗಿದೆ’ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಭಾರತೀಯ ನೌಕಾಪಡೆಗೆ ಹೊಸದಾಗಿ ಸೇರ್ಪಡೆಯಾಗಿರುವ, ಸ್ವದೇಶಿ ನಿರ್ಮಿತ ಕ್ಷಿಪಣಿ ನಾಶಕ ಯುದ್ಧನೌಕೆ ಐಎನ್‌ಎಸ್ ಮರ್ಮುಗಾವೊ ಮೂಲಕ ಇದೇ ಮೊದಲ ಬಾರಿಗೆ ಬ್ರಹ್ಮೋಸ್ ಕ್ಷಿಪಣಿಯನ್ನು ಉಡಾವಣೆ ಮಾಡಲಾಗಿದೆ. ಅದು ನಿಖರವಾಗಿ ಗುರಿ ತಲುಪಿದೆ. ಇದು ರಕ್ಷಣಾ ಕ್ಷೇತ್ರದಲ್ಲಿ ದೇಶವು ಸ್ವಾವಲಂಬನೆ ಸಾಧಿಸುತ್ತಿರುವುದರ ದ್ಯೋತಕವಾಗಿದೆ. ನೌಕಾಪಡೆಯ ಶಕ್ತಿಯನ್ನೂ ಅನಾವರಣಗೊಳಿಸಿದೆ’ ಎಂದು ನೌಕಾಪಡೆಯ ಅಧಿಕಾರಿಗಳು ಹೇಳಿದ್ದಾರೆ.

ಪೊಲೀಸ್ ಕೊಂದವರ ಎನ್‌ಕೌಂಟರ್

ಜಲೌನ (ಉತ್ತರ ಪ್ರದೇಶ) (ಪಿಟಿಐ): ಬೆನ್ನಟ್ಟಿ ಬರುತ್ತಿದ್ದ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರನ್ನು ಹತ್ಯೆಮಾಡಿದ ಪ್ರಕರಣದ ಇಬ್ಬರು ಆರೋಪಿಗಳನ್ನು ಉತ್ತರ ಪ್ರದೇಶದ ಜಲೌನದಲ್ಲಿ ಪೊಲೀಸರು ಭಾನುವಾರ ಎನ್‌ಕೌಂಟರ್ ಮಾಡಿದ್ದಾರೆ ಎಂದು ವಿಶೇಷ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

ಪೊಲೀಸ್ ಕಾನ್‌ಸ್ಟೆಬಲ್ ಭೇಡ್‌ಜೀತ್ ಸಿಂಗ್ ಅವರನ್ನು ಗುಂಡು ಹಾರಿಸಿ ಹತ್ಯೆ ಮಾಡಿದ್ದ ಪ್ರಕರಣದ ಆರೋಪಿಗಳಾದ ಉಮೇಶ್ ಚಂದ್ರ ಅಲಿಯಾಸ್ ಕಲ್ಲೂ ಮತ್ತು ರಮೇಶ್ ಎಂಬುವವರು ಎನ್‌ಕೌಂಟರ್‌ನಲ್ಲಿ ಸಾವನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ.

ಕಾಡಂಚಿನ ಗ್ರಾಮದಲ್ಲಿ ನಕ್ಸಲರ ತಂಡ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗಿನ ಗಡಿಗೆ 20 ಕಿ.ಮೀ. ದೂರದ ಕೇರಳದ ಕಾಡಂಚಿನ ಗ್ರಾಮದ ಮನೆ ಒಂದರಲ್ಲಿ ಐವರು ನಕ್ಸಲರ ತಂಡ ಊಟ ಮಾಡಿ ಹೋಗಿದೆ.

‘ಕಣ್ಣೂರು ಜಿಲ್ಲೆಯ ಕಲ್ಲಿತ್ತ ಪುನ್ನುಪಾರ ಎಂಬಲ್ಲಿ ಬಿಜು ಎಂಬುವವರ ಮನೆಗೆ ಬಂದ ಮಹಿಳೆ, ನಾಲ್ವರು ಪುರುಷರ ತಂಡವು ಮನೆಯವರನ್ನು ಬೆದರಿಸಿ ಊಟ ಮಾಡಿದೆ. ಪವರ್ ಬ್ಯಾಂಕ್ ಮತ್ತು 3 ಮೊಬೈಲ್‌ಗಳನ್ನು ಚಾರ್ಜ್ ಮಾಡಿಕೊಂಡು, 4 ಕೆ.ಜಿ. ಅಕ್ಕಿ, ತರಕಾರಿಗಳನ್ನು ತೆಗೆದುಕೊಂಡು ಹೊರಟಿದೆ. ಮೊಯಿದ್ದೀನ್, ಸಂತೋಷ್, ರಮೇಶ್ ಹಾಗೂ ಜಿಶಾ ಸೇರಿ ಐವರಿದ್ದರು. ಅವರ ಬಳಿ ಶಸ್ತ್ರಗಳಿದ್ದವು’ ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನ ಧ್ವಜ ಅಲ್ಲ: ಎಸ್ಪಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಕಾರವಾರ: ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶನಿವಾರ ನಡೆದ ಸಂಭ್ರಮಾಚರಣೆ ವೇಳೆ ಜಿಲ್ಲೆಯ ಭಟ್ಕಳ ಮತ್ತು ಶಿರಸಿಯಲ್ಲಿ ಹಸಿರು ಧ್ವಜ ಹಾರಾಡಿರುವುದು ಚರ್ಚೆಗೆ ಎಡೆಮಾಡಿಕೊಟ್ಟಿದೆ.

ಈ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು ಕೆಲವರು ಪಾಕಿಸ್ತಾನ ಧ್ವಜ ಹಾರಿಸಲಾಗಿದೆ ಎಂದು ಟೀಕಿಸಿದ್ದಾರೆ. ಆದರೆ, ಅವು ಪಾಕಿಸ್ತಾನದ ಧ್ವಜ ಅಲ್ಲ, ಮುಸ್ಲಿಂ ಸಮುದಾಯದವರು ಮೆರವಣಿಗೆ ವೇಳೆ ಹಾರಿಸುವ ಧ್ವಜ ಎಂಬುದಾಗಿ ಕೆಲವರು ಸಾಮಾಜಿಕ ಜಾಲತಾಣದ ಪೋಸ್ಟ್‌ಗೆ ಸ್ಪಷ್ಟನೆ ನೀಡಿದ್ದಾರೆ.

ಭಟ್ಕಳ ಪಟ್ಟಣದಲ್ಲಿ ಮಂಕಾಳ ವೈದ್ಯ ಬೆಂಬಲಿಗರು ನಡೆಸಿದ್ದ ಸಂಭ್ರಮಾಚರಣೆ ವೇಳೆ ಶಂಶುದ್ದಿನ್ ವೃತ್ತದಲ್ಲಿ ಯುವಕನೊಬ್ಬ ಅರ್ಧ ಚಂದ್ರಾಕೃತಿ, ನಕ್ಷತ್ರದ ಚಿತ್ರವಿದ್ದ ಹಸಿರು ಬಣ್ಣದ ಧ್ವಜ ಹಾರಿಸಿದ್ದ. ಪಕ್ಕದಲ್ಲಿಯೇ ಕೇಸರಿ ಬಣ್ಣದ ಧ್ವಜ, ನೀಲಿ ಧ್ವಜಗಳು ಹಾರಾಡಿದ್ದವು. ಇದೇ ಮಾದರಿಯ ಧ್ವಜ ಶಿರಸಿಯಲ್ಲಿ ಭೀಮಣ್ಣ ನಾಯ್ಕ ಗೆಲುವು ಸಾಧಿಸುತ್ತಿದ್ದಂತೆ ನಡೆದ ಸಂಭ್ರಮಾಚರಣೆಯಲ್ಲೂ ಹಾರಾಡಿದೆ.

ಭಟ್ಕಳ ಪಟ್ಟಣದ ಶಂಶುದ್ದಿನ್ ವೃತ್ತದಲ್ಲಿ ಯುವಕನೊಬ್ಬ ಹಸಿರು ಧ್ವಜ ಹಾರಿಸಿರುವುದು

‘ಭಟ್ಕಳ ಮತ್ತು ಶಿರಸಿಯಲ್ಲಿ ಹಾರಿಸಲಾಗಿದ್ದ ಧ್ವಜಗಳು ಪಾಕಿಸ್ತಾನದ ಧ್ವಜ ಆಗಿರಲಿಲ್ಲ ಎಂಬ ಮಾಹಿತಿ ಸಿಕ್ಕಿದೆ. ಜನರು ವದಂತಿಗಳಿಗೆ ಕಿವಿಗೊಡುವ ಅಗತ್ಯವಿಲ್ಲ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ಪ್ರತಿಕ್ರಿಯಿಸಿದ್ದಾರೆ.

‘ಪಾಕಿಸ್ತಾನ್ ಜಿಂದಾಬಾದ್ ವಿಡಿಯೊ ನಕಲಿ’

ಬೆಳಗಾವಿ: ‘ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ‘ಪಾಕಿಸ್ತಾನ್ ಜಿಂದಾಬಾದ್’ ಎಂದು ಕೆಲವರು ಘೋಷಣೆ ಕೂಗಿದ ವಿಡಿಯೊ ನಕಲಿಯಾಗಿದೆ. ಬಿಜೆಪಿಯ ಕೆಲವರು ಇಂತಹ ಕೆಲಸ ಮಾಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಸಹ ಇದನ್ನೇ ಮಾಡಿದ್ದರು’ ಎಂದು ಉತ್ತರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿರುವ ಆಸೀಫ್(ರಾಜು) ಸೇಠ್ ದೂರಿದರು.

ಬೆಳಗಾವಿಯ ಆರ್‌ಪಿಡಿ ಕಾಲೇಜು ವೃತ್ತದಲ್ಲಿ ಕೆಲವರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಚಾರವಾಗಿ ಭಾನುವಾರ ಸುದ್ದಿಗಾರರಿಗೆ ಹೀಗೆ ಪ್ರತಿಕ್ರಿಯಿಸಿದರು.

‘ಕಿಡಿಗೇಡಿಗಳು ನಮ್ಮ ವಿರುದ್ಧ ಪಿತೂರಿ ಮಾಡಿದ್ದಾರೆ. ಈ ಸಂಬಂಧ ನಗರ ಪೊಲೀಸ್ ಆಯುಕ್ತರನ್ನು ಭೇಟಿಯಾಗಿ ಚರ್ಚಿಸುತ್ತೇನೆ. ಮಾನನಷ್ಟ ಮೊಕದ್ದಮೆ ಹೂಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಅಧಿಕಾರವಧಿಯಲ್ಲಿ ಯಾರೇ ಭಾರತಕ್ಕೆ ಅಗೌರವ ತೋರಿ, ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಬಿಡುವುದಿಲ್ಲ’ ಎಂದರು.

‘ಜಗದೀಶ ಶೆಟ್ಟರ್ ನಮ್ಮ ಹಿರಿಯರು. ಅವರು ಬೆಳಗಾವಿಗೆ ಬಂದು ಪ್ರಚಾರ ಮಾಡಿದ್ದರಿಂದ ನಾನು ಗೆದ್ದೆ. ಅವರೂ ಗೆಲ್ಲಬೇಕಿತ್ತು. ಜಗದೀಶ ಶೆಟ್ಟರ್ ಅವರ ಸೋಲು ನನಗೆ ಅತೀವ ಬೇಸರ ತರಿಸಿದೆ. ಅವರೊಂದಿಗೆ ನಮ್ಮ ಪಕ್ಷ ಯಾವಾಗಲೂ ಇರುತ್ತದೆ’ ಎಂದು ತಿಳಿಸಿದರು.

ಪ್ರವೀಣ್ ಸೂದ್ ಸಿಬಿಐ ನಿರ್ದೇಶಕ

ಒಂದನೇ ಪುಟದಿಂದ...

ಇವರ ಕಾರ್ಯವೈಖರಿ ಮೆಚ್ಚಿದ್ದ ಕೇಂದ್ರ ಸರ್ಕಾರ, ಇದೀಗ ಸಿಬಿಐ ನಿರ್ದೇಶಕ ಹುದ್ದೆಗೆ ನೇಮಕ ಮಾಡಿ ಭಾನುವಾರ ಆದೇಶ ಹೊರಡಿಸಿದೆ.

ನೇಮಕದ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಇದು ಅನಿರೀಕ್ಷಿತ ನೇಮಕ. ಕೊಟ್ಟ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತೇನೆ. ಸದ್ಯದ ನಿರ್ದೇಶಕರ ಅಧಿಕಾರಾವಧಿ ಮೇ 25ಕ್ಕೆ ಮುಗಿಯಲಿದೆ. ಅದಾದ ನಂತರವೇ ದೆಹಲಿಗೆ ಹೋಗಿ ಅಧಿಕಾರ ಸ್ವೀಕರಿಸುತ್ತೇನೆ’ ಎಂದರು.

58 ವರ್ಷ ವಯಸ್ಸಿನ ಪ್ರವೀಣ್, ಮುಂದಿನ ಎರಡು ವರ್ಷ ಸಿಬಿಐ ನಿರ್ದೇಶಕರಾಗಿ ಕೆಲಸ ಮಾಡಿ ನಿವೃತ್ತಿ ಹೊಂದಲಿದ್ದಾರೆ.

ಅಲೋಕ್ ಮೋಹನ್ ಹಿರಿಯ: ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಅಲೋಕ್ ಮೋಹನ್ ಅವರು ರಾಜ್ಯದ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದು, ಡಿಜಿ–ಐಜಿಪಿ ಹುದ್ದೆಗೆ ಅರ್ಹತೆ ಪಡೆದಿದ್ದಾರೆ. ಇವರನ್ನೇ ನೇಮಕ ಮಾಡುವ ಸಾಧ್ಯತೆ ಇದೆ.

ಬಿಹಾರ ರಾಜ್ಯದ ಪಟ್ನಾದ ಅಲೋಕ್ ಮೋಹನ್, 1987ನೇ ತಂಡದ ಐಪಿಎಸ್ ಅಧಿಕಾರಿ. ಎಂ.ಎಸ್ಸಿ ಹಾಗೂ ಎಂ.ಫಿಲ್ ಪದವೀಧರ. ಇವರ ನಂತರದ ಸ್ಥಾನದಲ್ಲಿ ಕಮಲ್ ಪಂಥ್ ಹಾಗೂ ಡಾ.ಪಿ. ರವೀಂದ್ರನಾಥ್ ಇದ್ದಾರೆ.

22ನೇ ವಯಸ್ಸಿಗೆ ಐಪಿಎಸ್

ಹಿಮಾಚಲ ಪ್ರದೇಶದ ಕಂಗ್ರಾ ಜಿಲ್ಲೆಯ ಓಂಪ್ರಕಾಶ್ ಸೂದ್ ಅವರ ಮಗನಾದ ಪ್ರವೀಣ್, ದೆಹಲಿ ಐಐಟಿಯಲ್ಲಿ ಬಿ.ಟೆಕ್ (ಸಿವಿಲ್ ಎಂಜಿನಿಯರ್) ಪದವಿ ಪಡೆದಿದ್ದಾರೆ. ಬೆಂಗಳೂರಿನ ಐಐಎಂ ಹಾಗೂ ನ್ಯೂಯಾರ್ಕ್‌ನ ಸಿರಾಕ್ಯೂಸ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ್ದಾರೆ.

ಬಿ.ಟೆಕ್ ಮುಗಿಯುತ್ತಿದ್ದಂತೆ ಯುಪಿಎಸ್ಸಿ ಪರೀಕ್ಷೆ ಎದುರಿಸಿದ್ದ ಪ್ರವೀಣ್, 22ನೇ ವಯಸ್ಸಿಗೆ ಐಪಿಎಸ್ ಅಧಿಕಾರಿಯಾಗಿದ್ದರು.

1986ನೇ ತಂಡದ ಅಧಿಕಾರಿಯಾದ ಸೂದ್, ನಂಜನಗೂಡು ಉಪ ವಿಭಾಗದ ಎಎಸ್ಪಿಯಾಗಿ ವೃತ್ತಿ ಆರಂಭಿಸಿದ್ದರು. ಬಳ್ಳಾರಿ, ರಾಯಚೂರು, ಬೆಂಗಳೂರಿನಲ್ಲಿ ಕೆಲಸ ಮಾಡಿದ್ದಾರೆ. ಸಿಐಡಿ ಡಿಜಿಪಿಯೂ ಆಗಿದ್ದರು.

‘ನಾಲಾಯಕ್’ ಎಂದಿದ್ದ ಡಿಕೆಶಿ: ಕೇಂದ್ರದ ತಂತ್ರ?

‘ಬಿಜೆಪಿ ಸರ್ಕಾರದ ಪರ ಕೆಲಸ ಮಾಡುತ್ತಿರುವ ಡಿಜಿ–ಐಜಿಪಿ ಪ್ರವೀಣ್ ಸೂದ್, ಒಬ್ಬ ನಾಲಾಯಕ್’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವ ಕುಮಾರ್ ಮಾರ್ಚ್ 15ರಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದರು.

‘ಪ್ರವೀಣ್ ಸೂದ್ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಒಂದೇ ಹುದ್ದೆಯಲ್ಲಿ ಅವರನ್ನು ಇಟ್ಟುಕೊಂಡು ಪೂಜೆ ಮಾಡುತ್ತೀರಾ? ಕಾಂಗ್ರೆಸ್‌ನವರ ಮೇಲೆ 25ಕ್ಕೂ ಹೆಚ್ಚು ಪ್ರಕರಣ ದಾಖಲಿಸಿದ್ದಾರೆ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ, ಅವರ ವಿರುದ್ಧ ಕ್ರಮ ಜರುಗಿಸುವುದು ಖಚಿತ’ ಎಂದು ಶಿವಕುಮಾರ್ ಗುಡುಗಿದ್ದರು.

ಇದಾದ ಕೆಲವೇ ದಿನಗಳಲ್ಲಿ ಸಿಬಿಐ ನಿರ್ದೇಶಕರ ಹುದ್ದೆಗೆ ಪ್ರವೀಣ್ ಸೂದ್ ಹೆಸರು ಶಿಫಾರಸು ಆಗಿತ್ತು. ಇದೀಗ, ಅವರನ್ನೇ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ರಾಜ್ಯದಲ್ಲಿ ಸದ್ಯ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಪ್ರವೀಣ್ ಸೂದ್ ನೇತೃತ್ವದ ‘ಸಿಬಿಐ’ ಬಳಸಿ ಹಳೇ ಪ್ರಕರಣಗಳಲ್ಲಿ ಶಿವಕುಮಾರ್ ಹಾಗೂ ಕಾಂಗ್ರೆಸ್‌ನ ಇತರ ಮುಖಂಡರನ್ನು ಹಣಿಯಲು ಕೇಂದ್ರ ಸರ್ಕಾರ ತಂತ್ರ ರೂಪಿಸಿದೆ ಎಂಬ ಮಾತುಗಳು ಕೇಳಿಬಂದಿವೆ.

ಕಣ್ಣೂರು ವಿ.ವಿಯ ಬಹುಭಾಷಾ ಅಧ್ಯಯನ ಕೇಂದ್ರದ ಯೋಜನೆ

ಕಲ್ಪವೃಕ್ಷದ ನಾಡಿನಲ್ಲಿ ತುಳು, ಹವ್ಯಕ ಪದವೃಷ್ಟಿ

• ವಿಕ್ರಂ ಕಾಂತಿಕೆರೆ

ಮಂಗಳೂರು: ಕನ್ನಡ ಮತ್ತು ಅದರ ಸಹೋದರ ಭಾಷೆಗಳಾದ ತುಳು, ಹವ್ಯಕ ಪದಗಳ ಭಂಡಾರ ಕೆಲವೇ ತಿಂಗಳಲ್ಲಿ ಕೇರಳದ ಭಾಷಾಪ್ರಿಯರ ಕೈ ಸೇರಲಿದೆ.

ಕಣ್ಣೂರು ವಿಶ್ವವಿದ್ಯಾಲಯದ ಬಹುಭಾಷಾ ಅಧ್ಯಯನ ಕೇಂದ್ರ ಕೈಗೆತ್ತಿಕೊಂಡಿರುವ ಮಲಯಾಳಂ ಸೇರಿದಂತೆ ಚತುರ್ಭಾಷಾ ನಿಘಂಟುವಿನಲ್ಲಿ ರಾಜ್ಯದ ಮೂರು ಭಾಷೆಗಳನ್ನು ಸೇರಿಸಲಾಗಿದ್ದು ಒಟ್ಟು ಭಾರತದಲ್ಲೇ ಮೊದಲು ಎನ್ನಲಾಗುವ ಬಹುಭಾಷಾ ಅಧ್ಯಯನ ಕೇಂದ್ರ ಕಾಸರಗೋಡು ವಿದ್ಯಾನಗರದಲ್ಲಿ ಆರಂಭಗೊಂಡಿದೆ. ಇದರ ಅಧಿಕೃತ ಉದ್ಘಾಟನೆ ಜೂನ್ ತಿಂಗಳಲ್ಲಿ ಆಗಲಿದೆ. ಇದರ ಹಿನ್ನೆಲೆಯಲ್ಲಿ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಕನ್ನಡ, ತುಳು ಮತ್ತು ಬ್ಯಾರಿ ಭಾಷೆಗಳಿಗೆ ಸಂಬಂಧಿಸಿ ಬೃಹತ್ ಯೋಜನೆಗಳನ್ನು ಕಾರ್ಯಗತಗೊಸಿರುವ ಕಣ್ಣೂರು ವಿಶ್ವವಿದ್ಯಾಲಯ ಮಲಯಾಳಂ ವಿಭಾಗದ ನಿವೃತ್ತ ಮುಖ್ಯಸ್ಥ ಎ.ಎಂ. ಶ್ರೀಧರನ್ ಈ ಕೇಂದ್ರದ ನಿರ್ದೇಶಕರಾಗಿದ್ದು ಅವರ ನೇತೃತ್ವದಲ್ಲೇ ನಿಘಂಟು ಸಿದ್ಧಗೊಳ್ಳುತ್ತಿದೆ. ನಾಲ್ಕೂ ಭಾಷೆಗಳ ಪದಗಳು ಮತ್ತು ಅದರ ಮಲಯಾಳಂ ಅರ್ಥ ಒಂದೇ ಪುಸ್ತಕದಲ್ಲಿ ಲಭ್ಯವಾಗುವುದು ಈ ನಿಘಂಟುವಿನ ವೈಶಿಷ್ಟ್ಯ.



> **ತುಳು, ಬ್ಯಾರಿ ಭಾಷಾ ನಿಘಂಟು ಸಿದ್ಧಗೊಳಿಸಿದ್ದೇನೆ. ಈಗ ತುಳು ಒಳಗೊಂಡಂತೆ 4 ಭಾಷೆಗಳ ಪದಗಳು ಒಂದೇ ಪುಸ್ತಕದಲ್ಲಿ ಲಭ್ಯ ಆಗಲಿವೆ**
> **ಎ.ಎಂ.ಶ್ರೀಧರನ್,** ಬಹುಭಾಷಾ ಅಧ್ಯಯನ ಕೇಂದ್ರದ ನಿರ್ದೇಶಕ

‘ಕಾಸರಗೋಡು ಸಪ್ತ ಭಾಷೆಗಳ ಸಂಗಮ ಸ್ಥಳ. ಹೀಗಾಗಿ ಏಳು ಭಾಷೆಗಳ ನಿಘಂಟು ಸಿದ್ಧಗೊಳಿಸಲು ನಿರ್ಧರಿಸಲಾಗಿದೆ. ಅದರ ಮೊದಲ ಹೆಜ್ಜೆ ಚತುರ್ಭಾಷಾ ನಿಘಂಟು. ಕನ್ನಡ ಮತ್ತು ತುಳುವಿನ ಬಗ್ಗೆ ಮಲಯಾಳಿಗಳಿಗೆ ಸಾಕಷ್ಟು ಮಾಹಿತಿ ಇದೆ. ಆದರೆ ಹವ್ಯಕ, ಕರ್ಹಾಡ ಮುಂತಾದ ಭಾಷೆಗಳ ಮತ್ತು ಆ ಭಾಷೆಯನ್ನಾಡುವ ಜನರ ಸಂಸ್ಕೃತಿ ಬಗ್ಗೆ ಹೆಚ್ಚು ಗೊತ್ತಿಲ್ಲ. ಇಂಥ ಅಪರೂಪದ ಭಾಷೆಗಳ ಪದಗಳನ್ನು ಉಳಿಸಲು ಕೇಂದ್ರ ಆಸ್ಥೆ ವಹಿಸಿದೆ. ಈಗ ಆದ್ಯತೆ ಮೇರೆಗೆ ಹವ್ಯಕವನ್ನು ಪರಿಗಣಿಸಲಾಗಿದೆ’ ಎಂದು ಹೇಳುತ್ತಾರೆ ಎ.ಎಂ. ಶ್ರೀಧರನ್.

ನಿಘಂಟುವಿಗಾಗಿ ಪದಗಳ ಸಂಗ್ರಹ ಕಾರ್ಯ ಪೂರ್ಣಗೊಂಡಿದ್ದು ಅವುಗಳನ್ನು ಅಕಾರಾದಿಯಾಗಿ ಹೊಂದಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ ಎಂದು ಅವರು ವಿವರಿಸಿದರು.

ಶ್ರೀಧರನ್ 2012ರಲ್ಲಿ ಯುಜಿಸಿ ಅನುದಾನದಲ್ಲಿ ಬ್ಯಾರಿ ಭಾಷೆಯ ನಿಘಂಟು ಸಿದ್ಧಗೊಳಿಸಿದ್ದರು. ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಂಚರಿಸಿ 16 ಸಾವಿರ ಪದಗಳನ್ನು ಕಲೆ ಹಾಕಿದ್ದರು. ಇದನ್ನು ಕೇರಳ ಜಾನಪದ ಅಕಾಡೆಮಿ ಪ್ರಕಟಿಸಿತ್ತು. 2016ರಲ್ಲಿ ಸಿದ್ಧಗೊಳಿಸಿದ 80 ಸಾವಿರ ಪದಗಳ ತುಳು–ಮಲಯಾಳಂ ನಿಘಂಟುವನ್ನು ಕೋಟಯಂನ ‘ಸಾಹಿತ್ಯ ಪ್ರವರ್ತಕ ಸಹಕರಣ ಸೊಸೈಟಿ’ ಪ್ರಕಟಿಸಿತ್ತು. 600 ಪುಟಗಳ ತುಳುನಾಡಿನ ಜಾನಪದ ಇತಿಹಾಸ ಕೃತಿಯನ್ನು ಕೇರಳ ಭಾಷಾ ಇನ್‌ಸ್ಟಿಟ್ಯೂಟ್ ಪ್ರಕಟಿಸಿತ್ತು.

‘ಬಹುಭಾಷಾ ನಿಘಂಟು ಸಿದ್ಧಗೊಳಿಸಲು ಶಾಲಾ ಶಿಕ್ಷಕ ಪಿ.ಕೆ. ಜಯರಾಜ್ ಮತ್ತು ಮಂಗಳೂರಿನ ಉಪನ್ಯಾಸಕಿ ಮಂಜುಳಾ ಪಿ ಸಹಕರಿಸುತ್ತಿದ್ದಾರೆ. ಕಾಸರಗೋಡಿನಲ್ಲಿ ಕನ್ನಡಿಗರು ಈಗ ಅಲ್ಪಸಂಖ್ಯಾತರಾಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಇಲ್ಲಿನ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಮುಂದಿನ ಪೀಳಿಗೆಗೆ ದಾಟಿಸಲು ಈ ಬಗೆಯ ಯೋಜನೆಗಳು ನೆರವಾಗಲಿವೆ ಎಂಬುದು ಕೇಂದ್ರದ ಆಶಯ’ ಎಂದು ಶ್ರೀಧರನ್ ಹೇಳಿದರು.

ಮಲಯಾಳದಲ್ಲಿ ಕರ್ನಾಟಕದ ಜಾನಪದ ನಿಘಂಟು

ಕರ್ನಾಟಕದ ಜಾನಪದ ನಿಘಂಟು ಕೂಡ ಮಲಯಾಳಂನಲ್ಲಿ ಸಿದ್ಧಗೊಳ್ಳುತ್ತಿದೆ. ಇದಕ್ಕೆ ಹಾವೇರಿಯ ಜಾನಪದ ವಿಶ್ವವಿದ್ಯಾಲಯ ಪ್ರಕಟಿಸಿರುವ ನಿಘಂಟುವನ್ನು ಆಧಾರವಾಗಿ ಬಳಸಿಕೊಳ್ಳಲಾಗುತ್ತಿದೆ. ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಪ್ರೊ. ಚಿನ್ನಪ್ಪ ಗೌಡ ಮತ್ತು ಕುಪ್ಪಂ ದ್ರಾವಿಡ ವಿ.ವಿ ಕನ್ನಡ ವಿಭಾಗದ ಸಹ ಅಧ್ಯಾಪಕ ದುರ್ಗಾಪ್ರಸಾದ್ ಈ ನಿಘಂಟುವಿನ ಸಲಹಾ ಸಮಿತಿಯಲ್ಲಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಳಗೊಂಡಂತೆ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಜಾನಪದ ಪದಗಳ ಅರ್ಥ ಇದರಲ್ಲಿ ಇರುತ್ತದೆ ಎಂದು ಶ್ರೀಧರನ್ ತಿಳಿಸಿದರು.

ಪ್ರಭುಲಿಂಗ ನಾವದಗಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಅಡ್ವೊಕೇಟ್ ಜನರಲ್ ಹುದ್ದೆಗೆ ಹಿರಿಯ ವಕೀಲರಾದ ಪ್ರಭುಲಿಂಗ ಕೆ. ನಾವದಗಿ ರಾಜೀನಾಮೆ ಸಲ್ಲಿಸಿದ್ದಾರೆ.

ಅವರು ಭಾನುವಾರ ಮಧ್ಯಾಹ್ನ 12.30ಕ್ಕೆ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದರು.

ಬಿ.ಎಸ್. ಯಡಿಯೂರಪ್ಪ 2018ರಲ್ಲಿ ಮುಖ್ಯಮಂತ್ರಿಯಾದಾಗ ಪ್ರಭುಲಿಂಗ ನಾವದಗಿ (2018ರ ಮೇ 18) ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡಿದ್ದರು. ಯಡಿಯೂರಪ್ಪ ಬಹುಮತ ಸಾಬೀತುಪಡಿಸಲು ವಿಫಲವಾಗಿ ರಾಜೀನಾಮೆ ನೀಡಿದ ಕಾರಣ 2018ರ ಮೇ 31 ರಂದು ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು.

ಒಂದು ವರ್ಷದ ಬಳಿಕ 2019ರಲ್ಲಿ ಯಡಿಯೂರಪ್ಪ ಪುನಃ ಮುಖ್ಯಮಂತ್ರಿಯಾದ ನಂತರ ನಾವದಗಿ 2019ರ ಜುಲೈ 30ರಂದು ಅಡ್ವೊಕೇಟ್ ಜನರಲ್ ಆಗಿ ಮತ್ತೆ ನೇಮಕಗೊಂಡಿದ್ದರು. ನಂತರ ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲೂ ಮುಂದುವರಿದಿದ್ದರು.

ವಿಜಯೋತ್ಸವ: ದೊಡ್ಡಪ್ಪನ ಕೊಂದ ಯುವಕ

ಪ್ರಜಾವಾಣಿ ವಾರ್ತೆ

ಹೊಸಕೋಟೆ: ತಾಲ್ಲೂಕಿನ ಡಿ.ಶೆಟ್ಟಿಹಳ್ಳಿಯಲ್ಲಿ ಶನಿವಾರ ಚುನಾವಣೆ ಫಲಿತಾಂಶ ನಂತರ ವಿಜಯೋತ್ಸವ ವೇಳೆ ಪಟಾಕಿ ಹೊಡೆಯುವ ವಿಚಾರವಾಗಿ ನಡೆದ ಗಲಾಟೆಯಲ್ಲಿ ಯುವಕನೊಬ್ಬ ತನ್ನ ದೊಡ್ಡಪ್ಪನನ್ನೇ ಕೊಡಲಿಯಿಂದ ಹೊಡೆದು ಕೊಲೆ ಮಾಡಿದ್ದಾನೆ.

ಶೆಟ್ಟಿಹಳ್ಳಿ ಗ್ರಾಮದ ನಿವಾಸಿ ಕೃಷ್ಣಪ್ಪ (55) ಕೊಲೆಗೀಡಾದವರು. ಮೃತ ಕೃಷ್ಣಪ್ಪ ಅವರ ಸಹೋದರನ ಪುತ್ರ ಆದಿ (21) ಯನ್ನು ಬಂಧಿಸಲಾಗಿದೆ.

ಗಲಾಟೆಯಲ್ಲಿ ಕೃಷ್ಣಪ್ಪನ ಪುತ್ರ ಮತ್ತು ಸೊಸೆಗೆ ಗಂಭೀರ ಗಾಯಗಳಾಗಿದ್ದು, ಹೊಸಕೋಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಫಲಿತಾಂಶ ಪ್ರಕಟವಾದ ನಂತರ ಕಾಂಗ್ರೆಸ್‌ನ ವಿಜೇತ ಅಭ್ಯರ್ಥಿ ಶರತ್ ಬಚ್ಚೇಗೌಡ ಬೆಂಬಲಿಗರು ಡಿ.ಶೆಟ್ಟಿಹಳ್ಳಿಯಲ್ಲಿ ವಿಜಯೋತ್ಸವ ಹಮ್ಮಿಕೊಂಡಿದ್ದರು. ಪಟಾಕಿ ಹೊಡೆಯುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಕೃಷ್ಣಪ್ಪ ಜಗಳ ತೆಗೆದಿದ್ದಾರೆ. ಅವರನ್ನು ತಡೆಯಲು ಯತ್ನಿಸಿದ ಸಹೋದರ ಗಣೇಶ್ ವಿರುದ್ಧವೂ ತಿರುಗಿ ಬಿದ್ದಿದ್ದಾರೆ. ಆಗ ಗಣೇಶ್ ಅವರ ಪುತ್ರ ಆದಿ ತನ್ನ ದೊಡ್ಡಪ್ಪ ಕೃಷ್ಣಪ್ಪನನ್ನು ಕೊಡಲಿಯಿಂದ ಹೊಡೆದಿದ್ದು, ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮಧ್ಯೆ ಪ್ರವೇಶಿಸಿದ ಕೃಷ್ಣಪ್ಪ ಅವರ ಮಗ ಬಾಬೂ, ಸೊಸೆ ಮೇಲೂ ಹಲ್ಲೆ ಮಾಡಿದ್ದು, ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಡ್ಡಂಡ ಕಾರ್ಯಪ್ಪ ರಾಜೀನಾಮೆ

ಒಂದನೇ ಪುಟದಿಂದ...

ಹಲವು ವಿವಾದ

‘ರಂಗಾಯಣದಲ್ಲಿ ಪ್ರದರ್ಶಿಸಿದ ಡಾ.ಚಂದ್ರಶೇಖರ ಕಂಬಾರರ ‘ಸಾಂಬಶಿವ ಪ್ರಹಸನ’ ನಾಟಕದಲ್ಲಿ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಲಾಗಿದೆ’ ಎಂದು ಆರೋಪಿಸಿ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪ್ರಗತಿಪರರು ಪ್ರತಿಭಟಿಸಿದ್ದರು.

‘ನನ್ನ ನಾಟಕವನ್ನು ರಂಗಾಯಣದಲ್ಲಿ ಅಸಹ್ಯಕರವಾಗಿ ತಿರುಚಿ ಪ್ರದರ್ಶಿಸಲಾಗಿದೆ. ಈ ಬಗ್ಗೆ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳಬೇಕು’ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದರು.

‘ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ’ ಎಂದು ಆರೋಪಿಸಿ ಅಡ್ಡಂಡ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು.

ವಿಧಾನಸಭೆ ಚುನಾವಣೆ ಪ್ರಚಾರ ಭಾಷಣದಲ್ಲಿ ಪ್ರಚೋದನಕಾರಿಯಾಗಿ ಮಾತನಾಡಿದ ಆರೋಪದ ಮೇಲೆ ಅಡ್ಡಂಡ ವಿರುದ್ಧ ಕೊಡಗು ಜಿಲ್ಲೆಯಲ್ಲಿ 3 ಪ್ರಕರಣ ದಾಖಲಾಗಿವೆ. ‘ಬಿಜೆಪಿಗೆ ಕೊಡುವ ಮತ ಕಾಶಿ ತೀರ್ಥ ಯಾತ್ರೆಗೆ ಸಮಾನ. ಕಾಂಗ್ರೆಸ್‌ಗೆ ಕೊಡುವ ಮತ ಅತ್ಯಾಚಾರಿಗೆ, ಪೋಲಿಗೆ, ವ್ಯಭಿಚಾರಕ್ಕೆ ಕೊಡುವ ಮತಕ್ಕೆ ಸಮಾನ’ ಎಂದು ಕುಶಾಲನಗರದಲ್ಲಿ ಹೇಳಿಕೆ ನೀಡಿದ್ದರು.

ಬೆಂಗಳೂರು ಬಳಗದ ಪ್ಲೇಆಫ್ ಕನಸು ಜೀವಂತ; ಡುಪ್ಲೆಸಿ, ಮ್ಯಾಕ್ಸ್‌ವೆಲ್ ಮಿಂಚು

ಪಾರ್ನೆಲ್ ದಾಳಿಗೆ ಒಲಿದ ಗೆಲುವು

ರಾಜಸ್ಥಾನ ತಂಡದ ಬ್ಯಾಟರ್ ಬಟ್ಲರ್ (ಎಡ) ವಿಕೆಟ್ ಗಳಿಸಿದ ಸಂಭ್ರಮದಲ್ಲಿ ವೇಯ್ನ್ ಪಾರ್ನೆಲ್ –ಎಎಫ್‌ಪಿ ಚಿತ್ರ

ಜೈಪುರ (ಪಿಟಿಐ): ಎಡಗೈ ವೇಗಿ ವೇಯ್ನ್ ಪಾರ್ನೆಲ್ ನಿಖರ ದಾಳಿಯ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ರಾಜಸ್ಥಾನ ರಾಯಲ್ಸ್ ಎದುರು ಭರ್ಜರಿ ಜಯ ಸಾಧಿಸಿತು. ಇದರೊಂದಿಗೆ ಆರ್‌ಸಿಬಿಯ ಪ್ಲೇ ಆಫ್ ಆಸೆ ಜೀವಂತವಾಗುಳಿಯಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 112 ರನ್‌ಗಳ ಭಾರಿ ಅಂತರದಿಂದ ರಾಜಸ್ಥಾನ ವಿರುದ್ಧ ಜಯಿಸಲು ಪಾರ್ನೆಲ್ (10ಕ್ಕೆ3) ಕಾರಣರಾದರು.

ಟಾಸ್ ಗೆದ್ದ ಆರ್‌ಸಿಬಿ ತಂಡಕ್ಕೆ ಯಥಾಪ್ರಕಾರ ನಾಯಕ ಫಫ್ ಡುಪ್ಲೆಸಿ (55; 44ಎ) ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ (54; 33ಎ) ಆಸರೆಯಾದರು. ಅವರ ಆಟದಿಂದಾಗಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 171 ರನ್‌ಗಳನ್ನು ಗಳಿಸಿತು.

ಟೂರ್ನಿಯಲ್ಲಿ ಉತ್ತಮ ಬ್ಯಾಟಿಂಗ್ ಸಾಮರ್ಥ್ಯ ತೋರಿರುವ ರಾಜಸ್ಥಾನ ತಂಡಕ್ಕೆ ಈ ಮೊತ್ತ ದೊಡ್ಡ ಸವಾಲಾಗಿರಲಿಲ್ಲ. ಆದರೆ ಆರ್‌ಸಿಬಿಯ ಶಿಸ್ತಿನ ಬೌಲಿಂಗ್ ಮುಂದೆ ತಂಡವು 10.3 ಓವರ್‌ಗಳಲ್ಲಿ 59 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಅದರಲ್ಲೂ ಇಬ್ಬರೂ ಆರಂಭಿಕ ಬ್ಯಾಟರ್‌ಗಳು ಸೊನ್ನೆ ಸುತ್ತಿದ್ದು ದೊಡ್ಡ ಪೆಟ್ಟಾಯಿತು.

ಟೂರ್ನಿಯಲ್ಲಿ ಒಂದು ಶತಕದ ಸಹಿತ 575 ರನ್ ಗಳಿಸಿರುವ ಯಶಸ್ವಿ ಜೈಸ್ವಾಲ್ ಅವರಿಗೆ ಇನಿಂಗ್ಸ್‌ನ ಎರಡನೇ ಎಸೆತದಲ್ಲಿಯೇ ಮೊಹಮ್ಮದ್ ಸಿರಾಜ್ ಡಗ್‌ಔಟ್ ದಾರಿ ತೋರಿದರು. ಪಾರ್ನೆಲ್ ಹಾಕಿದ ಎರಡನೇ ಓವರ್‌ನಲ್ಲಿ ಜೊಸ್ ಬಟ್ಲರ್ ಹೊಡೆದ ಚೆಂಡನ್ನು ಅಮೋಘವಾಗಿ ಕ್ಯಾಚ್ ಮಾಡಿದ ಸಿರಾಜ್ ಸಂಭ್ರಮಿಸಿದರು. ಅದೇ ಓವರ್‌ನಲ್ಲಿ ನಾಯಕ ಸಂಜು ಸ್ಯಾಮ್ಸನ್ ಕಟ್ ಮಾಡುವ ಪ್ರಯತ್ನದಲ್ಲಿ ಅನುಜ್ ರಾವತ್‌ಗೆ ಕ್ಯಾಚಿತ್ತರು.

ಇದಾಗಿ ನಾಲ್ಕು ಓವರ್‌ಗಳ ನಂತರ ಒಂದಿಷ್ಟು ವಿಶ್ವಾಸ ಮೂಡುವಂತೆ ಬ್ಯಾಟಿಂಗ್ ಮಾಡುತ್ತಿದ್ದ ಜೋ ರೂಟ್ (10 ರನ್) ವಿಕೆಟ್ ಕೂಡ ಪಾರ್ನೆಲ್ ಪಾಲಾಯಿತು. ಕನ್ನಡಿಗ ದೇವದತ್ತ ಪಡಿಕ್ಕಲ್ ಕೂಡ ನಾಲ್ಕು ರನ್ ಗಳಿಸಿ ಬ್ರೇಸ್‌ವೆಲ್ ಬೌಲಿಂಗ್‌ನಲ್ಲಿ ಔಟಾದರು.

ಈ ನಡುವೆ ಶಿಮ್ರೊನ್ ಹೆಟ್ಮೆಯರ್ (35; 19ಎ, 4X1, 6X4) ದಿಟ್ಟತನ ತೋರಿದರು. ಏಕಾಂಗಿ ಹೋರಾಟ ನಡೆಸಿದರು. ಆದರೆ ಉಳಿದ ಬ್ಯಾಟರ್‌ಗಳು ಅವರಿಗೆ ಸೂಕ್ತ ಬೆಂಬಲ ನೀಡಲಿಲ್ಲ. ಆರ್‌ಸಿಬಿ ಬೌಲರ್‌ಗಳು ಹಿಡಿತ ಬಿಗಿಗೊಳಿಸಿದ್ದು ಫಲ ನೀಡಿತು.

ಫಫ್–ಮ್ಯಾಕ್ಸ್‌ವೆಲ್ ಮಿಂಚು: ಈ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಫಫ್ ಡುಪ್ಲೆಸಿ ಏಳನೇ ಅರ್ಧಶತಕ ದಾಖಲಿಸಿದರು. ಇದರೊಂದಿಗೆ 600 ರನ್‌ಗಳ ಗಡಿ ದಾಟಿದರು.

ವಿರಾಟ್ ಕೊಹ್ಲಿಯೊಂದಿಗೆ ಇನಿಂಗ್ಸ್ ಆರಂಭಿಸಿದ ಫಫ್ ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಕೊಹ್ಲಿ ತಮ್ಮ ನೈಜ ಆಟಕ್ಕಿಂತ ತುಸು ನಿಧಾನವಾಗಿಯೇ ರನ್ ಗಳಿಸಿದರು. ಆದರೆ ಫಫ್ ತಮ್ಮ ಬೀಸಾಟವನ್ನು ತಪ್ಪಿಸಲಿಲ್ಲ. ಏಳನೇ ಓವರ್‌ನಲ್ಲಿ ಕೊಹ್ಲಿ ಔಟಾದರು.

ಫಫ್ ಜೊತೆಗೂಡಿದ ಮ್ಯಾಕ್ಸ್‌ವೆಲ್ ಬಿರುಸಿನ ಹೊಡೆತಗಳನ್ನು ಆಡಿದರು. ರಿವರ್ಸ್ ಸ್ವೀಪ್, ಸ್ಕೂಪ್‌ಗಳನ್ನೂ ಪ್ರಯೋಗಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿದರು. ಮ್ಯಾಕ್ಸ್‌ವೆಲ್ ಈ ಟೂರ್ನಿಯಲ್ಲಿ 5ನೇ ಅರ್ಧಶತಕ ಪೂರೈಸಿದರು.

ಚೆನ್ನೈ ಮಣಿಸಿದ ಕೆಕೆಆರ್

ರಿಂಕು, ನಿತೀಶ್ ಅರ್ಧಶತಕ; 'ಪ್ಲೇ ಆಫ್' ಕನಸು ಜೀವಂತ

ನಿತೀಶ್ ರಾಣಾ (ಎಡ) ಮತ್ತು ರಿಂಕು ಸಿಂಗ್ –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ನಾಯಕ ನಿತೀಶ್ ರಾಣಾ ಮತ್ತು ರಿಂಕು ಸಿಂಗ್ ಅವರ ಅರ್ಧಶತಕಗಳು ಹಾಗೂ ಸ್ಪಿನ್ನರ್‌ಗಳ ಮೋಡಿಯ ನೆರವಿನಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡ, 'ಮಾಡು–ಮಡಿ' ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಚೆನ್ನೈ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 144 ರನ್ ಗಳಿಸಿತು. ಕೆಕೆಆರ್ 18.3 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು.

ಸಾಧಾರಣ ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡಕ್ಕೆ ದೀಪಕ್ ಚಾಹರ್ (27ಕ್ಕೆ 3) ಆರಂಭಿಕ ಆಘಾತ ನೀಡಿದರು. 33 ರನ್ ಗಳಿಸುವಷ್ಟರಲ್ಲಿ ತಂಡ ಮೂರು ವಿಕೆಟ್ ಕಳೆದುಕೊಂಡಿತು. ರಹಮಾನುಲ್ಲಾ ಗುರ್ಬಾಜ್ (1), ವೆಂಕಟೇಶ್ ಅಯ್ಯರ್ (9) ಮತ್ತು ಜೇಸನ್ ರಾಯ್ (12) ಬೇಗನೇ ಮರಳಿದರು.

ಆದರೆ ನಿತೀಶ್ (ಔಟಾಗದೆ 57, 44 ಎ.) ಮತ್ತು ರಿಂಕು (54 ರನ್, 43 ಎ.) ನಾಲ್ಕನೇ ವಿಕೆಟ್‌ಗೆ 99 ರನ್ ಸೇರಿಸಿ ತಂಡಕ್ಕೆ ಆಸರೆಯಾದರು. ಚೆನ್ನೈ ತಂಡದ ಬೌಲಿಂಗ್ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿದ ಇವರು ಗೆಲುವಿಗೆ ಕಾರಣರಾದರಲ್ಲದೆ, ತಂಡದ 'ಪ್ಲೇ ಆಫ್' ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡರು.

ಸ್ಪಿನ್ ಮೋಡಿ: ಕೋಲ್ಕತ್ತ ತಂಡದ ಜಯದಲ್ಲಿ ಸ್ಪಿನ್ ಜೋಡಿ ವರುಣ್ ಚಕ್ರವರ್ತಿ (36ಕ್ಕೆ 2) ಹಾಗೂ ಸುನಿಲ್ ನಾರಾಯಣ್ (15ಕ್ಕೆ 2) ಪಾತ್ರವೂ ಪ್ರಮುಖವಾಗಿತ್ತು. ಇವರು ಮಹೇಂದ್ರ ಸಿಂಗ್ ಧೋನಿ ಬಳಗವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದರು.

ಆರಂಭಿಕ ಬ್ಯಾಟರ್ ಡೆವೊನ್ ಕಾನ್ವೆ (30; 28ಎ, 4X3) ಹಾಗೂ ಶಿವಂ ದುಬೆ (ಔಟಾಗದೆ 48; 34ಎ, 4X1, 6X3) ಮಾತ್ರ ಮಹತ್ವದ ಕಾಣಿಕೆ ನೀಡಿದರು. ಉಳಿದ ಬ್ಯಾಟರ್‌ಗಳು ಅಬ್ಬರಿಸದಂತೆ ಕೋಲ್ಕತ್ತ ಬೌಲರ್‌ಗಳು ನೋಡಿಕೊಂಡರು.

ದುಬೆ ಹಾಗೂ ರವಿಂದ್ರ ಜಡೇಜ (20; 24ಎ) ಆರನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದ್ದರಿಂದ ತಂಡದ ಮೊತ್ತ 150ರ ಗಡಿ ಸಮೀಪ ಬಂದು ನಿಂತಿತು.

ಸಂಕ್ಷಿಪ್ತ ಸ್ಕೋರ್: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 144 (ಋತುರಾಜ್ ಗಾಯಕವಾಡ್ 17, ಡೆವೊನ್ ಕಾನ್ವೆ 30, ಅಜಿಂಕ್ಯ ರಹಾನೆ 16, ಶಿವಂ ದುಬೆ ಔಟಾಗದೆ 48, ರವೀಂದ್ರ ಜಡೇಜ 20, ಮಹೇಂದ್ರಸಿಂಗ್ ಧೋನಿ ಔಟಾಗದೆ 2, ವರುಣ್ ಚಕ್ರವರ್ತಿ 36ಕ್ಕೆ2, ಸುನಿಲ್ ನಾರಾಯಣ್ 15ಕ್ಕೆ2, ವೈಭವ್ ಅರೋರಾ 30ಕ್ಕೆ1, ಶಾರ್ದೂಲ್ ಠಾಕೂರ್ 15ಕ್ಕೆ1) **ಕೋಲ್ಕತ್ತ ನೈಟ್ ರೈಡರ್ಸ್:** 18.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 147 (ಜೇಸನ್ ರಾಯ್ 12, ನಿತೀಶ್ ರಾಣಾ ಔಟಾಗದೆ 57, ರಿಂಕು ಸಿಂಗ್ 54, ದೀಪಕ್ ಚಾಹರ್ 27ಕ್ಕೆ 3) ಫಲಿತಾಂಶ: ಕೆಕೆಆರ್‌ಗೆ 6 ವಿಕೆಟ್ ಗೆಲುವು

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 5ಕ್ಕೆ 171 (20 ಓವರ್)

ವಿರಾಟ್ ಸಿ ಜೈಸ್ವಾಲ್ ಬಿ ಆಸಿಫ್ 18 (19ಎ, 4X1)
ಡುಪ್ಲೆಸಿ ಸಿ ಜೈಸ್ವಾಲ್ ಬಿ ಆಸಿಫ್ 55 (44ಎ, 4X3, 6X2)
ಮ್ಯಾಕ್ಸ್‌ವೆಲ್ ಬಿ ಸಂದೀಪ್ 54 (33ಎ, 4X5, 6X3)
ಲೊಮ್ರೊರ್ ಸಿ ಜುರೆಲ್ ಬಿ ಜಂಪಾ 1 (2ಎ)
ಕಾರ್ತಿಕ್ ಎಲ್‌ಬಿಡಬ್ಲ್ಯು ಬಿ ಜಂಪಾ 0 (2ಎ)
ಬ್ರೇಸ್‌ವೆಲ್ ಔಟಾಗದೆ 9 (9ಎ)
ಅನುಜ್ ಔಟಾಗದೆ 29 (11ಎ, 4X3, 6X2)
ಇತರೆ: 5 (ವೈಡ್ 5)
ವಿಕೆಟ್ ಪತನ: 1-50 (ವಿರಾಟ್ ಕೊಹ್ಲಿ, 6.6), 2-119 (ಫಫ್ ಡುಪ್ಲೆಸಿ, 14.5), 3-120 (ಮಹಿಪಾಲ್ ಲೊಮ್ರೊರ್, 15.1), 4-120 (ದಿನೇಶ್ ಕಾರ್ತಿಕ್, 15.3), 5-137 (ಗ್ಲೆನ್ ಮ್ಯಾಕ್ಸ್‌ವೆಲ್, 17.3)
ಬೌಲಿಂಗ್: ಸಂದೀಪ್ ಶರ್ಮಾ 4-0-34-1, ಆ್ಯಡಂ ಜಂಪಾ 4-0-25-2, ಯಜುವೇಂದ್ರ ಚಾಹಲ್ 4-0-37-0, ರವಿಚಂದ್ರನ್ ಅಶ್ವಿನ್ 4-0-33-0, ಕೆ.ಎಂ.ಆಸಿಫ್ 4-0-42-2

ರಾಜಸ್ಥಾನ ರಾಯಲ್ಸ್ 59 (10.3 ಓವರ್)

ಜೈಸ್ವಾಲ್ ಸಿ ಕೊಹ್ಲಿ ಬಿ ಸಿರಾಜ್ 0 (2ಎ)
ಬಟ್ಲರ್ ಸಿ ಸಿರಾಜ್ ಬಿ ಪಾರ್ನೆಲ್ 0 (2ಎ)
ಸಂಜು ಸಿ ಅನುಜ್ ಬಿ ಪಾರ್ನೆಲ್ 4 (5ಎ, 4X1)
ರೂಟ್ ಎಲ್‌ಬಿಡಬ್ಲ್ಯು ಬಿ ಪಾರ್ನೆಲ್ 10 (15ಎ, 4X1)
ದೇವದತ್ತ ಸಿ ಸಿರಾಜ್ ಬಿ ಬ್ರೇಸ್‌ವೆಲ್ 4 (4ಎ, 4X1)
ಹೆಟ್ಮೆಯರ್ ಸಿ ಬ್ರೇಸ್‌ವೆಲ್ ಬಿ ಮ್ಯಾಕ್ಸ್‌ವೆಲ್ 35 (19ಎ, 4X1, 6X4)
ಧ್ರುವ ಸಿ ಲೊಮ್ರೊರ್ ಬಿ ಬ್ರೇಸ್‌ವೆಲ್ 1 (7ಎ)
ಅಶ್ವಿನ್ ರನೌಟ್ (ಸಿರಾಜ್/ಅನುಜ್) 0 (0ಎ) ಜಂಪಾ ಬಿ ಕರ್ಣ 2 (6ಎ)
ಸಂದೀಪ್ ಔಟಾಗದೆ 0 (1ಎ)
ಆಸಿಫ್ ಸಿ ಕೊಹ್ಲಿ ಬಿ ಕರ್ಣ 0 (2ಎ)
ಇತರೆ: 3 (ಲೆಗ್‌ಬೈ 1, ವೈಡ್ 2)
ವಿಕೆಟ್ ಪತನ: 1-1 (ಯಶಸ್ವಿ ಜೈಸ್ವಾಲ್, 0.2), 2-6 (ಜೋಸ್ ಬಟ್ಲರ್, 1.2), 3-7 (ಸಂಜು ಸ್ಯಾಮ್ಸನ್, 1.4), 4-20 (ದೇವದತ್ತ ಪಡಿಕ್ಕಲ್, 4.2), 5-28 (ಜೊ ರೂಟ್, 5.3), 6-31 (ಧ್ರುವ ಜುರೆಲ್, 6.6), 7-50 (ರವಿಚಂದ್ರನ್ ಅಶ್ವಿನ್, 7.6), 8-59 (ಶಿಮ್ರೊನ್ ಹೆಟ್ಮೆಯರ್, 9.5), 9-59 (ಆ್ಯಡಂ ಜಂಪಾ, 10.1), 10-59 (ಕೆ.ಎಂ.ಆಸಿಫ್, 10.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 2-0-10-1, ವೇಯ್ನ್ ಪಾರ್ನೆಲ್ 3-0-10-3, ಮೈಕಲ್ ಬ್ರೇಸ್‌ವೆಲ್ 3-0-16-2, ಕರ್ಣ ಶರ್ಮಾ 1.3-0-19-2, ಗ್ಲೆನ್ ಮ್ಯಾಕ್ಸ್‌ವೆಲ್ 1-0-3-1

ಫಲಿತಾಂಶ: ಆರ್‌ಸಿಬಿಗೆ 112 ರನ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	12	8	4	0	16	0.761
ಚೆನ್ನೈ	13	7	5	1	15	0.381
ಮುಂಬೈ	12	7	5	0	14	-0.117
ಲಖನೌ	12	6	5	1	13	0.309
ಬೆಂಗಳೂರು	12	6	6	0	12	0.166
ರಾಜಸ್ಥಾನ	13	6	7	0	12	0.140
ಕೋಲ್ಕತ್ತ	13	6	7	0	12	-0.256
ಪಂಜಾಬ್	12	6	6	0	12	-0.268
ಹೈದರಾಬಾದ್	11	4	7	0	8	-0.471
ಡೆಲ್ಲಿ	12	4	8	0	8	-0.686

ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ರಶೀದ್	ಗುಜರಾತ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	631

ಗ್ಲೆನ್ ಮ್ಯಾಕ್ಸ್‌ವೆಲ್ –ಪಿಟಿಐ ಚಿತ್ರ

ಸನ್‌ರೈಸರ್ಸ್ ಹೈದರಾಬಾದ್–ಟೈಟನ್ಸ್ ಹಣಾಹಣಿ ಇಂದು

ಪ್ಲೇ ಆಫ್‌ನತ್ತ ಗುಜರಾತ್ ಚಿತ್ತ

ರಶೀದ್ ಮತ್ತು ಹಾರ್ದಿಕ್ ಪಾಂಡ್ಯ

ಅಹಮದಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡವು ಸೋಮವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕಣಕ್ಕಿಳಿಯಲಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಜಯಿಸಿದರೆ ಗುಜರಾತ್ ತಂಡವು ಪ್ಲೇ ಆಫ್ ಪ್ರವೇಶಿಸಲಿದೆ. ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ತಂಡವು 12 ಪಂದ್ಯಗಳನ್ನು ಆಡಿ ಎಂಟರಲ್ಲಿ ಗೆದ್ದು, ನಾಲ್ಕರಲ್ಲಿ ಸೋತಿದೆ. ಇದರಿಂದಾಗಿ ಇನ್ನುಳಿದಿರುವ ಎರಡು ಪಂದ್ಯಗಳಲ್ಲಿ ಒಂದರಲ್ಲಿ ಜಯಿಸಿದರೂ ಪ್ಲೇಆಫ್ ಸ್ಥಾನ ಖಚಿತವಾಗಲಿದೆ.

ಆದರೆ ಸನ್‌ರೈಸರ್ಸ್ ತಂಡವು 11 ಪಂದ್ಯಗಳನ್ನು ಆಡಿ ನಾಲ್ಕರಲ್ಲಿ ಗೆದ್ದಿದೆ. ಉಳಿದದ್ದರಲ್ಲಿ ಸೋತಿದೆ. ಇದರಿಂದಾಗಿ ನಾಲ್ಕರ ಘಟ್ಟದ ಹಾದಿಯಿಂದ ಹೊರಬಿದ್ದಂತಾಗಿದೆ.

ಕಳೆದ ಪಂದ್ಯದಲ್ಲಿ ಗುಜರಾತ್ ತಂಡವು ಮುಂಬೈ ಇಂಡಿಯನ್ಸ್ ವಿರುದ್ಧ ಸೋತಿತ್ತು. ಆ ಪಂದ್ಯದಲ್ಲಿ ರಶೀದ್ ಖಾನ್ ಬೌಲಿಂಗ್‌ನಲ್ಲಿ ನಾಲ್ಕು ವಿಕೆಟ್ ಗಳಿಸಿದ್ದರು. ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದ ಅವರು ಹತ್ತು ಸಿಕ್ಸರ್ ಸಿಡಿಸಿದ್ದರು. ಆ ಪಂದ್ಯದಲ್ಲಿ ಉಳಿದ ಬೌಲರ್‌ಗಳು ಮುಂಬೈನ ಸೂರ್ಯಕುಮಾರ್ ಯಾದವ್ ಅವರನ್ನು ಕಟ್ಟಿಹಾಕುವಲ್ಲಿ ವಿಫಲರಾಗಿದ್ದರು.

ಬ್ಯಾಟಿಂಗ್‌ನಲ್ಲಿಯೂ ರಶೀದ್ ಬಿಟ್ಟರೆ ಡೇವಿಡ್ ಮಿಲ್ಲರ್ ಮಿಂಚಿದ್ದರು. ಆದರೆ ಅಗ್ರ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಚೀನಾ ತೈಪೆಗೆ ಮಣಿದ ಭಾರತ ತಂಡ

ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿ: ಮೊದಲ ಪಂದ್ಯದಲ್ಲಿ ನಿರಾಸೆ

ಪಿ.ವಿ.ಸಿಂಧು ಆಟದ ವೈಖರಿ– ಎಎಫ್‌ಪಿ ಚಿತ್ರ

ಸುಜೌ, ಚೀನಾ (ಪಿಟಿಐ): ಪಿ.ವಿ. ಸಿಂಧು ಅವರ ದಿಟ್ಟ ಹೋರಾಟ ಸೋಲಿನೊಂದಿಗೆ ಅಂತ್ಯವಾಗುವುದರೊಂದಿಗೆ ಭಾರತ ಬ್ಯಾಡ್ಮಿಂಟನ್ ತಂಡದವರು ಸುದೀರ್‌ಮನ್ ಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಚೀನಾ ತೈಪೆ ತಂಡದ ಎದುರು ನಿರಾಸೆ ಅನುಭವಿಸಿದರು.

ಭಾನುವಾರ ನಡೆದ ಟೂರ್ನಿಯ 'ಸಿ' ಗುಂಪಿನ ಮೊದಲ ಪಂದ್ಯದಲ್ಲಿ ಭಾರತ ತಂಡವು 1–4ರಿಂದ ಸೋತಿತು.

ಮಿಶ್ರ ಡಬಲ್ಸ್‌ನ ಮೊದಲ ಸ್ಪರ್ಧೆಯಲ್ಲಿ ತನಿಶಾ ಕ್ರಾಸ್ಟೊ ಹಾಗೂ ಕೆ.ಸಾಯಿ ಪ್ರಣೀತ್ ಜೋಡಿಯು ಉತ್ತಮ ಪೈಪೋಟಿಯನ್ನೇ ನೀಡಿತು. ಆದರೂ ಇವರಿಬ್ಬರು 21-18, 24-26, 6-21ರಿಂದ ವಿಶ್ವ ರ‍್ಯಾಂಕಿಂಗ್‌ನಲ್ಲಿ 30ನೇ ಸ್ಥಾನದಲ್ಲಿರುವ ಯಾಂಗ್ ಪೊ ಸುವನ್ ಮತ್ತು ಹು ಲಿಂಗ್ ಫಾಂಗ್ ಎದುರು ಎಡವಿದರು.

ಸಿಂಗಲ್ಸ್‌ನಲ್ಲಿ ಎಚ್‌.ಎಸ್. ಪ್ರಣಯ್ ನಿರೀಕ್ಷಿತ ಸಾಮರ್ಥ್ಯ ತೋರುವಲ್ಲಿ ವಿಫಲರಾದರು. ಅವರು 19-21, 15-21ರಿಂದ ಚೊ ಟಿಯೆನ್ ಚೆನ್ ಎದುರು ಮಣಿದರು. ಇದರೊಂದಿಗೆ ಭಾರತ 0–2ರಿಂದ ಹಿನ್ನಡೆ ಕಂಡಿತು. ಇದಾದ ಬಳಿಕ ಸ್ಪರ್ಧೆಯನ್ನು ಜೀವಂತವಾಗುಳಿಸುವ ಜವಾಬ್ದಾರಿ ಸಿಂಧು ಅವರ ಮೇಲೆ ಇತ್ತು.

ಪಂದ್ಯದ ಮಹಿಳೆಯರ ಸಿಂಗಲ್ಸ್‌ನಲ್ಲಿ ತಮ್ಮ ಪರಿಚಿತ ಎದುರಾಳಿ ತೈ ಜು ಯಿಂಗ್ ಅವರಿಗೆ ಮುಖಾಮುಖಿಯಾದ ಸಿಂಧು, ಜಿದ್ದಾಜಿದ್ದಿ ಪೈಪೋಟಿ ನಡೆಸಿದರು. ಆದರೆ ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ 14–21, 21–18, 17–21ರಿಂದ ಚೀನಾ ತೈಪೆ ಆಟಗಾರ್ತಿಗೆ ಮಣಿದರು.

ಮೊದಲ ಗೇಮ್‌ನಲ್ಲಿ ತೈ ಜು ಹೆಚ್ಚಿನ ಪ್ರಾಬಲ್ಯ ಮೆರೆದರು. ಪುಟಿದೆದ್ದ ಸಿಂಧು, ಎರಡನೇ ಗೇಮ್‌ಅನ್ನು ಕೈವಶ ಮಾಡಿಕೊಂಡರು.

ಮೂರನೇ ಗೇಮ್ ರಂಗೇರಿತು. ಒಂದು ಹಂತದಲ್ಲಿ 6–6 ಪಾಯಿಂಟ್ಸ್ ಸಮಬಲ ಸಾಗಿದ್ದ ಸ್ಪರ್ಧೆಯಲ್ಲಿ ತೈ ಜು 9–6ರ ಮುನ್ನಡೆ ಸಾಧಿಸಿದರು. ಫೋರ್‌ಹ್ಯಾಂಡ್ ಹೊಡೆತಗಳಿಂದ ಗಮನಸೆಳೆದ ಸಿಂಧು 10–10ರಿಂದ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರೂ ವಿರಾಮದ ವೇಳೆಗೆ ತೈಪೆ ಆಟಗಾರ್ತಿ ಒಂದು ಪಾಯಿಂಟ್ ಅಂತರದ ಮೇಲುಗೈ ಸಾಧಿಸಿದರು.

ವಿರಾಮದ ಬಳಿಕವೂ ಇಬ್ಬರ ಮಧ್ಯೆ ತೀವ್ರ ಪೈಪೋಟಿ ಮುಂದುವರಿಯಿತು. ಆದರೆ ಕೊನೆಯಲ್ಲಿ ಚುರುಕಿನ ಆಟವಾಡಿದ ತೈ ಜು ಪಂದ್ಯ ಗೆದ್ದುಕೊಂಡರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ 13-21, 21-17, 18-21ರಿಂದ ಲೀ ಯಾಂಗ್– ಯೆ ಹಾಂಗ್ ವೇ ಎದುರು ಸೋಲು ಕಂಡರು.

ಕೊನೆಯಲ್ಲಿ ಟ್ರಿಸಾ ಜೋಲಿ– ಗಾಯತ್ರಿ ಗೋಪಿಚಂದ್ ಮಹಿಳೆಯರ ಡಬಲ್ಸ್‌ನಲ್ಲಿ 21-15, 18-21, 13-21ರಿಂದ ಲೀ ಚಿಯಾ ಸಿನ್ – ತೆಂಗ್ ಚುನ್ ಸುನ್ ಅವರನ್ನು ಮಣಿಸಿ ಸಮಾಧಾನದ ಜಯ ತಂದುಕೊಟ್ಟರು. ಇದರಿಂದ ಭಾರತ 'ಕ್ಲೀನ್‌ಸ್ವೀಪ್' ಆಗುವುದು ತಪ್ಪಿತು.

ಸೋಮವಾರ ನಡೆಯಲಿರುವ ಸಿ ಗುಂಪಿನ ಪಂದ್ಯದಲ್ಲಿ ಭಾರತ ತಂಡವು ಮಲೇಷ್ಯಾ ಸವಾಲು ಎದುರಿಸಲಿದೆ.

ಶೂಟಿಂಗ್: ಮಾನಿನಿಗೆ 6ನೇ ಸ್ಥಾನ

ಬಾಕು, ಅಜರ್‌ಬೈಜಾನ್ (ಪಿಟಿಐ): ಭಾರತದ ಮಾನಿನಿ ಕೌಶಿಕ್ ಅವರು ಇಲ್ಲಿ ಕೊನೆಗೊಂಡ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯ ಮಹಿಳೆಯರ ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಆರನೇ ಸ್ಥಾನ ಗಳಿಸಿದರು.

ಟೂರ್ನಿಯ ಕೊನೆಯ ದಿನವಾದ ಭಾನುವಾರ ರ‍್ಯಾಪಿಡ್ ಫೈರ್ ಪಿಸ್ತೂಲ್ ಮತ್ತು ಮಹಿಳೆಯರ ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಸ್ಪರ್ಧಿಸಿದ್ದ ಭಾರತದ ಶೂಟರ್‌ಗಳು ಪದಕ ಜಯಿಸುವಲ್ಲಿ ವಿಫಲರಾದರು.

ಮಾನಿನಿ ಅವರು ಫೈನಲ್ಸ್‌ನಲ್ಲಿ 415.6 ಪಾಯಿಂಟ್ಸ್ ಗಳಿಸಿದರು. ಅರ್ಹತಾ ಸುತ್ತಿನಲ್ಲಿ ಅವರು 579 ಪಾಯಿಂಟ್ಸ್ ಗಳಿಸಿದ್ದರು. ಅಂಜುಮ್ ಮೌದ್ಗಿಲ್ ಅವರು ಅರ್ಹತಾ ಸುತ್ತಿನಲ್ಲಿ 573 ಪಾಯಿಂಟ್ಸ್ ಕಲೆಹಾಕಿ 18ನೇ ಮತ್ತು ಸಿಫ್ತ್ ಕೌರ್ ಸಮ್ರಾ (571) 21ನೇ ಸ್ಥಾನ ಗಳಿಸಿದರು.

ಪುರುಷರ ರ‍್ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಯಾರೊಬ್ಬರಿಗೂ ಫೈನಲ್ ತಲುಪಲು ಸಾಧ್ಯವಾಗಲಿಲ್ಲ. ವಿಜಯವೀರ್ ಸಿಧು ಒಂಬತ್ತು, ಅನೀಶ್ ಭಾನ್ವಾಲ 13 ಮತ್ತು ಅಂಕುರ್ ಗೋಯಲ್ 36ನೇ ಸ್ಥಾನ ಗಳಿಸಿದರು.

ಭಾರತ ತಂಡವು ಟೂರ್ನಿಯಲ್ಲಿ ಒಟ್ಟು ನಾಲ್ಕು (ತಲಾ ಒಂದು ಚಿನ್ನ, ಕಂಚು ಮತ್ತು ಎರಡು ಬೆಳ್ಳಿ) ಪದಕಗಳೊಂದಿಗೆ ಅಭಿಯಾನ ಕೊನೆಗೊಳಿಸಿತು. ಕರ್ನಾಟಕದ ದಿವ್ಯಾ ಟಿ.ಎಸ್ ಮತ್ತು ಸರಬ್ಜೋತ್ ಸಿಂಗ್ (10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗ) ಏಕೈಕ ಚಿನ್ನದ ಪದಕ ಗೆದ್ದವರು. ಹೃದಯ್ ಹಜಾರಿಕಾ ಮತ್ತು ನ್ಯಾನ್ಸಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಬೆಳ್ಳಿ ಪದಕಗಳನ್ನು ಗೆದ್ದರೆ, ರಿಧಮ್ ಸಂಗ್ವಾನ್ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚು ತಮ್ಮದಾಗಿಸಿಕೊಂಡಿದ್ದರು.

ಪ್ಯಾರಾ ಬ್ಯಾಡ್ಮಿಂಟನ್: ಪ್ರಮೋದ್‌ಗೆ ಚಿನ್ನ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ ಚಾಂಪಿಯನ್ ಭಾರತದ ಪ್ರಮೋದ್ ಭಗತ್ ಅವರು ಥಾಯ್ಲೆಂಡ್ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡು ಚಿನ್ನ ಗೆದ್ದುಕೊಂಡರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್‌ನ 'ಎಸ್‌ಎಲ್3' ವಿಭಾಗದ ಫೈನಲ್‌ನಲ್ಲಿ ಪ್ರಮೋದ್, ಇಂಗ್ಲೆಂಡ್‌ನ ಡೇನಿಯಲ್ ಬೆತೆಲ್ ವಿರುದ್ಧ ಜಯಿಸಿದರು. ಭಾರತದ ಆಟಗಾರ ಮೊದಲ ಗೇಮ್ 21–18 ರಲ್ಲಿ ಗೆದ್ದುಕೊಂಡರು. ಈ ವೇಳೆ ಗಾಯದ ಕಾರಣ ಡೇನಿಯಲ್ ಪಂದ್ಯದಿಂದ ಹಿಂದೆ ಸರಿದರು.

ಪುರುಷರ ಡಬಲ್ಸ್‌ನ 'ಎಸ್‌ಎಲ್4' ವಿಭಾಗದ ಫೈನಲ್‌ನಲ್ಲಿ ಪ್ರಮೋದ್–ಸುಖಂತ್ ಕದಮ್ ಜೋಡಿ 18–21, 21–14, 21–19 ರಲ್ಲಿ ಭಾರತದವರೇ ಆದ ನಿತೇಶ್ ಕುಮಾರ್– ತರುಣ್ ಎದುರು ಗೆದ್ದಿತು.

ಸುಹಾಸ್ ಯತಿರಾಜ್ ಅವರು 'ಎಸ್‌ಎಲ್4' ವಿಭಾಗದ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದರು. ಅವರು ಫೈನಲ್‌ನಲ್ಲಿ 21–14, 17–21, 21–11ರಲ್ಲಿ ಸುಖಂತ್ ಅವರನ್ನು ಮಣಿಸಿದರು.

ಸ್ಟ್ರೀಕ್‌ಗೆ ಕ್ಯಾನ್ಸರ್: ದಕ್ಷಿಣ ಆಫ್ರಿಕಾದಲ್ಲಿ ಚಿಕಿತ್ಸೆ

ಹೀತ್ ಸ್ಟ್ರೀಕ್

ನವದೆಹಲಿ (ಪಿಟಿಐ): ಜಿಂಬಾಬ್ವೆ ಕ್ರಿಕೆಟ್ ತಂಡದ ಮಾಜಿ ನಾಯಕ ಹೀತ್ ಸ್ಟ್ರೀಕ್ ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ದಕ್ಷಿಣ ಆಫ್ರಿಕಾದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಹೀತ್ ಅವರು ದಕ್ಷಿಣ ಆಫ್ರಿಕಾದಲ್ಲಿ ಖ್ಯಾತ ವೈದ್ಯರ ಬಳಿ ಚಿಕಿತ್ಸೆಯಲ್ಲಿದ್ದಾರೆ' ಎಂದು ಅವರ ಕುಟುಂಬವು ಭಾನುವಾರ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

'ತಾವು ಆಡುತ್ತಿದ್ದ ದಿನಗಳಲ್ಲಿ ಕ್ರಿಕೆಟ್ ಮೈದಾನದಲ್ಲಿ ಎದುರಾಳಿಗಳ ವಿರುದ್ಧ ಹೋರಾಡಿದ ರೀತಿಯಲ್ಲೇ ಈ ರೋಗದ ವಿರುದ್ಧ ಹೋರಾಟ ಮುಂದುವರಿಸುತ್ತಾರೆ' ಎಂದು ಹೇಳಿದೆ.

ಸ್ಟ್ರೀಕ್ ತೀವ್ರ ಅಸ್ವಸ್ಥರಾಗಿದ್ದು, ಮರಣಶಯ್ಯೆಯಲ್ಲಿದ್ದಾರೆ ಎಂಬ ಮಾಧ್ಯಮ ವರದಿಗಳು ಬಂದ ಬೆನ್ನಲ್ಲೇ ಕುಟುಂಬವು ಈ ಪ್ರಕಟಣೆ ಹೊರಡಿಸಿದೆ.

49 ವರ್ಷದ ಹೀತ್ ಅವರು 65 ಟೆಸ್ಟ್ ಹಾಗೂ 189 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಅದಿತಿ ಅಶೋಕ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಗಾಲ್ಫ್: ಜಂಟಿ 4ನೇ ಸ್ಥಾನದಲ್ಲಿ ಅದಿತಿ

ಕ್ಲಿಫ್ಟನ್, ನ್ಯೂಜೆರ್ಸಿ (ಎಎಫ್‌ಪಿ): ಬೆಂಗಳೂರಿನ ಅದಿತಿ ಅಶೋಕ್ ಅವರು ಎಲ್‌ಪಿಜಿಎ ಟೂರ್ 'ಕಾಗ್ನಿಜೆಂಟ್ ಫೌಂಡರ್ಸ್ ಕಪ್' ಗಾಲ್ಫ್ ಟೂರ್ನಿಯಲ್ಲಿ ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಇಲ್ಲಿನ ಅಪ್ಪರ್ ಮಾಂಟ್‌ಕ್ಲೇರ್ ಕಂಟ್ರಿ ಕ್ಲಬ್ ಕೋರ್ಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ಮೂರನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಅವರು 71 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಮೂರು ಸುತ್ತುಗಳ ಬಳಿಕ (69-68-71) ಒಟ್ಟು 208 ಸ್ಕೋರ್‌ಗಳೊಂದಿಗೆ ಇತರ ಇಬ್ಬರ ಜತೆ 4ನೇ ಸ್ಥಾನ ಹಂಚಿಕೊಂಡಿದ್ದಾರೆ.

ಇತರ ಸ್ಪರ್ಧಿಗಳಿಗಿಂತ ಮೂರು ಶಾಟ್‌ಗಳ ಮುನ್ನಡೆ ಸಾಧಿಸಿರುವ ಆಸ್ಟ್ರೇಲಿಯಾದ ಮಿನ್‌ಜೀ ಲೀ (204) ಅವರು ಅಗ್ರಸ್ಥಾನದಲ್ಲಿದ್ದು, ಇಲ್ಲಿ ಸತತ ಎರಡನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ಮೂರು ಸುತ್ತುಗಳಲ್ಲಿ ಅವರು ಕ್ರಮವಾಗಿ 68, 69 ಮತ್ತು 67 ಸ್ಟ್ರೋಕ್‌ಗಳನ್ನು ತೆಗೆದುಕೊಂಡಿದ್ದಾರೆ.

ಕೊರಿಯಾದ ಏಂಜೆಲ್ ಯಿನ್ ಮತ್ತು ರ‍್ಯು ಹಾಯೆ ರಾನ್ ಅವರು ತಲಾ 207 ಸ್ಕೋರ್‌ಗಳೊಂದಿಗೆ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ಎರಡನೇ ಸುತ್ತಿನ ಬಳಿಕ ಜಂಟಿ ಅಗ್ರಸ್ಥಾನದಲ್ಲಿದ್ದ ಆಸ್ಟ್ರೇಲಿಯಾದ ಸಾರಾ ಕೆಂಪ್ (211) 3ನೇ ಸುತ್ತಿನಲ್ಲಿ 75 ಸ್ಟ್ರೋಕ್‌ಗಳನ್ನು ಬಳಸಿದ್ದು, ಹಿನ್ನಡೆ ಅನುಭವಿಸಿದರು.

ಮ್ಯಾಕ್ಸ್ ಮುಲ್ಲರ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಕ್ಸ್ ಮುಲ್ಲರ್ ತಂಡವು ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮ್ಯಾಕ್ಸ್ ಮುಲ್ಲರ್ 8 ವಿಕೆಟ್‌ಗಳಿಂದ ಕಾರ್ಮೆಲ್ ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ಸಿಸಿಇ 47 ರನ್‌ಗಳಿಂದ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಕಾರ್ಮೆಲ್: 29.2 ಓವರ್‌ಗಳಲ್ಲಿ 98 (ಸಚಿನ್ ಎಸ್. 17; ಕ್ರಿಶ್ 17ಕ್ಕೆ 2, ಅಭ್ಯುದಯ್ ಭಾರ್ಗವ್ 17ಕ್ಕೆ 2, ಆರ್ಯ ಜೆ. ಗೌಡ 25ಕ್ಕೆ 2). ಮ್ಯಾಕ್ಸ್ ಮುಲ್ಲರ್: 12.3 ಓವರ್‌ಗಳಲ್ಲಿ 2 ವಿಕೆಟ್‌ಗೆ 100 (ವ್ರತಿನ್ 48, ಆರ್ಯ 29). ಫಲಿತಾಂಶ: ಮ್ಯಾಕ್ಸ್ ಮುಲ್ಲರ್ ತಂಡಕ್ಕೆ 8 ವಿಕೆಟ್‌ಗಳ ಜಯ
ಸಿಸಿಇ: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 192 (ಶ್ರೀಹಾನ್ ಅರಿಂಜಯ್ 69, ಅಥರ್ವ 52,; ಅರ್ಜುನ್ 33ಕ್ಕೆ 4). ಪ್ಯಾಂಥರ್ಸ್ ಅಕಾಡೆಮಿ: 30 ಓವರ್‌ಗಳಲ್ಲಿ 6 ಕ್ಕೆ 145 ಫಲಿತಾಂಶ: ಸಿಸಿಇಗೆ 47 ರನ್ ಜಯ

ಬೆಂಗಳೂರಿನಲ್ಲಿ ಜೂನ್- ಜುಲೈನಲ್ಲಿ ಆಯೋಜನೆ

ಸ್ಯಾಫ್ ಟೂರ್ನಿ: ಪಾಕಿಸ್ತಾನ ಭಾಗಿ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಜೂನ್- ಜುಲೈನಲ್ಲಿ ನಿಗದಿಯಾಗಿರುವ ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಷನ್ ಚಾಂಪಿಯನ್‌ಷಿಪ್‌ನಲ್ಲಿ (ಸ್ಯಾಫ್) ಭಾಗವಹಿಸುವುದಾಗಿ ಪಾಕಿಸ್ತಾನ ತಂಡ ದೃಢಪಡಿಸಿದೆ.

ಚಾಂಪಿಯನ್‌ಷಿಪ್ ಅನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸುವ ದೃಷ್ಟಿಯಿಂದ ಸ್ಯಾಫ್ ಕಾರ್ಯಕಾರಿ ಸಮಿತಿಯು ದಕ್ಷಿಣ ಏಷ್ಯಾ ವಲಯದ ಹೊರಗಿನಿಂದಲೂ ತಂಡಗಳನ್ನು ಆಹ್ವಾನಿಸುವ ನಿರ್ಧಾರವನ್ನು ಮಾರ್ಚ್‌ನಲ್ಲಿ ತೆಗೆದುಕೊಂಡಿತ್ತು. ಹೀಗಾಗಿ ಲೆಬನಾನ್ ಮತ್ತು ಕುವೈತ್ ತಂಡಗಳೂ ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ.

'ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಪಾಕ್ ತಂಡ ಪಾಲ್ಗೊಳ್ಳುವ ಕುರಿತು ನಮಗೇನೂ ಸಮಸ್ಯೆ ಕಾಣಿಸುತ್ತಿಲ್ಲ. ಭಾರತದ ಬ್ರಿಡ್ಜ್ ತಂಡ ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ವಲಯಮಟ್ಟದ ಟೂರ್ನಿಯೊಂದರಲ್ಲಿ ಭಾಗವಹಿಸಿತ್ತು. ಹೀಗಾಗಿ ಅಲ್ಲಿಯ ತಂಡ ಇಲ್ಲಿಗೆ ಬರುವುದರಲ್ಲಿ ವೀಸಾ ಸಮಸ್ಯೆಯಾಗದು' ಎಂದು ಎಐಎಫ್‌ಎಫ್ ಪ್ರಧಾನ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಹೇಳಿದ್ದಾರೆ.

ಎಂಟು ತಂಡಗಳ ಟೂರ್ನಿಯು ಜೂನ್ 21ರಿಂದ ಜುಲೈ 4ರವರೆಗೆ ನಡೆಯಲಿದೆ.

ಆತಿಥೇಯ ಭಾರತ, ನೇಪಾಳ, ಭೂತಾನ್, ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಇನ್ನುಳಿದ ತಂಡಗಳು. ಫಿಫಾದಿಂದ ಅಮಾನತಾಗಿರುವ ಶ್ರೀಲಂಕಾ ಹಾಗೂ ಸೆಂಟ್ರಲ್ ಏಷ್ಯಾ ಫುಟ್‌ಬಾಲ್ ಫೆಡರೇಷನ್ ಸೇರಲು ಕೆಲವು ವರ್ಷಗಳ ಹಿಂದೆ ಸ್ಯಾಫ್ ತೊರೆದಿರುವ ಅಫ್ಗಾನಿಸ್ತಾನ ದೇಶದ ತಂಡಗಳು ಟೂರ್ನಿಯಲ್ಲಿ ಭಾಗವಹಿಸುತ್ತಿಲ್ಲ. ಸ್ಯಾಫ್ ಟೂರ್ನಿಯನ್ನು ಭಾರತ ದಾಖಲೆಯ ಎಂಟು ಬಾರಿ ಗೆದ್ದುಕೊಂಡಿದೆ. ನಾಲ್ಕನೇ ಬಾರಿ ದೇಶವು ಟೂರ್ನಿಗೆ ಆತಿಥ್ಯ ವಹಿಸಿಕೊಂಡಿದೆ. ಬುಧವಾರ ಟೂರ್ನಿಯ ಡ್ರಾ ನಡೆಯಲಿದೆ.

ಬ್ರಿಡ್ಜ್ ತಂಡಕ್ಕೆ ರಾಜಾತಿಥ್ಯ

ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನದಿಂದ ಉಂಟಾಗಿರುವ ಪ್ರಕ್ಷುಬ್ಧ ಸ್ಥಿತಿಯ ನಡುವೆಯೂ ಭಾರತದ ಬ್ರಿಡ್ಜ್ ತಂಡಕ್ಕೆ ಪಾಕಿಸ್ತಾನದಲ್ಲಿ ರಾಜಾತಿಥ್ಯ ದೊರೆತಿದೆ.

ಎಚ್‌ಸಿಎಲ್ ಸಂಸ್ಥಾಪಕ ಶಿವ ನಾಡಾರ್ ಅವರ ಪತ್ನಿ ಕಿರಣ್ ನಾಡಾರ್, ಅನುಭವಿ ಸ್ಪರ್ಧಿ ರಾಜೇಶ್ವರಿ ತಿವಾರಿ ಅವರನ್ನೊಳಗೊಂಡ 32 ಮಂದಿಯ ತಂಡ ಭಾರತ ತಂಡವು ವಲಯ ಟೂರ್ನಿಯಲ್ಲೂ ಪಾಲ್ಗೊಳ್ಳಲು ಮೇ 4ರಂದು ಲಾಹೋರ್‌ಗೆ ತೆರಳಿತ್ತು. ಈ ತಂಡಕ್ಕೆ ಅಲ್ಲಿಯ ಪರ್ಲ್ ಕಾಂಟಿನೆಂಟಲ್ ಹೆಸರಿನ ಪಂಚತಾರಾ ಹೊಟೇಲ್‌ನಲ್ಲಿ ವಸತಿ ಕಲ್ಪಿಸಲಾಗಿತ್ತು.

'ನಾವು ಇಲ್ಲಿ ಅತ್ಯಂತ ಸುರಕ್ಷಿತವಾಗಿದ್ದೆವು. ಅಲ್ಲಿಯ ಸ್ಥಿತಿ ನನಗೇನೂ ಭಿನ್ನ ಅನಿಸಲಿಲ್ಲ' ಎಂದು ತಿವಾರಿ ಅವರು ಹೇಳಿದ್ದಾರೆ.

ತಂಡದಲ್ಲಿದ್ದ ಕೆಲವರು ಶನಿವಾರ ಭಾರತಕ್ಕೆ ಮರಳಿದರೆ, ಇನ್ನು ಕೆಲವರು ಭಾನುವಾರ ಬಂದಿಳಿದಿದ್ದಾರೆ.

ಕುಸ್ತಿಪಟುಗಳಾದ ವಿನೇಶಾ, ಬಜರಂಗ್ ಮತ್ತು ಸಾಕ್ಷಿ ಮಲಿಕ್ –ಪಿಟಿಐ ಚಿತ್ರ

ಐಒಎ ನಿರ್ಧಾರ: ಸ್ವಾಗತ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಸಂಪೂರ್ಣ ಆಡಳಿತವನ್ನು ಪ್ರತ್ಯೇಕ ಸಮಿತಿಗೆ ಹಸ್ತಾಂತರಿಸುವಂತೆ ಐಒಎ ಸೂಚಿಸಿರುವುದನ್ನು ಪ್ರತಿಭಟನೆನಿರತ ಕುಸ್ತಿಪಟುಗಳು ಸ್ವಾಗತಿಸಿದ್ದಾರೆ.

ಹಣಕಾಸಿಗೆ ಸಂಬಂಧಿಸಿದ ಲೆಕ್ಕಪತ್ರ ಮತ್ತು ಇತರ ಅಧಿಕೃತ ಕಡತಗಳನ್ನು ಡಬ್ಲ್ಯುಎಫ್‌ಐ, ತಾನು ನೇಮಿಸಿರುವ ಪ್ರತ್ಯೇಕ ಸಮಿತಿಗೆ ಹಸ್ತಾಂತರಿಸಬೇಕು ಎಂದು ಭಾರತ ಒಲಿಂಪಿಕ್ ಸಂಸ್ಥೆಯು ಶನಿವಾರ ಫೆಡರೇಷನ್‌ನ ಮಹಾ ಪ್ರಧಾನ ಕಾರ್ಯದರ್ಶಿ ವಿ.ಎನ್. ಪ್ರಸೂದ್ ಅವರಿಗೆ ಸೂಚಿಸಿತ್ತು.

ಪ್ರತ್ಯೇಕ ಸಮಿತಿಗೆ ಈಗಾಗಲೇ ಎಲ್ಲ ರೀತಿಯ ಸಹಕಾರ ನೀಡುತ್ತಿದ್ದು, ಐಒಎಯ ಸೂಚನೆಯನ್ನು ಪಾಲಿಸುವುಕ್ಕೆ ಯಾವುದೇ ಸಮಸ್ಯೆಯಿಲ್ಲ ಎಂದು ಫೆಡರೇಷನ್ ಸ್ಪಷ್ಟಪಡಿಸಿತ್ತು.

'ಇದು (ಡಬ್ಲ್ಯುಎಫ್‌ಐನ ಹಾಲಿ ಆಡಳಿತದ ವಿಸರ್ಜನೆ) ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟದಲ್ಲಿ ಸಿಕ್ಕ ಮೊದಲ ಯಶಸ್ಸು. ಇದು ನಮಗೆ ದೊರೆತ ಗೆಲುವು. ನ್ಯಾಯ ಲಭಿಸುವವರೆಗೆ ಹೋರಾಟ ಮುಂದುವರಿಯಲಿದೆ' ಎಂದು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಹೇಳಿದ್ದಾರೆ.